ನವೆಂಬರ್ 23, 2025
41ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

2012
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಸೈಕೋ ಕಿಲ್ಲರ್ ರವಿರೆಡ್ಡಿ!

# ಡಬಲ್ ಮರ್ಡರ್ ಹಂತಕನ ಕಾಲಿಗೆ ಪೊಲೀಸ್ ಫೈರಿಂಗ್!







## ಸಲಿಂಗ ಕಾಮಕ್ಕೆ ಅಡ್ಡಿಯಾದ ಮಗುವನ್ನೇ ಕೊಂದಳು!

## ದೆಹಲಿ: 'ವೈಟ್ ಕಾಲರ್' ಭಯೋತ್ಪಾದಕರಾದ ವೈದ್ಯರು!



## ಕನಕಪುರದಲ್ಲಿ ರೌಡಿ ಚಿರಂಜೀವಿ ಕಗ್ಗೊಲೆ!

## ಬಿಹಾರದ ಸೋಲಿಗೆ ಬೆಚ್ಚಿಬಿದ್ದ ಕೈ ಲೀಡರ್ಸ್!

## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

1975ರಲ್ಲಿ 'ಶಿಕ್ಷಣ ಸುಧಾರಕ'
(ಮೊಟ್ಟ ಮೊದಲ ಶಿಕ್ಷಣ ಪಾಕ್ಷಿಕ)

1984ರಲ್ಲಿ 'ಪ್ರದೇಶ ಸಮಾಚಾರ'
(ದಿನಪತ್ರಿಕೆ)

1985ರಲ್ಲಿ 'ಪೊಲೀಸ್ ನ್ಯೂಸ್'
(ಕನ್ನಡ ವಾರಪತ್ರಿಕೆ)

1987ರಲ್ಲಿ 'ಪೊಲೀಸ್ ನ್ಯೂಸ್'
(ತಮಿಳು, ಹಿಂದಿ, ಇಂಗ್ಲೀಷ್)

1989ರಲ್ಲಿ 'ಲೋಕವಾಣಿ'
(ಕನ್ನಡ ದೈನಿಕ)

1990ರಲ್ಲಿ 'ಮಂಗಳೂರು ಮಿತ್ರ'
(ಮಂಗಳೂರಿನ ಮೊಟ್ಟ ಮೊದಲ ಸಂಜೆ ದೈನಿಕ)

1992ರಲ್ಲಿ 'ಕರ್ನಾಟಕ ಮಲ್ಲ'
(ಮುಂಬೈನಲ್ಲಿ ಪ್ರಕಟಿತ ಮೊಟ್ಟ ಮೊದಲ ಕನ್ನಡ ದೈನಿಕ)

1996ರಲ್ಲಿ 'ಆದರ್ಶ ಗಂಡ ಹೆಂಡತಿ'
(ಕನ್ನಡ ಮಾಸಪತ್ರಿಕೆ)

1997ರಲ್ಲಿ 'ಕ್ರೀಡಾ ಸಮಯ'
(ಕನ್ನಡ ಮಾಸಿಕ)

1999ರಲ್ಲಿ 'ಶುಭದಿನ'
(ಕನ್ನಡ ವಾಣಿಜ್ಯ ದೈನಿಕ)

1999 ರಲ್ಲಿ 'ಸಿಟಿ ಟುಡೆ'
(ಇಂಗ್ಲೀಷ್ ಸಂಜೆ ದೈನಿಕ)

'ಪೊಲೀಸ್ ನ್ಯೂಸ್'
(ಸಪ್ಲಿಮೆಂಟರಿ)

'ದೇಗುಲ ಪ್ರಭೆ'
(ಕನ್ನಡ ಮಾಸಿಕ)

**ಸಂಸ್ಥಾಪಕ ಸಂಪಾದಕರ ಸವಿನೆನಪಿನಲ್ಲಿ......**



## ಲಯನ್ ಎಂ. ಮಲ್ಲಿಕಾರ್ಜುನಯ್ಯ

ಸಂಸ್ಥಾಪಕ ಸಂಪಾದಕರು

ಜನನ : 29-03-1954 ಮರಣ : 22-11-2005

**ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು**

- ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು
- ಕಾರ್ಯನಿರತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
- ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
- ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
- ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
- ಬಸವ ಬಳಗ - ಸಂಸ್ಥಾಪಕರು, ಅಧ್ಯಕ್ಷರು
- ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
- ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಅಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

'ಸಾಧಕರು'
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94

'ವಿಶಿಷ್ಟ ಸೇವಾ ಪದಕ'
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)

'ವೈದ್ಯ ಸಾಹಿತ್ಯ ಸಾಧಕ'
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)

'ಮುದ್ರಣ ಕಲೆ ಸಾಧಕ'
(ಯೂರೋಪ್ ಕನ್ನಡ ಬಳಗ)

'ಶಾಂತಿ ಧೂತ'
(ಇಂಡಿಯನ್ ಕಲ್ಚರಲ್ ಅಕಾಡೆಮಿ)

'ಕನ್ನಡ ರತ್ನ'
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)

'ಪತ್ರಿಕೋದ್ಯಮಿ ಶಿವರತ್ನ'
(ವೀರಶೈವ ವಿಚಾರ ವೇದಿಕೆ)

'ಕರ್ನಾಟಕ ಮಲ್ಲ'
(ಮುಂಬೈ, ಕನ್ನಡ ಬಳಗ)

'ಬಹುಮುಖಿ'
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)

'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'

# ಶಾಲಾ ಮಕ್ಕಳಿಗೆ 'ಫೊರೆನ್ಸಿಕ್ ಲ್ಯಾಬ್' ಕಾರ್ಯ ವೈಖರಿ ಪರಿಚಯಿಸಿದ್ದ ಸಂಪಾದಕರು!




ನಮ್ಮ ಸಂಪಾದಕರು ಪೊಲೀಸ್ ಠಾಣೆಗಳಿಂದ ಬಂದಂತ ಎಫ್ ಐಆರ್ ಕಾಪಿ ಇಟ್ಟುಕೊಂಡು ಅದನ್ನಷ್ಟೇ ಸುದ್ದಿ ಮಾಡಲು ಬಿಡುತ್ತಿರಲಿಲ್ಲ.




ಸದರಿ ಎಫ್ ಐ ಆರ್ ಕಾಪಿ, ಪ್ರೆಸ್ ನೋಟ್ ಆಧಾರವಾಗಿಟ್ಟುಕೊಂಡು ಘಟನಾ ಸ್ಥಳಕ್ಕೆ ತೆರಳಿ, ಕೊಲೆಯದವರು ಮತ್ತು ಕೊಲೆ ಆರೋಪ ಹೊತ್ತವರು ಎರಡೂ ಕಡೆ ಓಡಾಡಿ ಮಾಹಿತಿ ಸಂಗ್ರಹಿಸಿ 'ಸತ್ಯಾಂಶ'ವನ್ನು ಹೆಕ್ಕಿ ವರದಿ ಮಾಡುವಂತೆ ಅಗ್ರ ಹಿಸುತ್ತಿದ್ದರು. ನಾವು ಅವರ ಆದೇಶ ಪಾಲಿಸುತ್ತಿದ್ದೆವು. ಯಾವುದೇ ಅಪರಾಧ ಘಟಿಸಿದಾಗ, ಪತ್ತೆ ಕಾರ್ಯದಲ್ಲಿ ಮಹತ್ತರ ಪಾತ್ರ ವಹಿಸುವುದು ಟೆಕ್ನಿಕಲ್ ಎವಿಡೆನ್ಸ್... ಫೋರೆನ್ಸಿಕ್ ತಜ್ಞರ ನೆರವಿಲ್ಲದೆ ಪೊಲೀಸ್ ಆಫೀಸರ್ಸ್ ಏನೂ ಆಡುವುದಕ್ಕೆ ಆಗುವುದಿಲ್ಲ. ನಮ್ಮ ಸಂಪಾದಕರು ಇದನ್ನೆಲ್ಲಾ





ನಮಗೆ ಮನವರಿಕೆ ಮಾಡಿಕೊಟ್ಟು ಸಂಬಂಧಪಟ್ಟ ಇಲಾಖೆ ಮುಖ್ಯಸ್ಥರ ಪರಿಚಯಿಸುತ್ತಿದ್ದರು.

ಅಲ್ಲದೆ, ಮಾಸ ಮಾಸ ಸಾರ್ವಜನಿಕವಾಗಿ ಜನ ಜಾಗೃತಿ ಸಭೆ ನಡೆಸುತ್ತಿದ್ದಾಗಲೂ ಅಲ್ಲಿ ಇಲಾಖೆ ಮುಖ್ಯಸ್ಥರಿಂದ ಈ ಬಗ್ಗೆ ಭಾಷಣ ಮೂಲಕ

☞ 3

# ಮೇಕೆದಾಟು ಯೋಜನೆ ಯಶಸ್ವಿ ಆಗಲಿ ಅಂತ ಹಾರೈಸೋಣ...



ಸಂಪಾದಕ
**ಎಂ. ರಾಹುಲ್**

ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ಸದಾ ಕಾಲು ಕೆರೆದುಕೊಂಡು ನಮ್ಮ ಜೊತೆ ಜಗಳ ವಾಡೋ ತಮಿಳುನಾಡು ಸರ್ಕಾರಕ್ಕೆ ಸುಪ್ರೀಂಕೋರ್ಟ್‌ನಲ್ಲಿ ಇದೀಗ ಭಾರೀ ಮುಖಭಂಗವಾಗಿದೆ. ಮೇಕೆದಾಟು ಯೋಜನೆಯ ಡಿಪಿಆರ್ ವಿರೋಧಿಸಿ ತಮಿಳುನಾಡು ಸಲ್ಲಿಸಿದ್ದ ಅರ್ಜಿ ಮಾನ್ಯ ಸುಪ್ರೀಂ ಕೋರ್ಟ್‌ನಲ್ಲಿ ವಜಾಗೊಂಡಿದೆ.

ಕಾವೇರಿ ವಿಚಾರದಲ್ಲಿ ಸದಾ ಕಾಲು ಕೆರೆದುಕೊಂಡು ಕಿರಿಕ್ಕು ಮಾಡುವ ತಮಿಳುನಾಡು ಸರ್ಕಾರಕ್ಕೆ ಸುಪ್ರೀಂ ಕೋರ್ಟ್‌ನಲ್ಲಿ ಭಾರೀ ಮುಖಭಂಗವಾಗಿದೆ. ಮೇಕೆದಾಟು ಯೋಜನೆಯ ಡಿಪಿಆರ್ ವಿರೋಧಿಸಿ ತಮಿಳುನಾಡು ಸಲ್ಲಿಸಿದ್ದ ಅರ್ಜಿ ವಜಾಗೊಂಡಿದೆ. ಇದರಿಂದ ರಾಜ್ಯದ ಯೋಜನೆಗೆ ಎದುರಾಗಿದ್ದ ಆರಂಭಿಕ ಸವಾಲು ನಿವಾರಣೆ ಆಗಿದೆ.



ಕಾವೇರಿ ಕನ್ನಡ ನಾಡಿನ ಜೀವನದಿ...ಹಳೇ ಮೈಸೂರು ಭಾಗದ ಜೀವನಾಡಿ... ಮಾತ್ರವಲ್ಲ, ಬೆಂಗಳೂರು ಮಹಾನಗರಿಯ ಜನತೆಯ ದಾಹ ನೀಗಿಸುವ ವರದಾಹಿ ಕಾವೇರಿ. ಪ್ರತಿ ಮಳೆ ಗಾಲದಲ್ಲೂ ಅಪಾರ ಪ್ರಮಾಣದ ಕಾವೇರಿ ನೀರು ವ್ಯರ್ಥವಾಗಿ ತಮಿಳುನಾಡಲ್ಲಿ ಸಮುದ್ರದ ಪಾಲಾಗುತ್ತಿತ್ತು. ಹೀಗಾಗಿ ಹೆಚ್ಚುವರಿ ನೀರನ್ನು ಸದ್ಬಳಕೆ ಮಾಡಿಕೊಳ್ಳಲು ಯೋಚಿಸಿ ಕರ್ನಾಟಕ ಸರ್ಕಾರ ಮೇಕೆದಾಟು ಬಳಿ ಕಾವೇರಿ ನದಿಗೆ ಅಡ್ಡಲಾಗಿ ಅಣೆಕಟ್ಟು ಕಟ್ಟಲು ಯೋಜನೆ ರೂಪಿಸಿತು.

ಈ ಸಂಬಂಧ ಡಿಪಿಆರ್ ಅನ್ನು ಸಿದ್ದಪಡಿಸಿತ್ತು. ಇದರ ಬೆನ್ನಲ್ಲೇ ಕಾವೇರಿ ವಿಚಾರದಲ್ಲಿ ಸದಾ ಕಾಲು ಕರೆದುಕೊಂಡು ಕ್ಯಾತೆ ತೆಗೆಯುವ ತಮಿಳುನಾಡು, ಮೇಕೆದಾಟು ವಿಚಾರಕ್ಕೂ ಅಡ್ಡಗಾಲು ಹಾಕಿತ್ತು. ಹಾಗೂ ಈ ಯೋಜನೆಯನ್ನು ವಿರೋಧಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಆದರೀಗ ತಮಿಳುನಾಡು ಸರ್ಕಾರಕ್ಕೆ ಸುಪ್ರೀಂಕೋರ್ಟ್‌ನಲ್ಲಿ ಭಾರೀ ಮುಖಭಂಗವಾಗಿದೆ. ಅವರು ಸಲ್ಲಿಸಿದ್ದ ಅರ್ಜಿಯನ್ನು ಸರ್ವೋಚ್ಚ ನ್ಯಾಯಾಲಯ ವಜಾಗೊಳಿಸಿದ್ದು, ಇದರಿಂದ ಕರ್ನಾಟಕಕ್ಕೆ ದೊಡ್ಡ ಗೆಲುವು ಸಿಕ್ಕಂತಾಗಿದೆ!

ಕರ್ನಾಟಕ ಮತ್ತು ತಮಿಳುನಾಡು ನಡುವೆ ಮೇಕೆದಾಟು ಯೋಜನೆ ವಿವಾದದಲ್ಲಿ ಮಧ್ಯ ಪ್ರವೇಶಿಸಲು ಸುಪ್ರೀಂ ಕೋರ್ಟ್ ಮೊದಲು ನಿರಾಕರಿಸಿತ್ತು. ನಂತರ ಕರ್ನಾಟಕ ಸರ್ಕಾರ ವಾಸ್ತವವನ್ನು ಮನದಟ್ಟು ಮಾಡಿದ ಬಳಿಕ ಪುರಸ್ಕರಿಸುವತ್ತ ಮೊದಲ ಹೆಜ್ಜೆ ಇಟ್ಟಿದೆ ಎನ್ನಬಹುದು.

ಕರ್ನಾಟಕದ ಮೇಕೆದಾಟು ಅಣೆಕಟ್ಟು ಯೋಜನಾ ವರದಿಯನ್ನು ಪ್ರಶ್ನಿಸಿ ತಮಿಳುನಾಡು ಸುಪ್ರೀಂ ಕೋರ್ಟ್ ಗೆ ಅರ್ಜಿ ಸಲ್ಲಿಸಿತ್ತು. ಭಾರತದ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರನ್ನೊಳಗೊಂಡ ತ್ರಿಸದಸ್ಯ ಪೀಠವು ಇದರ ವಿಚಾರಣೆ ನಡೆಸಿದ್ದು. ತಮಿಳುನಾಡಿನ ಮನವಿ ಅಪ್ರಸ್ತುತ ಎಂದು ಅಭಿಪ್ರಾಯಪಟ್ಟು, ಅರ್ಜಿಯನ್ನು ತಿರಸ್ಕಾರ ಮಾಡಿದೆ. ಸದ್ಯ ಪ್ರಸ್ತಾವನೆಯು ತಜ್ಞ ಸಂಸ್ಥೆಗಳ ಪರಿಶೀಲನಾ ಹಂತದಲ್ಲಿದೆ.

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಸೇರಿದಂತೆ ಹಲವಾರು ಸಮಿತಿಗಳು ಇದರ ಬಗ್ಗೆ ಚರ್ಚೆ ನಡೆಸುತ್ತಿವೆ. ಅನುಮೋದನೆಗಳು ನ್ಯಾಯಾಂಗದಿಂದ ಬರಬೇಕಿರುವುದು ಅಲ್ಲ, ಅನುಮೋದನೆಗಳು ಕಾವೇರಿ ನೀರು ನಿಯಂತ್ರಣ ಸಮಿತಿ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದಿಂದ ಬರಬೇಕು. ಈ ಹಂತದಲ್ಲಿ ನ್ಯಾಯಾಲಯ ಮಧ್ಯಪ್ರವೇಶಿಸಲು ಸಾಧ್ಯವಿಲ್ಲ. ಏನಾದರೂ ಆಕ್ಷೇಪಣೆಗಳು ಇದ್ದರೆ ಅದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲು ಅವಕಾಶ ನೀಡಲಾಗಿದೆ. ಅಂದ ಹಾಗೆ, ಮೇಕೆದಾಟು ಯೋಜನೆಗಾಗಿ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು 'ನಮ್ಮ ನೀರು ನಮ್ಮ ಹಕ್ಕು' ಎಂದು ಈ ಹಿಂದೆಯೇ ಮೇಕೆದಾಟುವಿನಿಂದ ಬೆಂಗಳೂರಿನವರೆಗೆ ಪಾದಯಾತ್ರೆ ಮಾಡಿ, ರಾಜ್ಯದ ಜನರ ಮನಗೆದ್ದಿದ್ರು. ಸದ್ಯ ಸುಪ್ರೀಂಕೋರ್ಟ್‌ನಲ್ಲಿ ರಾಜ್ಯದ ಮೇಕೆದಾಟು ಯೋಜನೆಗೆ ಸಂಬಂಧಪಟ್ಟಂತೆ ಮೊದಲ ಗೆಲವು ಸಿಕ್ಕಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಡಿಸಿಎಂ ಡಿ.ಕೆ.ಶಿ.




ಅವರು ಮೇಕೆದಾಟು ಕರ್ನಾಟಕದ ನ್ಯಾಯಯುತ ಯೋಜನೆ. ಕರ್ನಾಟಕಕ್ಕೆ ನ್ಯಾಯ ಸಿಕ್ಕಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಒಟ್ಟಾರೆ. ಕಾವೇರಿ ನದಿ ಹಳೆಮೈಸೂರು ಭಾಗದ ಜೀವನಾಡಿ ಒಂದೆಡೆಯಾದ್ರೆ.. ರಾಜಕೀಯ ಪಕ್ಷಗಳಿಗೆ ಕಾವೇರಿ ರಾಜಕೀಯ ಅಸ್ತ್ರ ಅನ್ನೋದ್ರಲ್ಲಿ ಎರಡು ಮಾತಿಲ್ಲ, ಅದೇನೆ ಇರಲಿ... ಸದ್ಯ ಮೇಕೆದಾಟು ಯೋಜನೆಗೆ ಎದುರಾಗಿದ್ದ ಆರಂಭಿಕ ಸವಾಲಿನಲ್ಲಿ ರಾಜ್ಯಕ್ಕೆ ಮುನ್ನಡೆಯಾಗಿದ್ದು, ಕೇಂದ್ರ ಜಲ ಆಯೋಗದಿಂದ ಡಿಪಿಆರ್ ಗೆ ಅನುಮೋದನೆ ಸಿಗುತ್ತಾ ಎನ್ನುವುದನ್ನು ಕಾದುನೋಡಬೇಕಿದೆ.

ಇನ್ನೂ, ಶಕ್ತಿ ಸೌಧದೊಳಗೆ ಸಂಪುಟ ಪುನರ್ ರಚನೆ ಬಗ್ಗೆ ಭಾರಿ ಚರ್ಚೆ ನಡೆದಿದೆ ಎನ್ನಲಾಗಿದೆ. ಈ ಚರ್ಚೆ ನಡುವೆಯೇ ಸಿ.ಎಂ ಸಿದ್ದರಾಮಯ್ಯನವರು ದೆಹಲಿ ಪ್ರವಾಸ ನಿಗದಿಯಾಗಿದ್ದು, ನವೆಂಬರ್ 15ರಂದು ಸಿಎಂ ಸಿದ್ದು ದಿಲ್ಲಿಗೆ ತೆರಳಿದ್ದಾರೆ. ಸಿಎಂ ಅವರು ಖ್ಯಾತ ನ್ಯಾಯವಾದಿ ಕಪಿಲ್ ಸಿಬಲ್‌ಅವರ ಖಾಸಗಿ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಇದೇ ಹೊತ್ತಲ್ಲಿ ಸಂಪುಟ ಪುನರ್ ರಚನೆ ಕುರಿತು ಚರ್ಚೆ ನಡೆಸುವ ವಿಚಾರ ಮುನ್ನಲೆಗೆ ಬಂದಿದೆ.

ಸದ್ಯದಲ್ಲೇ ಸಂಪುಟದ ಪುನಾರಚನೆಯ ಕದನ ಕುತೂಹಲಕ್ಕೆ ಕ್ಲಾರಿಟಿ ಸಿಗುವ ಕಾಲ ಸನ್ನಿಹಿತವಾದಂತಿದೆ. ಇಂಥದ್ದೊಂದು ಸಿಹಿಗಾಳಿ ಕಾಂಗ್ರೆಸ್ ವಲಯದಲ್ಲಿ ಬೀಸುವ ಲಕ್ಷಣ ಗೋಚರಿಸುತ್ತಿದೆ. ಕೆಲ ದಿನಗಳ ಹಿಂದಷ್ಟೇ ಬಿಹಾರ ಎಲೆಕ್ಷನ್ ಮುಗಿದ ಕೂಡಲೇ ಸಂಪುಟ ಪುನರ್‌ರಚನೆ ಅಂತ ಖುದ್ದು ಸಿದ್ದರಾಮಯ್ಯನವರೇ ಸುಳಿವು ನೀಡಿದ್ದರು. ಇದೀಗ ಬಿಹಾರ ಎಲೆಕ್ಷನ್ ಕೂಡ ಮುಗಿದಿದ್ದು ಸಿಎಂ ಸಿದ್ದರಾಮಯ್ಯ ವೀಕೆಂಡ್ ನಲ್ಲಿ ದೆಹಲಿ ಟೂರ್ ಕೈಗೊಂಡಿದ್ದಾರೆ. ಮೊದಲು 3 ದಿನ ಪ್ರವಾಸ ಅಂತ ಹೇಳಲಾಗಿತ್ತು. ಆದರೀಗ ಪ್ರವಾಸ ಒಂದೇ ದಿನಕ್ಕೆ ಸೀಮಿತವಾಗಿದೆ.

ಗಮನಿಯ ವಿಚಾರವೇನೆಂದರೆ, ಸಿಎಂ ಸಿದ್ದರಾಮಯ್ಯ ಅವರಿಗೂ ಮೊದಲೇ ಅವರ ಆಪ್ತ ಸಚಿವ ಸತೀಶ್ ಜಾರಕಿಹೊಳಿ ದಿಢೀರ್ ದೆಹಲಿ ಪ್ರವಾಸ ಕೈಗೊಂಡು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲಾ ಭೇಟಿ ಮಾಡಿ ರಹಸ್ಯ ಮಾತುಕತೆ ನಡೆಸಿರುವುದು! ಬಲ್ಲ ಮೂಲಗಳ ಪ್ರಕಾರ, ಅವರು ಹೈ ಕಮ್ಯಾಂಡ್ಮುಂದೆ, ನವೆಂಬರ್ ನಲ್ಲಿ ನಾಯಕತ್ವ ಬದಲಾವಣೆಯ ಗೊಂದಲ, ಸಂಪುಟ ಪುನಾರಚನೆ ಹಾಗೂ ಕೆಪಿಸಿಸಿ ಅಧ್ಯಕ್ಷ ಸ್ಥಾನ ಕುರಿತು ತಮ್ಮ ಅಭಿಪ್ರಾಯವನ್ನು ಮಂಡಿಸಿದ್ದಾರೆ ಎನ್ನಲಾಗಿದೆ. ಸಚಿವ ಸತೀಶ್ ಜಾರಕಿಹೊಳಿ ಸದ್ದಿಲ್ಲದೆ ದೆಹಲಿ ಪ್ರವಾಸ ಮಾಡಿರುವುದು ಕಾಂಗ್ರೆಸ್ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಒಟ್ಟಾರೆ, ಸಂಪುಟ ವಿಸ್ತರಣೆ ಚೆಂಡು ಈಗ ಹೈಕಮಾಂಡ್ ಅಂಗಳದಲ್ಲಿದೆ. ಸಂಪುಟ ವಿಸ್ತರಣೆಗೆ ಹೈಕಮಾಂಡ್



ಸಮ್ಮತಿಸಿದ್ರೆ, ಸಿದ್ದರಾಮಯ್ಯ ಸ್ಥಾನ ಗಟ್ಟಿಯಾಗಲಿದೆ ಎಂಬ ಮಾತಿದೆ. ಈ ಮಧ್ಯೆ ಡಿಕೆಶಿ ಮತ್ಯಾವ ದಾಳ ಉರುಳಿಸ್ತಾರೋ ಗೊತ್ತಿಲ್ಲ.ಅವರು ಬಿಹಾರ ಎಲೆಕ್ಷನ್ ಮುಗಿದ ಬಳಿಕ... ಎಂದಿದ್ದು ಕುತೂಹಲ ಕೆರಳಿಸಿದೆ. ನವೆಂಬರ್ ಕ್ಲೈಮ್ಯಾಕ್ಸ್ ಏನಾಗುತ್ತೆ ಅನ್ನೋದೇ ಸದ್ಯದ ಕುತೂಹಲ......

-ಸಂ.


2 ☜

ಮಾಹಿತಿ ಹಂಚುತ್ತಿದ್ದರು. ಇದು ಎಷ್ಟು ಫೇಮಸ್ ಆಗಿತ್ತು ಅಂದ್ರೆ, ರಾಜ್ಯದ ವಿವಿಧ ಜಿಲ್ಲೆಗಳಿಂದ, ತಾಲೂಕುಗಳಿಂದ 'ಪೊಲೀಸ್ ನ್ಯೂಸ್' ಕಚೇರಿಗೆ ಫೋನ್ ಕರೆ ಬರುತ್ತಿತ್ತು. ನಮ್ಮ ಊರಿಗೂ ಬನ್ನಿ, ನಮಗೂ ತಿಳಿಸಿಕೊಡಿ... ಎಂದು ವಿನಂತಿಸುತ್ತಿದ್ದರು.

ಇದು ಬೆಂಗಳೂರು ಸಿಟಿಯ ಶಾಲಾ ಮಕ್ಕಳಿಗೆ ಜೈಲು ಅಪರಾಧಿಗಳ ಪರಿಚಯ, ಫೋರೆನ್ಸಿಕ್ ಲ್ಯಾಬ್ ಕಾರ್ಯ ವೈಖರಿ ಪರಿಚಯ ಮಾಡಿಸಿದ್ದ ಸವಿ ಸವಿ ನೆನಪು... ಅವತ್ತು ನಮ್ಮೊಂದಿಗೆ ಆಗಿನ ದಕ್ಷ ಪೊಲೀಸ್ ಅಧಿಕಾರಿ ಸುರೇಶ್ ಬಾಬು ಅವರಿದ್ದು ಮಾಹಿತಿ ಹಂಚಿದ್ದ ಘಟನೆ.... ಎಲ್ಲವೂ ನಿನ್ನೆ ಮೊನ್ನೆ ನಡೆದಂತಿದೆ....

☯





# ಸಲಿಂಗಕಾಮಕ್ಕೆ ಅಡ್ಡಿಯಾಗಿದ್ದ ಮಗುವನ್ನೇ ಕೊಂದುಬಿಟ್ಟಳು!

**ಸಲಿಂಗ ಕಾಮಕ್ಕಾಗಿ ತನ್ನ ಐದು ತಿಂಗಳ ಹಸುಮಗುವನ್ನೇ ಕೊಂದ ಮಹಾ ತಾಯಿ ಮತ್ತವಳ ಸಲಿಂಗಿ ಸ್ನೇಹಿತೆಯನ್ನು ಹೊಸೂರು ಕೆಲಮಂಗಲ ಠಾಣೆ ಪೊಲೀಸರು ಬಂಧಿಸಿದ್ದಾರೆ. ತಾನೇ ಹೆತ್ತ ಮುದ್ದಿನ ಕಂದಮ್ಮನನ್ನು ಕುತ್ತಿಗೆ ಹಿಸುಕಿ ಉಸಿರುಗಟ್ಟಿಸಿ ಕೊಲೆ ಮಾಡಿದ್ದ ಮಹಾ ತಾಯಿ ಭಾರತಿ, ಮಗು ಹಾಲು ಕುಡಿಯುತ್ತಿದ್ದಾಗ ನೆತ್ತಿಗೆ ಹತ್ತಿ ಸತ್ತು ಹೋಯಿತು ಎಂದು ಸುಳ್ಳು ಹೇಳಿದ್ದಳು! ಇದನ್ನು ನಂಬಿ ಮಗುವಿನ ಶವ ಸಂಸ್ಕಾರ ಕಾರ್ಯ ಮುಗಿಸಲಾಗಿತ್ತು! ಇದೀಗ ಈ ಪ್ರಕರಣ ಬಯಲಾಗಿದ್ದೇ ಒಂದು ರೋಚಕ.....**



ಆರೋಪಿ ಭಾರತಿ

ಹೊಸೂರು ತಾಲೂಕಿನ (ಆನೇಕಲ್ ಗಡಿ ಭಾಗ) ಚಿನ್ನಹಟ್ಟಿ ಗ್ರಾಮದ ಭಾರತಿ (26) ಎಂಬಾಕೆ ತನ್ನ ಸ್ವಾರ್ಥ ಲಾಲಸೆ ಈಡೇರಿಸಿಕೊಳ್ಳಲಿಕ್ಕಾಗಿ ಹೆತ್ತ ಮಗುವನ್ನೇ ಹತ್ಯೆಗೈದು ಸಿಕ್ಕಿ ಬಿದ್ದಿದ್ದಾಳೆ. ಈಕೆಯ ಸಲಿಂಗಿ ಸ್ನೇಹಿತೆ ಸುಮಿತ್ರ(22)ಜೊತೆ ಮಾತನಾ(ಮಾ)ಡುವುದಕ್ಕೆ ತನ್ನ ಮಗು ಅಡ್ಡಿಯಾಗುತ್ತಿತ್ತು ಎಂಬ ಕ್ಷುಲ್ಲಕ ಕಾರಣಕ್ಕೆ, ಸುಮಿ ಮಾತು ಕೇಳಿಕೊಂಡು ಈ ನೀಚ ಕೃತ್ಯವೆಸಗಿದ್ದಾಳೆ ಎಂದು ತಿಳಿದು ಬಂದಿದೆ!



**ಸೆಕ್ಸಿ ಸುಮಿತ್ರಾ...**

ಭಾರತಿ ಚಿನ್ನಹಟ್ಟಿ ಗ್ರಾಮದ ಸುರೇಶನನ್ನು ಮದುವೆ ಆಗಿದ್ದಳು. ಈಕೆಗೆ ಅದೇ ಗ್ರಾಮದಲ್ಲಿದ್ದ ಯುವತಿ ಸುಮಿತ್ರಾ, ಜೊತೆ ಸ್ನೇಹವಿತ್ತು. ಇಬ್ಬರೂ ಚಂಗಲು ಬುದ್ಧಿಯ ಚಿನಾಲಿಯರು. ಸದಾ ಸೆಕ್ಸ್ ವಿಚಾರ ಮಾತಾಡುತ್ತ ಕಾಲಹರಣ ಮಾಡುತ್ತಿದ್ದರು. ಪೀಚಲು ದೇಹದ ಭಾರತಿಗೆ ಕಾಮ ಶಮನ ಮಾಡಲು ಗಂಡ ಇದ್ದ. ಆದರೆ ಸುಮಿತ್ರಾಗೆ ಇನ್ನೂ ಮದುವೆ ಆಗಿರಲಿಲ್ಲ. ಮೈ


ತಾಯಿಯಿಂದಲೇ ಹತ್ಯೆಯಾದ ಮಗು

ಕೈ ತುಂಬಿಕೊಂಡು ಕೊಬ್ಬಿದ ಹಂದಿಯಂತಿದ್ದಳು. ಇವಳ ಉಬ್ಬಿದ ಅಂಗಾಂಗ ನೋಡಿ ಚಿವುಟಿ ಕೊಳ್ಳುತ್ತಿದ್ದಳು ಭಾರತಿ. ಪ್ರಾಯದ ಹುಡುಗಿ ಸುಮಿ ಅವಳ ಮೈ ಮುಟ್ಟಿ ಚಪಲ ತೀರಿಸಿಕೊಳ್ಳುತ್ತಿದ್ದಳು.

ಕಾಲ ಕ್ರಮೇಣ ಇವರಿಬ್ಬರ ಈ ಸ್ನೇಹ ಸಲಿಂಗ ಕಾಮಕ್ಕೆ ತಿರುಗಿತ್ತು! ಭಾರತಿ ಗಂಡ ಮನೆಯಲ್ಲಿ ಇಲ್ಲದಿದ್ದಾಗ ಇಬ್ಬರೂ ಮನೆಯಲ್ಲಿ ಸೇರುತ್ತಿದ್ದರು. ಕೆಲವೊಮ್ಮೆ ಭಾರತಿ ತನ್ನ ಗಂಡ ಕೆಲಸಕ್ಕೆ ಹೋಗುತ್ತಿದ್ದಂತೆ ತನ್ನ ಸಲಿಂಗಿ ಸ್ನೇಹಿತೆ ಸುಮಿತ್ರ ಮನೆಗೆ ತೆರಳುತ್ತಿದ್ದಳು... ಕಳೆದ ನಾಲ್ಕು ವರ್ಷಗಳಿಂದ ಇವರ ಸಲಿಂಗ ಕಾಮ ವಿಜೃಂಭಿಸುತ್ತಿತ್ತು!

**ಎದೆಯ ಮೇಲೆ ಹಚ್ಚೆ!**

ಇಬ್ಬರೂ ಪ್ರತಿದಿನ ವಿಡಿಯೋ ಕಾಲ್ ಮಾಡಿ ಪರಸ್ಪರ ನೋಡಿಕೊಳ್ಳುತ್ತಿದ್ದರು. ಸೆಕ್ಸಿ ಮಾತುಗಳನ್ನಾಡುತ್ತಿದ್ದರು. ಒಂದು ಹಂತದಲ್ಲಿ, ಭಾರತಿಗೆ ಸುಮಿತ್ರಾ ಮೇಲಿನ ಅಪರಿಮಿತ ಪ್ರೀತಿ ಅವಳ ಮೊಲೆಯ ಮೇಲೆ 'ಸುಮಿ' ಎಂಬ ಹೆಸರನ್ನು ಹಚ್ಚೆ ಹಾಕಿಸಿಕೊಳ್ಳುವಷ್ಟು



ದೂರ ಹೋಗಿತ್ತು! ಈ ನಡುವೆ ಭಾರತಿಗೆ ಒಂದು ಹೆಣ್ಣು ಮಗು ಜನಿಸಿತ್ತು. ಈ ಬಳಿಕ ಇಬ್ಬರ ಕಾಮದಾಟಕ್ಕೆ ತೊಡಕು ಉಂಟಾಗಿತ್ತು. ಆ ಮಗುವಿನಿಂದಲೇ ತಮ್ಮ ಲೈಂಗಿಕ ಸಂಪರ್ಕಕ್ಕೆ ಸಮಸ್ಯೆಯಾಗುತ್ತಿದೆ ಎಂದು ಸುಮಿತ್ರ ಕೊರಗುತ್ತಿದ್ದಳಂತೆ! ಬಾಣಂತನದಲ್ಲಿದ್ದ ಭಾರತಿ ಆ ಮಗುವಿನಿಂದಾಗಿಯೇ ಸುಮಿತ್ರಾಳನ್ನು ಮರೆತು ಮಗುವಿನ ಹಾರೈಕೆಯಲ್ಲಿ ತೊಡಗಿದ್ದಳು. ತನ್ನಿಂದ ಭಾರತಿ ದೂರವಾಗುತ್ತಿದ್ದಾಳೆ ಎಂದು ಭಾವಿಸಿದ್ದ ಸುಮಿತ್ರ, ಹೇಗಾದ್ರು ಮಾಡಿ ಅವಳ ಮಗುವನ್ನು ಕೊಲೆ ಮಾಡಲು ನಿರ್ಧರಿಸಿದ್ದಳು.

**ಕೊಲೆ ಮಾಡಿ ಕತೆ ಕಟ್ಟಿದಳು!**

ಆದರೆ ತಾನು ಕೊಲೆ ಮಾಡಿದ್ರೆ, ತೊಂದರೆಗೆ ಸಿಕ್ಕಿ ಹಾಕಿಕೊಳ್ಳಬೇಕಾಗಬಹುದು ಎಂದುಕೊಂಡು, ಭಾರತಿಯನ್ನೇ ಪುಸಲಾಯಿಸಿ ಮಗುವನ್ನು ಕೊಲ್ಲುವಂತೆ



ಒತ್ತಡ ಹೇರಿದ್ದಳು ಎನ್ನಲಾಗಿದೆ. ಭಾರತಿ ಪತಿ ಸುರೇಶ್‌ಗೆ ಇವರಿಬ್ಬರ ಸಲಿಂಗ ಕಾಮದ ಬಗ್ಗೆ ತಿಳಿಯದಿದ್ದರೂ, ಕುಚಿಕ್ಕೂ ಗೆಳತಿಯರು ಅಂತ ಗೊತ್ತಿತ್ತು. ಅದರಲ್ಲೂ ಪತ್ನಿ ಭಾರತಿ ತನ್ನ ಎದೆಯ ಮೇಲೆ ಸುಮಿ ಹೆಸರು ಹಚ್ಚೆ ಹಾಕಿಸಿಕೊಂಡಿದ್ದಾಗ, ಅದನ್ನು ನೋಡಿ ಸಿಟ್ಟಾಗಿದ್ದ ಸುರೇಶ, ಭಾರತಿ ಮತ್ತು ಸುಮಿತ್ರಾಗೆ ಎಚ್ಚರಿಕೆ ನೀಡಿದ್ದ ಎನ್ನಲಾಗಿದೆ. ಇದಲ್ಲದೆ, ಊರವರು ಏನೇನೋ ಮಾತಾಡಿಕೊಂಡು ಆಡಿಕೊಂಡು ನಗುತ್ತಿದ್ದಾಗ ಸಾಂದರ್ಭಿಕವಾಗಿ ವಾಗ್ವಾದಗಳು ನಡೆದಿವೆ. ಮಗು ಜನಿಸಿದ ಬಳಿಕ ಸುರೇಶ್‌ಗೆ ಪತ್ನಿ ಮೇಲೆ ಸ್ವಲ್ಪ ಮಮಕಾರ ಬಂದು ನೆಮ್ಮದಿ ಕಂಡುಕೊಂಡಿದ್ದನಂತೆ.

ಈ ನಡುವೆ ಕಳೆದ ನವೆಂಬರ್ 7ನೇ ತಾರೀಖು ಮಧ್ಯಾಹ್ನ ಹೊರಗಡೆ ಹೋಗಿದ್ದ ಸುರೇಶ ತನ್ನ ಮನೆಗೆ ಹಿಂತಿರುಗಿದಾಗ ಗಾಭರಿಯಾಗಿದ್ದ. ಏಕೆಂದರೆ, ನೆರೆಹೊರೆಯವ ಜನ ಅವನ ಮನೆಯ ಮುಂದೆಗುಂಪು ಗುಂಪಾಗಿ ಜಮಾಯಿಸಿದ್ದರು. ಯಾಕೆ ಏನಾಯ್ತು ಎನ್ನುತ್ತಲೇ ಮನೆಯೊಳಗೆ ಹೋದಾಗ, ಅವನ 5 ತಿಂಗಳ ಮಗುಸತ್ತು ಮಲಗಿದ್ದ ದೃಶ್ಯ ಕಣ್ಣಿಗೆ ರಾಚಿತ್ತು! ಈ ಬಗ್ಗೆ ಪತ್ನಿ ಭಾರತಿಯನ್ನು ಕೇಳಿದಾಗ, ಮಗು ಹಾಲು ಕುಡಿಯುತ್ತಿದ್ದಾಗ ನೆತ್ತಿ ಹತ್ತಿತು... ತುಂಬಾ ಕೆಮ್ಮು ಬಂತು... ಆಮೇಲೆ... ಉಸಿರು ನಿಂತೇ ಹೋಯ್ತು... ಎಂದಿದ್ದಳು!


ಆರೋಪಿ ಸುಮಿತ್ರಾ

ಇದರಿಂದ ಗಾಬರಿಗೊಂಡ ಸುರೇಶ್ ಮಗುವನ್ನು ಎತ್ತಿಕೊಂಡು ಕೆಲಮಂಗಲದಲ್ಲಿರುವ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋಗಿ ವೈದ್ಯರಿಗೆ ತೋರಿಸಿದ್ದ. ಆ ವೈದ್ಯರು ಮಗು ಈಗಾಗಲೇ ಮೃತಪಟ್ಟಿದೆ ಎಂದು ಹೇಳಿದ್ದಾರೆ. ಸುರೇಶ ಹೇಳಿದ ಸ್ಟೋರಿ ಕೇಳಿ ಮಗುವಿನ ಸಾವಿನ ಬಗ್ಗೆ ಅನುಮಾನ ಬಂದ ಕಾರಣ, ಪೊಲೀಸರಿಗೆ ಮಾಹಿತಿ ನೀಡಿ ಶವಪರೀಕ್ಷೆ ನಡೆಸುವಂತೆ ವೈದ್ಯರು ಶಿಫಾರಸು ಮಾಡಿದ್ದಾರೆ. ಆದರೆ ಸುರೇಶ್ ಅದಕ್ಕೆ ಒಪ್ಪದೆ ಮಗುವಿನ ಶವವನ್ನು ಮನೆಗೆ ತಂದು ಗ್ರಾಮದ ಜನರೊಡಗೂಡಿ ತನ್ನ ಜಮೀನಿನಲ್ಲಿ ಹೂತು ಸಂಸ್ಕಾರ ಕಾರ್ಯ ಮುಗಿಸಿದ್ದಾರೆ.

**ಮೊಬೈಲ್ ಒಳಗಿತ್ತು ಮರ್ಮ ಕಲೆ!**

ತನ್ನ ಮಗುವಿನ ಸಾವಿನಿಂದ ಎದೆಗುಂದಿದ್ದ ಸುರೇಶನಿಗೆ ತನ್ನ ಪತ್ನಿ ಭಾರತಿಯ ಮೇಲೆ ವಿಪರೀತ ಕೋಪ ಬಂದು, ಸದಾ ಮೊಬೈಲ್ ಹಿಡ್ಕೊಂಡು ನಿಂತಿರುತ್ತಿದ್ದ ಬಗ್ಗೆ ಅನುಮಾನ ಬಂದು ಅವಳ ಮೊಬೈಲ್ ಫೋನ್ ಎತ್ತಿಕೊಂಡು ಪರಿಶೀಲಿಸಿದ್ದಾನೆ! ಅದರೊಳಗೆ ಭಾರತಿ ಸುಮಿತ್ರಾ ರೊಮ್ಯಾನ್ಸ್ ಮಾಡಿದ್ದ, ತಳಿಕೆ ಹಾಕಿಕೊಂಡು ಖುಲ್ಲಂ ಖುಲ್ಲಾ ಸುಖಿಸುತ್ತಿದ್ದ ಬಿಟ್ಸ್ ಕಂಡಿವೆ! ಅವನ್ನೆಲ್ಲ ನೋಡಿ ಹುಚ್ಚು ಹಿಡಿದಂತಾಗಿ ಕಿರುಚಾಡಿರೋ ಸುರೇಶ, ಪೊಲೀಸರನ್ನು ಕಂಡು ಅವರ ಕೈಗೆ ಪತ್ನಿ ಭಾರತಿಯ ಮೊಬೈಲ್ ಫೋನ್ ಕೊಟ್ಟು ಸ್ವಲ್ಪ ವಿಚಾರಿಸಲು ಕೋರಿಕೊಂಡಿದ್ದಾನೆ.


ವಿವಾಹ ಸಂದರ್ಭದಲ್ಲಿ ಸುರೇಶ್ ಹಾಗೂ ಭಾರತಿ





ಈ ಬಳಿಕ ಕೆಲಮಂಗಲ ಪೊಲೀಸರು ಭಾರತಿ ಸುಮಿತ್ರಾ, ಇಬ್ಬರನ್ನೂ ತಡವಿಕೊಂಡು ವಿಚಾರಣೆ ನಡೆಸಿದ್ದು, ಸಲಿಂಗ ಕಾಮದ ರಹಸ್ಯ ಮತ್ತು ಮಗುವಿನ ನಿಗೂಢ ಕೊಲೆಯ ಮರ್ಮ ಎರಡೂ ಬಯಲಾದವು,!! ಸಲಿಂಗಿ ಸ್ನೇಹಿತೆ ಸುಮಿತ್ರಾ ಮಾತು ಕೇಳಿಕೊಂಡು ಹೆತ್ತ ಮಗುವನ್ನೇ ಕೊಂದಿರೋ ಮಹಾತಾಯಿ ಭಾರತಿ, ಇದೀಗ ಬೇರೆಯದ್ದೇ ಕತೆ ಹೇಳಿದ್ದಾಳೆ. ಗಂಡ ತನ್ನನ್ನು ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ, ಅದ್ದಕ್ಕಾಗಿ ಸುಮಿ ಸಹವಾಸ ಮಾಡಿದ್ದೆ, ಮಗುವನ್ನು ಸಾಕಲು ಆಗದೆ ಕೊಲೆ ಮಾಡಿಬಿಟ್ಟೆ ಅಂದಿದ್ದಾಳಂತೆ....!! ಸದ್ಯ,ಹೂತಿದ್ದ ಮಗುವಿನ ಹೆಣವನ್ನು ಹೊರ ತೆಗೆದು ಪೋಸ್ಟ್ ಮಾರ್ಟಂ ಮಾಡಿಸಿ, ಭಾರತಿ ಸುಮಿತ್ರಾ, ಇಬ್ಬರನ್ನೂ ಜೈಲಿಗೆ ತಳ್ಳಲಾಗಿದೆ.

# ಡಬಲ್ ಮರ್ಡರ್ ಕೇಸ್ ಹಂತಕನ ಎರಡೂ ಕಾಲಿಗೆ ಪೊಲೀಸ್ ಫೈರಿಂಗ್!


ಸೈಕೋ ಕಿಲ್ಲರ್ ರವಿರೆಡ್ಡಿ

**ಮೈ ತುಂಬಾ ಸಾಲ ಮಾಡಿಕೊಂಡಿದ್ದ ಆಸಾಮಿ ರವಿಪ್ರಸಾದ್ ರೆಡ್ಡಿ ತನ್ನ ಪರಿಚಿತನೇ ಆಗಿದ್ದ ಮಾದೇಶ್ ನಿಗೆ ಹಳೇ ಸಾಲ ವಸೂಲಿ ಮಾಡಿಕೊಡುವುದಾಗಿ ನಂಬಿಸಿ ಚಿಲ್ರೆ ಕಾಸು ಕಿತ್ತಿದ್ದಲ್ಲದೆ,ಹೊಸ ಮನೆ ಕಟ್ಟಿಸುತ್ತಿದ್ದ ಮಾದೇಶ ತನ್ನ ಜಮೀನು ಮಾರಿ ಮನೆಯಲ್ಲಿಟ್ಟಿದ್ದ ಲಕ್ಷಾಂತರ ರೂ ಹಣವನ್ನು ಲಪಟಾಯಿಸಲು ಸ್ಕೆಚ್ ಹಾಕಿ ಆತನ ಮನೆಗೆ ಹೋಗಿದ್ದ.ಆಗ ಅಲ್ಲಿ ಅದೇನು ಮಾತು ಕತೆ ನಡೆಯಿತೋ, ಹಣ ಕೊಡು ಎಂದು ಹೆದರಿಸಿ ಮಾದೇಶನ ಕುತ್ತಿಗೆಗೆ ಚಾಕು ಮಡಗಿ ಆತ ಕೂಗಿಕೊಂಡ ಕೂಡಲೇ ಗೋಮಾಳೆ ಕುಯ್ದು ಎಸ್ಕೇಪ್ ಆಗಿದ್ದ! ನಂತರ ತನ್ನ ಅಂಗಡಿ ಮಾಲೀಕ ರೆಡ್ಡಿಗೆ ಕರೆ ಮಾಡಿ ನಿಮಗೆ ಕೊಡಬೇಕಾದ ಬಾಕಿ ಹಣ ಕೊಡ್ತೇನೆ ಬನ್ನಿ ಎಂದು ಕರೆಸಿಕೊಂಡು ಅವರ ಕಾರ್ ನಲ್ಲೇ ಕಿಡ್ನಾಪ್ ಮಾಡಿ ಕೊರಳಿಗೆ ಚಾಕು ಇಟ್ಟು, ಒಂದು ಕೋಟಿ ಹಣ ತರಿಸಿದ್ರೆ ಓಕೆ ಇಲ್ಲಾ... ಮುಗಿಸಿಬಿಡ್ತೀನಿ ಎಂದು ಹೆದರಿಸಿದ್ದ!! ರೆಡ್ಡಿಗಾರು ಹೆದರದೆ ಇಂಥವೆಲ್ಲ ನನ್ ಹತ್ರ ಇಟ್ಕೊಬೇಡ ಮರ್ಯಾದೆಯಾಗಿ ಹಣ ಕೊಟ್ಟು ಹೋಗು... ಎಂದಿದ್ದಕ್ಕೆ ಅವರ ಕೊರಳನ್ನು ಸಿಗಿದು ಎಸ್ಕೇಪ್ ಆಗಿದ್ದ. ಹೀಗೆ ಎರಡು ಕೊಲೆ ಮಾಡಿ ಪರಾರಿಯಾಗಿದ್ದ ಹಂತಕ ರವಿರೆಡ್ಡಿಯನ್ನು ಪತ್ತೆಹಚ್ಚಿ ಬಂಧಿಸಿದ್ದ ಹೆಬ್ಬಗೋಡಿ ಪಿಐ ಸೋಮಶೇಖರ್ ಮಹಜರ್ ವೇಳೆ ಪೊಲೀಸ್ ಮೇಲೆಯೇ ಮುಗಿಬಿದ್ದ ಆಸಾಮಿಯ ಎರಡೂ ಕಾಲಿಗೆ ಫೈರ್ ಮಾಡಿ ಮಲಗಿಸಿದ್ದಾರೆ!!**


ಕೊಲೆಯಾದ ಮಾದೇಶ್


ಉದ್ಯಮಿ ಬಾಲಪ್ಪ ರೆಡ್ಡಿ

**ಬೆಂಗಳೂರು**
✍ ಹೆಚ್.ಕೆ. ಮಹದೇವ್

**ಸಾಲ ಮಾಡುವವರೇ ಎಚ್ಚರ!**

ತೀರಿಸಲು ಆಗದಿದ್ದರೂ ಸಾಲ ಮಾಡೋದು, ಸಾಮಾಜಿಕ ನಿಂದನೆಗೆ ಗುರಿಯಾಗುವುದು, ನಿದ್ದೆ ಇಲ್ಲದೆ ಒದ್ದಾಡೋದು, ಆಮೇಲೆ ಸಾಲ ತೀರಿಸಲು ಮಾಡಬಾರದ ಕೆಲಸ ಮಾಡುವುದು.... ಇದೆಲ್ಲಾ ಬೇಕಾ? ನಾವಿಲ್ಲಿ ಇದನ್ನೆಲ್ಲಾ ಹೇಳೋಕೆ ಕಾರಣವಿದೆ. ಈ ವರದಿಯನ್ನು ಓದಿ ಗೊತ್ತಾಗುತ್ತೆ. ಎಲೆಕ್ಟ್ರಾನಿಕ್ ಸಿಟಿ ಸಬ್ ಡಿವಿಷನ್ ಹೆಬ್ಬಗೋಡಿಯಲ್ಲಿ ಬಯೋಕಾನ್ ಹತ್ತಿರ ಉದ್ಯಮಿ ಬಾಲಪ್ಪರೆಡ್ಡಿ ಅವರ ಕಾಂಪ್ಲೆಕ್ಸ್ ಇದೆ.ಅದರಲ್ಲಿ ಮಾದೇಶ ಎಂಬ ವ್ಯಕ್ತಿ ಒಂದು ಟೀ ಸ್ಟಾಲ್ ನಡೆಸುತ್ತಿದ್ದ. ಅವರು ತಮಿಳುನಾಡು ಮೂಲದವರು. ಇಲ್ಲೇ ನಾರಾಯಣ ಹೃದಯಾಲಯ ಹಿಂಭಾಗದ ಕಾಚನಾಯಕನಹಳ್ಳಿಯಲ್ಲಿ ನೆಲೆಸಿದ್ದು ಇದೀಗ ಸ್ವಂತ ಮನೆ ಕಟ್ಟಿಸುತ್ತಿದ್ದರು.

ಇವರಿಗೆ ಪತ್ನಿ ಹಾಗೂ ಎರಡು ಗಂಡು ಮಕ್ಕಳು. ಎಲ್ಲರೂ ಶ್ರಮ ಜೀವಿಗಳು. ದುಡಿದು ಸಂಪಾದಿಸಿ ಇಲ್ಲೊಂದು ಸೈಟ್ ಖರೀದಿಸಿ ಮನೆ ಕಟ್ಟಿಸಿದ್ದಾರೆ. ಅದಿನ್ನೂ ಗೃಹಪ್ರವೇಶವೇ ಆಗಿಲ್ಲ. ಮಾದೇಶ್ ಇತ್ತೀಚಿಗೆ ತಮ್ಮ ಗ್ರಾಮದಲ್ಲಿದ್ದ ಒಂದಷ್ಟು ಭೂಮಿಯನ್ನು ಮಾರಿ ಸುಮಾರು 15 ಲಕ್ಷ ರೂ. ಹಣವನ್ನ ತಂದು ಮನೆಯಲ್ಲಿಟ್ಟಿದ್ದರು.

**ಕೇಡಿ ರವಿಪ್ರಸಾದ್ ರೆಡ್ಡಿ!**

ಈ ವಿಷಯ ಮಾದೇಶನ ಸ್ನೇಹಿತ ರವಿಪ್ರಸಾದ್ ರೆಡ್ಡಿಗೆ ತಿಳಿದಿತ್ತು. ಈ ರೆಡ್ಡಿ ಮಾದೇಶನ ಟೀ ಸ್ಟಾಲ್ ಪಕ್ಕದಲ್ಲೇ ಬಾಲಪ್ಪ ರೆಡ್ಡಿ ಬಿಲ್ಡಿಂಗ್‌ನಲ್ಲೇ ಒಂದು ಪ್ರಾವಿಷನ್ ಸ್ಟೋರ್ ನಡೆಸುತ್ತಿದ್ದವನು. ಇವನು ಮಹಾನ್ ಸಾಲಗಾರ. ಅಂಗಡಿಯಲ್ಲಿ ಒಳ್ಳೆ ವ್ಯಾಪಾರ ಆಗುತ್ತಿದ್ದರೂ ಸಂಪಾದನೆಯನ್ನೆಲ್ಲ ಎಣ್ಣೆಗೆ ಹಾಕುತ್ತಿದ್ದ. ಹೆಣ್ಣಿನ ಚಟವೂ ಇತ್ತೋ ಏನೋ ಗೊತ್ತಿಲ್ಲ. ಇವನಿಗೆ ಮೈ ತುಂಬಾ ಸಾಲವಿತ್ತು. ಅಂಗಡಿ ಬಾಡಿಗೆ ಕಟ್ಟಿ ಅದೆಷ್ಟೊ ತಿಂಗಳಾಗಿತ್ತು. ಸಾಲದ್ದಕ್ಕೆ ಬಿಲ್ಡಿಂಗ್ ಮಾಲೀಕ ಬಾಲಪ್ಪ ರೆಡ್ಡಿ ಹತ್ರ ಲಕ್ಷಾಂತರ ರೂಪಾಯಿ ಕೈ ಸಾಲ ಬೇರೆ ಮಾಡಿಕೊಂಡಿದ್ದ. ಅದನ್ನು ತೀರಿಸಲು ಆಗದೆ ಪ್ರತಿನಿತ್ಯ ಉಗಿಸಿಕೊಂಡು ತಿರುಗುತ್ತಿದ್ದ.


ಮಾಧ್ಯಮಗಳ ಮುಂದೆ ಡಿಸಿಪಿ ಎಂ. ನಾರಾಯಣ


ಇಂಥ ಉಡಾಳ ಟೀ ಅಂಗಡಿ ಮಾದೇಶ್ ಹತ್ತಿರವು ಸಾಲ ಮಾಡಿದ್ದ. ಅಲ್ಲದೆ, ಮಾದೇಶ ಯಾರಿಗೋ ಸಾಲ ಕೊಟ್ಟಿದ್ದು, ಅದನ್ನು ವಸೂಲಿ ಮಾಡಿಕೊಡುವುದಾಗಿ ನಂಬಿಸಿ ಇನ್ನಷ್ಟು ಅಡ್ವಾನ್ಸ್ ಕಿತ್ತುಕೊಂಡಿದ್ದ...

**15 ಲಕ್ಷ ದೋಚಲು ಸಂಚು!**

ಕಾಚನಾಯಕನಹಳ್ಳಿಯಲ್ಲಿ ಮನೆ ನಿರ್ಮಿಸುತ್ತಿದ್ದ ಮಾದೇಶ, ಪೂರ್ತಿಗೊಳಿಸಲು ಹಣ ಸಾಲದೆ ತಮಿಳು ನಾಡಿನಲ್ಲಿದ್ದ ಒಂದಷ್ಟು ಭೂಮಿಯನ್ನು ಮಾರಿ, ಅದರಿಂದ ಬಂದಿದ್ದ 15 ಲಕ್ಷ ರೂ.ಗಳನ್ನು ತಂದು ಮನೆಯಲ್ಲಿಟ್ಟಿದ್ದ. ಈ ವಿಷಯ ಕೇಡಿ ರವಿರೆಡ್ಡಿಗೆ ಗೊತ್ತಿತ್ತು. ಗೆಳೆತನದಲ್ಲಿ ಮಾದೇಶನೇ ಹೇಳಿರಬೇಕು. ಇತ್ತ ಬಾಲಪ್ಪನ ಬಳಿ ಚೀಟಿಪಾಟಿ ಸಾಲ ಎತ್ತಿ ತೀರಿಸಲಾಗದೆ ಒದ್ದಾಡ್ತಾ ಇದ್ದ ರವಿ ರೆಡ್ಡಿಗೆ ಮಾದೇಶ್ ಬಳಿ ಇರೋ 15 ಲಕ್ಷ ಲಪಟಾಯಿಸಿಬಿಟ್ರೆ ತನ್ನ ಪ್ರಾಬ್ಲಮ್ ಕ್ಲಿಯರ್... ಎಂಬ ದುಷ್ಟ ಆಲೋಚನೆ ಬಂದಿತ್ತು.

ಆಸಾಮಿ ಹೇಳದೆ ಕೇಳದೆ ಕಾಚನಾಯಕನಹಳ್ಳಿಗೆ ತೆರಳಿದ್ದಾನೆ. ಮಾದೇಶ್ ಜೊತೆ ಮಾತಾಡ್ತಾ, ನಿನ್ ಹತ್ರ ಇದೆಯಲ್ಲ ಆ ದುಡ್ಡು ಕೊಡು ಆಮೇಲೆ ಕೊಡ್ತೇನೆ ಅಂದಿದ್ದಾನೆ. ಇದಕ್ಕೆ ಮಾದೇಶ್ ಒಪ್ಪಿಲ್ಲ. ಆಗ ಐನಾತಿ ರವಿ ರೆಡ್ಡಿ ಮಾದೇಶನ ಕುತ್ತಿಗೆಗೆ ಚಾಕು ಮಡಗಿ, ಮರ್ಯಾದೆಯಾಗಿ ಆ ಹಣ ಕೊಡು, ಅಷ್ಟೇ ಎಂದು ಹೆದರಿಸಿದ್ದಾನೆ. ತಿರುಗಿಸಿ ನಾಲ್ಕು ಒದೆ ಕೊಡುವುದನ್ನು ಬಿಟ್ಟು ಪ್ಯಾನಿಕ್ ಆಗಿದ್ದ ಮಾದೇಶ ಕಿರುಚಿಕೊಂಡಿದ್ದಾನೆ. ಆತ ಯಾವಾಗ ಕಿರುಚಿಕೊಂಡನೋ ಜನ ಸೇರಿಬಿಡುತ್ತಾರೆ ಎಂದು ಗಾಬರಿಯಾದ ರವಿರೆಡ್ಡಿ, ಅದೇ ಸಿಟ್ಟಿನಲ್ಲಿ ಮಾದೇಶನ ಗ್ವಾಮಾಳೆ ಸಿಗಿದು ಅಲ್ಲಿಂದ ಎಸ್ಕೇಪ್ ಆಗಿದ್ದಾನೆ!


ಎಸಿಪಿ ಕೆ.ಎಂ. ಸತೀಶ್


ಪಿಐ ಜಿ. ಸೋಮಶೇಖರ್

**ಸಿಸಿ ಫುಟೇಜ್‌ನಲ್ಲಿತ್ತು ಎಸ್ಕೇಪ್ ದೃಶ್ಯ....**

ಮಾದೇಶ್ ಹೊಸ ಮನೆಯಿಂದ ಶಬ್ದ ಕೇಳಿ ಬರುತಿದ್ದಂತೆಯೇ ಜನ ಆತ್ತ ಓಡಿದ್ದಾರೆ. ಮಾದೇಶ್ ಭೀಕರವಾಗಿ ಕೊಲೆಯಾಗಿ ರಕ್ತದ ಮಾಡುವಲ್ಲಿ ಬಿದ್ದಿದ್ದಾನೆ. ಊರಿಗೆ ಊರೇ ಸೇರಿದೆ. ಅನ್ಯಾಯವಾಗಿ ಕೊಲೆ ಮಾಡಿದ ಮಿತ್ರದ್ರೋಹಿ ರವಿ ರೆಡ್ಡಿ ತನ್ನ ಆಕ್ಟೀವಾ ಹೇರಿ ಅದೇ ಬೀದಿಯಲ್ಲಿ ಎಸ್ಕೇಪ್ ಆಗಿದ್ದಾನೆ. ಇದೆಲ್ಲಾ ದೃಶ್ಯ ಆ ಬೀದಿಯಲ್ಲಿರೋ ಅಂಗಡಿಗಳಲ್ಲಿನ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿತ್ತು.

ಈ ಕೊಲೆ ಮಾಹಿತಿ ತಿಳಿದ ಕೂಡಲೇ ಡಿಸಿಪಿ ನಾರಾಯಣ್ ಸರ್, ಎಸಿಪಿ ಸತೀಶ್, ಪಿಐ ಸೋಮಶೇಖರ್ ಮತ್ತು ಸಿಬ್ಬಂದಿಗಳು ಘಟನಾ ಸ್ಥಳಕ್ಕೆ ಆಗಮಿಸಿದ್ದರು. ಫೋರೆನ್ಸಿಕ್ ತಜ್ಞರನ್ನು ಕರೆಯಿಸಿ ಸ್ಥಳ ಮಹಜರು ನಡೆಸಿ ಶವವನ್ನು ಪಂಚನಾಮೆಗೆ ಸಾಗಿಸಿ ಅಸಲಿ ತನಿಖೆ ಶುರು ಮಾಡಲಾಯಿತು. ಮೊದಲಿಗೆ ಆ ಬೀದಿಯಲ್ಲಿರೋ ಸಿಸಿ ಫುಟೇಜ್ ಸಂಗ್ರಹಿಸಿ ನೋಡಲಾಯಿತು. ಮಾದೇಶ್ ಮನೆಗೆ ಬಂದಿದ್ದ ವ್ಯಕ್ತಿ ಬಿಳಿ ಆಕ್ಟಿವಾದಲ್ಲಿ ಆರಾಮವಾಗಿ ಸಾಗಿ ಹೋದ ದೃಶ್ಯವಿತ್ತು. ನಂತರ ಆತನ ಪತ್ತೆ ಕಾರ್ಯಕ್ಕೆ ಚಾಲನೆ ಕೊಡಲಾಯಿತು.


ಮಾದೇಶ್ ಹೆಣ


ಆಸ್ಪತ್ರೆಯಲ್ಲಿ ಆರೋಪಿ ರವಿರೆಡ್ಡಿ

**ಬಾಲಪ್ಪ ರೆಡ್ಡಿ ಕಿಡ್ನಾಪ್-ಮರ್ಡರ್!**

ಹೆಬ್ಬಗೋಡಿ ಪೊಲೀಸರು ಮಾದೇಶ್ ಹಂತಕನ ಪತ್ತೆಕಾರ್ಯದಲ್ಲಿ ಮುಳುಗಿರುವಾಗಲೇ, ಎರಡೇ ದಿನದಲ್ಲಿ ಅದೇ ಹೆಬ್ಬಗೋಡಿಯ ಉದ್ಯಮಿ ಬಾಲಪ್ಪರೆಡ್ಡಿ ಕಗ್ಗೊಲೆ ನಡೆದು ಹೋಗಿತ್ತು! ಅವರನ್ನು ಯಾರೋ ಕಿಡ್ನಾಪ್ ಮಾಡಿ ಜಿಗಣಿ

☞ 6

5 ☞

ಸರ್ಕಲ್ ಕಡೆ ಕಾರ್ ಒಳಗೆ ಕೊಂದು ಎಸ್ಕೇಪ್ ಆಗಿದ್ದರು! ಮೊನ್ನೆ ಟೀ ಅಂಗಡಿ ಮಾದೇಶನ ಕೊಲೆ, ಒಂದು ದಿನ ಬಿಟ್ಟು ಬಿಲ್ಡಿಂಗ್ ಓನರ್ ಬಾಲಪ್ಪ ರೆಡ್ಡಿ ಕೊಲೆ.... ತನಿಖಾಧಿಕಾರಿಗೆ ಟೋಟಲ್ ಕನ್ಫ್ಯೂಸನ್!

**ಯಾರು ಮಾಡಿರಬಹುದು?**

ಪಿಐ ಸೋಮಶೇಖರ್ ಅವರು ತಮ್ಮ ಚಾಣಾಕ್ಷ ಮತಿ ಬಳಸಿ ತನಿಖೆ ನಡೆಸಿದ್ದಾರೆ. ಆಗ ಅದೇ ಬಿಲ್ಡಿಂಗ್‌ನಲ್ಲಿದ್ದ ಪ್ರಾವಿಷನ್ ಸ್ಟೋರ್ ರವಿಪ್ರಸಾದ್ ರೆಡ್ಡಿ ಮೇಲೆ ಅನುಮಾನ ಮೂಡಿತ್ತು. ಆತ ಬಾಲಪ್ಪನ ಹತ್ತಿರ ತುಂಬಾ ಸಾಲ ಮಾಡಿಕೊಂಡು ಅದನ್ನು ತೀರಿಸಲಾಗದೆ ತಲೆ ಮರೆಸಿಕೊಂಡು ಸುತ್ತುತ್ತಿದ್ದ ಮಾಹಿತಿ ಎಲ್ಲಾ ಸಂಗ್ರಹಿಸಿದ ಪಿಐ ಸೋಮಶೇಖರ್, ಆತನ ಬೆನ್ನು ಹತ್ತಿದ್ದರು. ಹೆಬ್ಬಗೋಡಿ ಕ್ರೈಂ ಸ್ಟಾಫ್ ಅವಿರತ ಶ್ರಮಪಟ್ಟು ಅತ್ತಿಬೆಲೆ ಕಡೆ ಅವಿತಿದ್ದ ಕೇಡಿ ರವಿರೆಡ್ಡಿಯ ಹೆಡೆಮುರಿಕಟ್ಟಿ ಎಳೆತಂದು ವಿಚಾರಣೆಗೆ ಒಳಪಡಿಸಲಾಯಿತು. ಆಗ ಹೊರಬಿದ್ದಿದೆ ಅಸಲಿ ಸತ್ಯ.

**ಹಣ ಕೊಡ್ತೇನೆ ಬನ್ನಿ ಅಂತ ಏಮಾರಿಸಿ ಕೊಲೆ!**

ಆಗಿದ್ದ ರವಿ ರೆಡ್ಡಿಗೆ, ಮುಂದಿನ ಟಾರ್ಗೆಟ್ ಆದವರೇ ಬಿಲ್ಡಿಂಗ್ ಓನರ್ ಬಾಲಪ್ಪ ರೆಡ್ಡಿ! ಆಸಾಮಿ ಅವರನ್ನು ಸಂಪರ್ಕಿಸಿ ನಿಮ್ಮ ಅಸಲು ಬಡ್ಡಿ, ಅಂಗಡಿ ಬಾಡಿಗೆ ಎಲ್ಲಾ ಒಟ್ಟಿಗೆ ಕೊಡ್ತೇನೆ ಬನ್ನಿ ಎಂದು ನಂಬಿಸಿ, ಅವರ ಕಾರ್‌ನಲ್ಲೇ ಅವರನ್ನು ಕಿಡ್ನಾಪ್ ಮಾಡಿ ಜಿಗಣಿ ಸರ್ಕಲ್ ಕಡೆ ಕರೆದೊಯ್ದು, ಅಲ್ಲಿ ಅಮಾನುಷವಾಗಿ ಕುತ್ತಿಗೆ ಸಿಗಿದು ಕೊಂದಿದ್ದಾನೆ!

ಬಾಲಪ್ಪ ರೆಡ್ಡಿ ಅವರಿಗೆ ಹಣ ಕೊಡುವುದಾಗಿ ಪುಸಲಾಯಿಸಿ ಕರೆದೋಯ್ದ ವಂಚಕ ರವಿರೆಡ್ಡಿ ಅಲ್ಲಿ ಕಾರ್ ಒಳಗೆಯೇ ಲಾಕ್ ಮಾಡಿ, ಕುತ್ತಿಗೆಗೆ ಚಾಕು ಇಟ್ಟು, ನಿಮ್ಮನ್ನು ಕಿಡ್ನಾಪ್ ಮಾಡಿದ್ದೇನೆ,ನಿಮ್ಮ ಮಗನಿಗೆ ಕರೆ ಮಾಡಿ ಒಂದು ಕೋಟಿ ಹಣ ತರಿಸಬೇಕು... ಇಲ್ಲಾಂದ್ರೆ ಕೊಲ್ತೇನೆ... ಎಂದು ಹೆದರಿಸಿದ್ದ!

60 ರ ಪ್ರಾಯದ ಬಾಲಪ್ಪ ರೆಡ್ಡಿ ಮಾದೇಶ್ ನಂತೆ ಪ್ಯಾನಿಕ್ ಆಗಿ ಹೆದರಿಕೊಂಡು ಕಿರುಚಿಲ್ಲ. ಇದನ್ನೆಲ್ಲಾ ನನ್ ಹತ್ರ ಇಟ್ಕೊಬೇಡ... ಹುಷಾರ್ ಎಂದು ಗುಡುಗಿದ್ದರಂತೆ. ಆಗ ಸಿಟ್ಟಿಗೆದ್ದ ರವಿರೆಡ್ಡಿ ಥೇಟ್ ಮಾದೇಶನಂತೆಯೇ ಬಾಲಪ್ಪನ ಕುತ್ತಿಗೆಯನ್ನು ಕೊಯ್ದು

## ಆಟಿಕೆ ಪಿಸ್ತೂಲ್ ರಹಸ್ಯ?



ಮಾದೇಶ ಮತ್ತು ಬಾಲಪ್ಪರೆಡ್ಡಿ ಅವರ ಹಂತಕ ರವಿಪ್ರಸಾದ್ ರೆಡ್ಡಿ ಮಹಾನ್ ಶೋಕಿಲಾಲ. ಕಷ್ಟಪಟ್ಟು ದುಡಿಯದೆ ಸಾಲ ಮಾಡಿಕೊಂಡು, ಅವರಿವರನ್ನು ಏಮಾರಿಸಿಕೊಂಡು ಶೋಕಿ ಮಾಡ್ತಿದ್ದ ಎನ್ನಲಾಗಿದೆ. ಈತ ಮಾದೇಶನಿಂದ 15 ಲಕ್ಷ ಹಣ ದೋಚಲು ಸ್ಕೆಚ್ ಹಾಕಿ ಅವರ ಮನೆಗೆ ಹೋಗಿದ್ದಾಗ, ಕುತ್ತಿಗೆಗೆ ಚಾಕು ಮಡಗುವ ಮುನ್ನ ಆಟಿಕೆ ಪಿಸ್ತೂಲ್ ಇಟ್ಟು ಹೆದರಿಸಿದ್ದಾನೆ! ಇದು ಆಟಿಕೆ ಪಿಸ್ತೂಲ್ ಅಂತ ಅಷ್ಟು ಸುಲಭಕ್ಕೆ ಗೊತ್ತಾಗುವುದೇ ಇಲ್ಲಾ.



ಅಸಲಿ ಪಿಸ್ತುಲ್‌ನಂತೆಯೇ ಇದೆ. ಇದರಿಂದ ಈ ಕೇಡಿ ರೆಡ್ಡಿ ಇನ್ನು ಅದೆಷ್ಟು ಅಫೆನ್ಸ್ ಮಾಡಿದ್ದಾನೋ ಏನೋ. ದಕ್ಷ ಪೊಲೀಸ್ ಆಫೀಸರ್ ಸೋಮಶೇಖರ್ ಈ ಬಗ್ಗೆ ಇನ್ನೊಂದು ರೌಂಡ್ ಬಿರಿಯಾನಿ ತಿನ್ನಿಸಿ ವಿಚಾರಣೆ ನಡೆಸಬೇಕಿದೆ!! ☯





ಮಾದೇಶ್ ಪತ್ನಿ ಹಾಗೂ ಮಕ್ಕಳು

ಕಾಚ ನಾಯಕನಹಳ್ಳಿಯಲ್ಲಿ ಮಾದೇಶನ ಬಳಿಯಿದ್ದ 15 ಲಕ್ಷ ಹಣ ದೋಚಲು ಹೋಗಿ ಫೇಲ್ ಆಗಿ ಆವೇಶದಲ್ಲಿ ಮಾದೇಶನ ಕೊಲೆ ಮಾಡಿ ಎಸ್ಕೇಪ್ ಎಸ್ಕೇಪ್ ಆಗಿದ್ದ!!

**ಎರಡೂ ಕಾಲಿಗೆ ಗುಂಡು...**

ಹೆಬ್ಬಗೋಡಿ ಪಿಐ ಸೋಮಶೇಖರ್ ಅಂತೂ ಒಬ್ಬ ದೊಡ್ಡ ಸೈಕೋ ಕಿಲ್ಲರ್ ರವಿರೆಡ್ಡಿ ಯನ್ನು ಪತ್ತೆಹಚ್ಚಿ ಬಂಧಿಸಿದ್ದರು. ಸ್ವಲ್ಪ ತಡ ಆಗಿದ್ರೂ ಈತ ಅದೆಷ್ಟು ಕೊಲೆ ಮಾಡ್ತಿದ್ನೋ ಏನೋ! ಕಿಲ್ಲರ್ ರವಿ ಪ್ರಸಾದ್ ರೆಡ್ಡಿಯನ್ನು ಬಂಧಿಸಿ ಠಾಣೆಗೆ ಕರೆತಂದು ವಿಚಾರಣೆ ನಡೆಸಿ ಹೇಳಿಕೆ ದಾಖಲಿಸಿದ ಬಳಿಕ, ಸ್ಪಾಟ್ ಮಹಜರ್‌ಗೆ ಕರೆದೊಯ್ದಾಗ ಆಸಾಮಿ ಕಾನ್‌ಸ್ಟೆಬಲ್ ಅಶೋಕ್ ಮೇಲೆ ಹಲ್ಲೆ ಮಾಡಿ ಎಸ್ಕೇಪ್ ಆಗಲು ಯತ್ನಿಸಿದ್ದು, ಪಿಐ ಸೋಮಶೇಖರ್ ಆತನ ಎರಡೂ ಕಾಲಿಗೆ ಎರಡು ಗೋಲಿ ನುಗ್ಗಿಸಿ ಅಲ್ಲೇ ಕೆಡವಿದ್ದಾರೆ! ಅವರು ಕಾಲಿಗೆ ಹೊಡೆಯದೆ ತಲೆಗೆ ಗುರಿ ಇಡಬೇಕಿತ್ತು ಅನ್ನೋದು ಸಾರ್ವಜನಿಕ ಅಭಿಪ್ರಾಯ....

ಡಿಸಿಪಿ ಎಂ.ನಾರಾಯಣ, ಎಸಿಪಿ ಕೆ.ಎಂ. ಸತೀಶ್ ಅವರ ಮಾರ್ಗದರ್ಶನದಲ್ಲಿ ಜೋಡಿ ಕೊಲೆ ಹಂತಕ ರವಿಪ್ರಸಾದ್ ರೆಡ್ಡಿಯನ್ನು ಬಂಧಿಸಿರೋ ಪಿಐ ಸೋಮಶೇಖರ್ ಅವರನ್ನು ಸಿಟಿ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ವಾಗೂ ಹೆಬ್ಬಗೋಡಿ ಜನತೆ ಅಪಾರವಾಗಿ ಪ್ರಶಂಶಿಸಿದ್ದಾರೆ. ☯


## ಮಕ್ಕಳಿಲ್ಲದೆ ಮರಗಳನ್ನೇ ಮಕ್ಕಳಂತೆ ಸಾಕಿ ಸಲುಹಿದ ವೃಕ್ಷ ಮಾತೆ ಸಾಲುಮರದ ತಿಮ್ಮಕ್ಕ....



ಮಾಗಡಿ ಮುಖ್ಯ ರಸ್ತೆಯಿಂದ ತನ್ನೂರಿಗೆ ಸಂಪರ್ಕ ಕಲ್ಪಿಸುತ್ತಿದ್ದ 4.5 ಕಿ.ಮೀ ಉದ್ದದ ರಸ್ತೆಯ ಎಡ ಬಲ ಒಂದೇ ಒಂದು ಗಿಡ ಮರಗಳು ಇರಲಿಲ್ಲವಾದ ಕಾರಣ, ಆ ದಾರಿಯಲ್ಲಿ ಸಾಗುವ ಜನತೆ ಬಿಸಿಲಿನಲ್ಲಿ ಬೆಂದು ಹೋಗುತ್ತಿದ್ದ ಕಾರಣ, ಊರ ಜನರಿಗೆ ನೆರಳಾಗಲಿ ಎಂಬ ಮಹತ್ವಕಾಂಕ್ಷೆ ಇಟ್ಟುಕೊಂಡು 386 ಆಲದ ಸಸಿಗಳನ್ನು ಸಾಲಾಗಿ ನೆಟ್ಟು ಬೆಳೆಸಿ 'ಸಾಲು ಮರದ ತಿಮ್ಮಕ್ಕ' ಎಂದೇ ಜಗದ್ವಿಖ್ಯಾತಿ ಯಾದವರು ಹುಲಿಕಲ್ ಬಿಕ್ಕಲ ಚಿಕ್ಕಯ್ಯನ ಪತ್ನಿ ತಿಮ್ಮಕ್ಕ!

ಅವರಿಗೆ ಮಕ್ಕಳಿರಲಿಲ್ಲ.ಮರಗಳನ್ನೇ ಮಕ್ಕಳಂತೆ ಸಾಕಿ ಸಲುಹಿದ್ದರು ವೃಕ್ಷ ಮಾತೆ... ಅಂದು ಬಿಸಿಲಲ್ಲಿ ಒಣಗುತ್ತಾ... ಒಂದೊಂದೇ ಹೆಜ್ಜೆ ಇಟ್ಟು ನಡೆಯುತ್ತಾ ತಿಮ್ಮಕ್ಕ ಮಾಡಿದ ಸಂಕಲ್ಪವಿದೆಯಲ್ಲ, ಅದು ಅಸಾಮಾನ್ಯವಾದದ್ದು. ಇಂದು ಹುಲಿಕಲ್ ರಸ್ತೆಯ ಎಡ ಬಲ ಭಾಗದಲ್ಲಿ ಹೆಮ್ಮರವಾಗಿ ಬೆಳೆದು ನಿಂತಿರೋ ಆಲದ ಮರಗಳ ಕೆಳಗೆ ಕುಳಿತಿದ್ದರೆ ತಿಮ್ಮಕ್ಕನ ಮಡಿಲು ನೆನಪಾಗುತ್ತದೆ!

ಅಂಥ ಪರಿಸರವಾದಿ ಈ ಜಗತ್ತಿನಲ್ಲೇ ಇಲ್ಲ. ಮೊದಲು 386 ಆಮೇಲೆ 800 ಗಿಡ ಮರಗಳ ಬೆಳೆಸಿದ ದಾಖಲೆ ಅವರದ್ದು. ಜಗತ್ತಿನ ಉದ್ದಕ್ಕೂ ಅವರ ಹೆಸರು ಪಸರಿಸಿದೆ. ಅದೆಷ್ಟೋ ಪ್ರಶಸ್ತಿ ಪುನಸ್ಕಾರಗಳು ತಿಮ್ಮಕ್ಕನ ಮುಡಿ ಏರಿವೆ. ಕೇಂದ್ರ ಬಿಜೆಪಿ ಸರ್ಕಾರ ಭಾರತದ ಉತ್ಕೃಷ್ಟ ಪ್ರಶಸ್ತಿಯಾದ 'ಪದ್ಮಶ್ರೀ' ನೀಡಿ ಗೌರವಿಸಿದೆ. ಅವತ್ತು ಮಾನ್ಯ ರಾಷ್ಟ್ರಪತಿಗಳು ಪ್ರಶಸ್ತಿ ನೀಡುವಾಗ ನಮ್ಮ ತಿಮ್ಮಕ್ಕ ಅವರ ತಲೆ ಸವುರಿ ಆಶೀರ್ವಾದ ಮಾಡಿದಾಗ, ಸಾಕ್ಷಾತ್ ದೇವತೆಯೇ ಬಂದು



ಪತಿ ಬಿಕ್ಕಲ ಚಿಕ್ಕಯ್ಯನವರೊಂದಿಗೆ ತಿಮ್ಮಕ್ಕ


ಆಶೀರ್ವಾದ ಮಾಡಿದಂತಾಯಿತು ಅಂದಿದ್ರು, ಕೊವಿಂದ್ ಅವರು!

ಅಂಥ ಅಮಾಯಕಿ, ಸದ್ ಗುಣವಂತೆ ತಿಮ್ಮಕ್ಕ ಇದೀಗ ನಮ್ಮನ್ನೆಲ್ಲ ಬಿಟ್ಟು ಮರಳಿ ಬಾರದೂರಿಗೆ ಹೊರಟು ಹೋಗಿದ್ದಾರೆ. ಅಖಂಡ 114 ವರ್ಷ ಬದುಕಿದ್ದ (1911 - 2025) ದೊಡ್ಡ ಜೀವ ಅದು. ಅವರಿಗೆ ಮಕ್ಕಳಿರಲಿಲ್ಲ. ಉಮೇಶ ಅಂತೊಬ್ಬ ಹುಡುಗನನ್ನು ಸಾಕಿದ್ದಾರೆ.

ಮೊನ್ನೆ ಜ್ಞಾನಭಾರತಿ ವಿಶ್ವ ವಿದ್ಯಾಲಯದ ಹತ್ತಿರವಿರೋ ಕಲಾ ಗ್ರಾಮದಲ್ಲಿ ತಿಮ್ಮಕ್ಕನ ಅಂತಿಮ ಕಾರ್ಯಗಳನ್ನು ಆ ಹುಡುಗನೇ ಮಾಡಿದ.ಸಿಎಂ ಸಿದ್ದರಾಮಯ್ಯ ಮತ್ತಿತರೇ ಗಣ್ಯರು ಉಪಸ್ಥಿತರಿದ್ದು ಸಕಲ ಸರ್ಕಾರಿ ಗೌರವಗಳೊಡನೆ ತಿಮ್ಮಕ್ಕನ ಅಂತಿಮ ಕಾರ್ಯವನ್ನು ನೆರವೇರಿಸಿದರು. ಎನಿವೆ, ಗಿಡ ಮರಗಳು ಬೀಸುವ ಗಾಳಿಯಲ್ಲಿ,ನಮ್ಮ ಉಸಿರಲ್ಲಿ ಉಸಿರಾಗಿ ಬೆರೆತಿರೋ ತಿಮ್ಮಕ್ಕನ ಆತ್ಮಕ್ಕೆ ಸದ್ಗತಿ ದೊರಕಲಿ.... ☯



'ಪದ್ಮಶ್ರೀ' ಸ್ವೀಕರಿಸಿದಾಗ



ಸಾಕು ಮಗ ಉಮೇಶ್



ಸಿಎಂ ಸಿದ್ದರಾಮಯ್ಯ ಅಂತಿಮ ನಮನ ಸಲ್ಲಿಸಿದ್ದು

# ಕನಕಪುರದಲ್ಲಿ ರೌಡಿಶೀಟರ್ ಚಿರಂಜೀವಿ ಕೊಲೆ!


ಕೊಲೆಯಾದ ರೌಡಿಶೀಟರ್ ಚಿರಂಜೀವಿ ಅ|| ಚಿರು


ಕೆರೆಯಲ್ಲಿ ಕೊಲೆಯಾಗಿ ಬಿದ್ದಿರುವ ಚಿರಂಜೀವಿ ಮೃತದೇಹ

**ಬೆಂ. ದಕ್ಷಿಣ**

ಶಾಂತರಾಜು ಜಿ. ಕಲ್ಲಹಳ್ಳಿ

ಬೆಂಗಳೂರಿನ ಕೆಂಗೇರಿಯ ಸಮೀಪ ಹೆಮ್ಮಿಗೆಪುರ ವಾಸಿಗಳಾದ ಗೌರಮ್ಮ ಮತ್ತು ವೆಂಕಟರಮಣಪ್ಪ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು. ಮೊದಲನೆಯವ ಚಿರಂಜೀವಿ ಅಲಿಯಾಸ್ ಚಿರು, ಎರಡನೇ ಮಗ ನಂದೀಶ್ ಮಕ್ಕಳಿದ್ದರು. ಇದರಲ್ಲಿ ಮೊದಲನೇ ಮಗ ಚಿರಂಜೀವಿ ಡ್ರೈವಿಂಗ್ ಕೆಲಸ ಮಾಡಿಕೊಂಡಿದ್ದ. ಈ ಕುಟುಂಬ ಸುಂದರ ಸುಖಮಯ ಜೀವನ ನಡೆಸಿಕೊಂಡು ಹೋಗುತ್ತಿದ್ದರ. ಚಿರಂಜೀವಿಗೆ ಬೆಂಗಳೂರು ದಕ್ಷಿಣ ಜಿಲ್ಲೆಯ ಕನಕಪುರದ ಹಾರೋಹಳ್ಳಿ ತಾಲ್ಲೂಕಿನ ಪಿಚ್ಚನಕೆರೆ ಗ್ರಾಮದ ಭೂಮಿಕ ಎಂಬಾಕೆಯ ಜೊತೆ ಮದುವೆಯಾಗಿ ಇವರಿಗೆ ವೇದ ಎಂಬ ಒಂದು ಹೆಣ್ಣು ಮಗು ಇರುತ್ತದೆ.

ಹೆಮ್ಮಿಗೆಪುರ ಗ್ರಾಮದಲ್ಲಿ ದಿನನಿತ್ಯ ಮಣ್ಣು ತುಂಬಿದ ಲಾರಿಗಳು ಓಡಾಡುತ್ತಿರುತ್ತವೆ. ಆದರೆ ರಸ್ತೆಯ ಅಕ್ಕಪಕ್ಕ ಜನಸಾಮಾನ್ಯರಿಗೆ ತೊಂದರೆಯಾಗಬಾರದು ಎಂದು ಒದಲು ರಸ್ತೆಗೆ ನೀರು ಹಾಕಿಸಿ ನಂತರ ಮಣ್ಣು ತುಂಬಿದ ಲಾರಿಗಳು ಓಡಾಡುತ್ತಿದ್ದವು. ಚಿರಂಜೀವಿ ಮೊಟದಲೇ ಲಾರಿ ಡ್ರೈವರ್. ಈತ ಲಾರಿ ಚಲಾಯಿಸುತ್ತಿದ್ದ ಸಂದರ್ಭದಲ್ಲಿ ಹೆಮ್ಮಿಗೆಪುರದ ಲಿಂಗಮೂರ್ತಿಯ ಜೊತೆ ಮಾತಿಗೆ ಮಾತು ಬೆಳೆದು ಗಲಾಟೆಯಾಗಿ ವಿಕೋಪಗೊಂಡ ಚಿರಂಜೀವಿ ಅಲಿಯಾಸ್ ಲಿಂಗಮೂರ್ತಿಗೆ ಚಾಕುವಿನಿಂದ ಚುಚ್ಚಲಾಗಿ ಲಿಂಗಮೂರ್ತಿ ಸ್ಥಳದಲ್ಲೇ ಮೃತಪಟ್ಟ ಕಾರಣ ತಲಘಟ್ಟಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿ ಆರೋಪಿ ಚಿರಂಜೀವಿ ಅ|| ಚಿರುಗೆ ರೌಡಿಶೀಟರ್ ಪಟ್ಟ ಪಡೆದು ಜೈಲು ಸೇರಿದ್ದ. ಸುಮಾರು ಎಂಟು ತಿಂಗಳು ಸೆರೆಮನೆ ವಾಸ ಅನುಭವಿಸಿ ಇತ್ತೀಚೆಗೆ ಎರಡು ತಿಂಗಳಲ್ಲಿ ಜೈಲಿನಿಂದ ಬಿಡುಗಡೆಗೊಂಡು, ಹೆಮ್ಮಿಗೆಪುರದಲ್ಲಿ ಸೇಡಿನ ವಿಚಾರಕ್ಕೆ ಕಾಯುತ್ತಿದ್ದ ವಿಷಯ ತಿಳಿದು ತನ್ನ ಅಜ್ಜಿಯ ಊರಿಗೆ ಹೋಗಿ ವ್ಯವಸಾಯ ಮಾಡಿಕೊಂಡು ಜೀವನ ನಡೆಸುವುದಾಗಿ ನಿರ್ಧರಿಸಿ, ಹಾರೋಹಳ್ಳಿ ತಾಲ್ಲೂಕಿನ ಭದ್ರೇಗೌಡನದೊಡ್ಡಿ ಗ್ರಾಮಕ್ಕೆ ಬಂದು ನೆಲೆಸಿದ್ದ ಚಿರಂಜೀವಿ ಅ|| ಚಿರು.

ತನ್ನ ತಂದೆಯ ತವರೂರಾದ ಭದ್ರೇಗೌಡನದೊಡ್ಡಿಯಲ್ಲಿ ತಂದೆ ವೆಂಕಟರಮಣಪ್ಪರ ಹೆಸರಿನಲ್ಲಿ ವ್ಯವಸಾಯದ ಭೂಮಿ ಸುಮಾರು ಐದು ಎಕರೆ ಇದ್ದುದ್ದರಿಂದ, ಆ ಜಮೀನಿನಲ್ಲಿ ವ್ಯವಸಾಯ ಮಾಡಲು ನಿರ್ಧರಿಸಿಕೊಂಡಿದ್ದ. ಅಷ್ಟರಲ್ಲಿ ಒಬ್ಬ ಸ್ನೇಹಿತ ದೊಡ್ಡಕಲ್ಲಬಾಳು ಗ್ರಾಮದ ಪ್ರಜ್ವಲ್ ಎಂಬಾತ ಚಿರಂಜೀವಿಗೆ ಪರಿಚಯವಾಗಿ ಸ್ನೇಹಿತನಾಗಿರುತ್ತಾನೆ. ಪ್ರಜ್ವಲ್ ಮುಖಾಂತರ ಚಿರಂಜೀವಿಗೆ ಹೆಬ್ಬಿದರಮೆಟ್ಟಿಲು ಗ್ರಾಮದ ಪವನ್‌ಕುಮಾರ್ ಎಂಬಾತನನ್ನು ಪರಿಚಯ ಮಾಡಿಕೊಟ್ಟಿರುತ್ತಾನೆ. ಈ ಪವನ್ ಕುಮಾರ್ ತಂದೆ ಕೃಷ್ಣಪ್ಪ ಅಲಿಯಾಸ್ ಟಕ್ಕಿಪಿಕ್ಕಿ ಸುಮಾರು ಎಂಟರಿಂದ ಹತ್ತ ಲಾರಿಗಳ ಮಾಲೀಕ, ಸ್ಥಳೀಯವಾಗಿ ಟಕ್ಕಿಪಿಕ್ಕಿ ಎಂದೇ ಖ್ಯಾತಿಯಾಗಿರುತ್ತಾನೆ. ಚಿರಂಜೀವಿಗೆ ಸ್ವಲ್ಪ ದಿನಗಳ ನಂತರ ಪವನ್‌ಕುಮಾರ್ ಸಿಕ್ಕಿದಾಗ ಏನೋ ಟಕ್ಕಿಪಿಕ್ಕಿ ಮಗ ಎಂದು ಚಿರಂಜೀವಿ ಕರೆದಾಗ, ಪವನ್‌ಕುಮಾರ್‌ಗೆ ಸಿಕ್ಕಾಪಟ್ಟೆ ಸಿಟ್ಟು ಬಂದು ಗಲಾಟೆಯಾಗುವ ಹಂತಕ್ಕೆ ತಲುಪಿದಾಗ ಚಿರಂಜೀವಿ ಪವನ್ ಕುಮಾರವಗೆ ಸಾರಿ ಕೇಳಿದ್ದನಂತೆ.

ನಂತರ ಭದ್ರೇಗೌಡನ ದೊಡ್ಡಿ ಗ್ರಾಮದ ಚೇತನ್ ಎಂಬಾತನಿಗೆ ಚಿರಂಜೀವಿ ಅ|| ಚಿರು ಯಾವುದೋ ವಿಷಯಕ್ಕೆ ಗಲಾಟೆ ತೆಗೆದು ಚೇತನ್‌ಗೆ ಹೊಡೆಯಲಾಗಿ, ಚೇತನ್ ಮತ್ತು ಆತನ ಸ್ನೇಹಿತರ ಜೊತೆ ಸೇರಿಕೊಂಡು ಚಿರಂಜೀವಿಗೆ ಫುಲ್ ಅವಾಜ್ ಹಾಕಿದ್ದರಿಂದ, ರಾಮನಗರದ ಸೀಬಕಟ್ಟೆ ಅಭಿಗೌಡನ ಕಡೆಯಿಂದ ಚಿರಂಜೀವಿಗೆ ಫೋನ್ ಮಾಡಿ, ರಾಜಿ ಸಂಧಾನ ಮಾಡಿದ್ದರಂತೆ. ಇದಾದ ನಂತರ ಭದ್ರೇಗೌಡನದೊಡ್ಡಿಯಲ್ಲಿ ಬೀಗರ ಔತಣಕೂಟ ಕಾರ್ಯದಲ್ಲಿ ಪ್ರಜ್ವಲ್‌ಗೆ ಚಿರಂಜೀವಿ ಅಟ್ಟಾಡಿಸಿಕೊಂಡು ಹೊಡೆಯಲಾಗಿ, ಪವನ್‌ಕುಮಾರ್ ತಾಯಿ ತಮ್ಮ ರವಿ, ಈತ ಭದ್ರೇಗೌಡನ ದೊಡ್ಡಿಯಲ್ಲಿ ಮರಿ ಕಡಿಯುವ ರವಿ ಎಂದಾ ಫೇಮಸ್ ಆಗಿದ್ದ. ಈ ರವಿಯೂ ಸಹ ಚಿರಂಜೀವಿಗೆ ಪ್ರಜ್ವಲ್ ಜೊತೆ ಪವನ್‌ಕುಮಾರ್ ಜೊತೆ ರಾಜಿ ಮಾಡಿಸಿದ್ದ. ಈ ಎಲ್ಲಾ ವಿಚಾರಗಳನ್ನು ಮನದಲ್ಲಿಟ್ಟುಕೊಂಡು ಚಿರಂಜೀವಿಗೆ ಏನಾದರೂ ಮಾಡಲೇಬೇಕು. ಈತ ಮೊದಲೇ ಬೆಂಗಳೂರಿನಲ್ಲಿ ಕೊಲೆ ಮಾಡಿ ಜೈಲಿಗೆ ಹೋಗಿ ಬಂದಿದ್ದಾನೆ. ಇಲ್ಲಿ ಏನಾದರೂ ಅನಾಹುತ ಅವನಿಂದ ನಡೆಯುವ ಮೊದಲೇ ನಾವೇ ಚಿರಂಜೀವಿಯನ್ನ ಮುಗಿಸುವುದು ಸರಿಂದು ತೀರ್ಮಾನಿಸಿ ದಿನಾಂಕ 07-09-2025ರಂದು ಸಂಜೆ 4ರಿಂದ 5ರ ಸಮಯದಲ್ಲಿ ಪ್ರಜ್ವಲ್, ರವಿ, ಚೇತನ್ ಕುಮಾರ್ ಈ ಮೂರು ಜನ ಸೇರಿಕೊಂಡು ಸ್ಕೆಚ್ ಹಾಕಿಕೊಂಡು ಚಿರಂಜೀವಿ ಅ|| ಚಿರುಗೆ ಪವನ್ ಕುಮಾರ್ ಫೋನ್ ಮಾಡಿ ಭದ್ರೇಗೌಡನ ದೊಡ್ಡಿಯ ಕೆರೆ ಹತ್ತಿರ ಸಿಂಗಲ್ ಆಗಿ ಬಾ ಏನೋ ಮಾತಾಡೋದು ಇದೆ. ಸುಮ್ಮನೆ ನಮ್ಮಲ್ಲಿ ಈ ಜಗಳಗಳು ಯಾಕೆ ಎಂದು ಪುಸಲಾಯಿಸಿದಾಗ ಇದನ್ನೇ ನಂಬಿದ್ದ ಚಿರಂಜೀವಿ ರಾತ್ರಿ 9 ಗಂಟೆಯಷ್ಟರಲ್ಲಿ ಬರುತ್ತೇನೆ ಎಂದು ಹೇಳಿದ್ದನಂತೆ. ಚಿರಂಜೀವನ ಈ ದಿನ ರಾತ್ರಿ ಕೆರೆಯ ಬಳಿ ಬಂದೇ ಬರುತ್ತಾನೆ ಎಂದು ಖಚಿತಪಡಿಸಿಕೊಂಡ ಪ್ರಜ್ವಲ್, ರವಿ, ಪವನ್ ಕುಮಾರ್ ಲಾಂಗು, ಚಾಕುಗಳು ರೆಡಿ ಮಾಡಿಕೊಂಡು ಭದ್ರೇಗೌಡನದೊಡ್ಡಿಯ ಕೆರೆಯ ಬಳಿ ರಾತ್ರಿ 8.30ಕ್ಕೆ ಬಂದು ಪವನ್‌ಕುಮಾರ್ ಒಬ್ಬನೇ ಬಂದಿರುವುದು ಎಂದು ಚಿರಂಜೀವಿ ತಿಳಿದುಕೊಳ್ಳಲಿ ಎಂದು ರವಿ ಮತ್ತು ಪ್ರಜ್ವಲ್ ಅಲ್ಲೇ ಒಂದು ಮರದ ಪಕ್ಕದಲ್ಲೇ ಅವಿತುಕೊಂಡಿರುತ್ತಾರೆ. ಸುಮಾರು ರಾತ್ರಿ 9 ಗಂಟೆಗೆ ಚಿರಂಜೀವಿ ಅ|| ಚಿರು ಒಹಬ್ಬನೇ ಕೆರೆಯ ಬಳಿ ಬಂದು ಪವನ್‌ಕುಮಾರ್ ನೋಡಿ ಏನಪ್ಪಾ ನನಗೆ ಹೆದರಿಕೊಂಡು ಫೋನ್ ಮಾಡಿ ಕರೆಸಿದ್ದೀಯ. ಆಯ್ತು ಬಿಡು ನನವ ಅವಾ ನಿನಗೆ ಗೊತ್ತಾಗಿದೆಯಲ್ಲ ಅಷ್ಟೇ ಸಾಕು ಎಂದು ಮಾತನಾಡುತ್ತಿದ್ದಂತೆ, ಅವಿತುಕೊಂಡಿದ್ದ ರವಿ ಮತ್ತು ಪ್ರಜ್ವಲ್ ಬಂದಾಗ, ಏನಪ್ಪಾ ಇದು ಒಬ್ಬನೇ ಅಂತ ಹೇಳಿ ಮೂರು ಜನ ಬಂದಿದ್ದೀರ. ಆಯ್ತು ಪರವಾಗಿಲ್ಲ ಮತ್ತು ಏನ್ ಸಮಾಚಾರ ಏನೋ ಹಾಕಿಕೊಂಡೇ ಬಂದಿರೋ ಹೀಗೆಯಿದೆ ಎಂದು ಮಾತನಾಡಿಕೊಂಡೇ ಸಮಾರು ಎರಡು ಗಂಟೆಗಳ ಕಾಲ ಮಾತುಕತೆ ನಡೆಸಿಕೊಂಡು ಗಲಾಟೆ ಪ್ರಾರಂಭಿಸಿದ್ದರಂತೆ. ಅಷ್ಟರಲ್ಲಿ ಚಿರಂಜೀವಿ ಕುಡಿದ ಅಮಲಿನಲ್ಲಿದ್ದುದರಿಂದ ಈ ಮೂರು ಜನ ಆರೋಪಿಗಳಿಗೆ ಒಂದು ರೀತಿ ಒಳ್ಳೆಯದಾಯಿತು ಎಂದುಕೊಂಡಿದ್ದರಂತೆ. ಕೊನೆದಾಗಿ ರಾತ್ರಿ 11.30ರ ಸಮಯ ಚಿರಂಜೀವಿ ಅ|| ಚಿರು ಏನ್ರಪ್ಪ ಈಗ ಹೊಡೆಯುತ್ತಿರಾ ಅವಾಜ್ ಹಾಕಲಾಗಿ, ಪ್ರಜ್ವಲ್ ಎಂಬಾತ ಮೊದಲು ಚಾಕುವಿನಿಂದ ಚಿರಂಜೀವಿ ಕುತ್ತಿಗೆಗೆ ಪರಚಿದಾಗ ಸ್ವಲ್ಪ ಗಾಯವಾಗಿ ರಕ್ತಸ್ರಾವ ಆದಾಗ, ಚಿರಂಜೀವಿ ಅಲಿಯಾಸ್ ಚಿರು ಇವರು ನನ್ನನ್ನು ಮುಗಿಸಲು ಸ್ಕೆಚ್ ಹಾಕಿದ್ದ ಹಾಗೆ ಇದೆ. ಇಲ್ಲಿಂದ ಎಸ್ಕೇಪ್ ಆಗುವುದೇ ಸರಿ ಎಂದು ಕೆರೆಯ ಪಕ್ಕದಲ್ಲಿ ಅಲ್ಪ-ಸ್ವಲ್ಪ ಕೆಸರುಯಿರುವ ಕಡೆ ಎಸ್ಕೇಪ್ ಆಗಲ ಓಡಿ ಹೋಗುವ ಸಂದರ್ಭದಲ್ಲಿ ಕೆರೆಯ ಕೆಸರಿನ ಬದಿಯಲ್ಲಿ ಒಂದು ಕಾಲು ಸಿಲುಕಿಕೊಂಡು ಚಿರಂಜೀವಿ ಕೆಳಗೆ ಬಿದ್ದಾಗ, ಈ ಮೂವರು ಚಿರಂಜೀವಿ ನಮ್ಮನ್ನು ಏನಾದರೂ ಮಾಡಬಹುದು ಎಂದು ಭಾವಿಸಿ, ಭಯಭೀತರಾಗಿ ಚಿರಂಜೀವಿ ಅಲಿಯಾಸ್ ಚಿರುನ ತಲೆಗೆ ಲಾಂಗುವಿನಿಂದ ಕೊಚ್ಚಿ ಮತ್ತೆ ಚಾಕುವಿನಿಂದ ಸಿಕ್ಕ ಸಿಕ್ಕ ಕಡೆ ಮನಬಂದಂತೆ ಚುಚ್ಚಿ ಚುಚ್ಚಿ ಕೊಲೆ ಮಾಡಿ ಏನೂ ಗೊತ್ತಿಲ್ಲದ ಹಾಗೆ ಎಸ್ಕೇಪ್ ಆಗಿದ್ದಾರೆ. ಮಾರನೆಯ ದಿನ ಭದ್ರೇಗೌಡನ ದೊಡ್ಡಿಯ ಧನಕರು ಮೇಯಿಸಲು ಹೋದಾಗ ಕೆರೆಯ ಬಳಿ ಯಾರೋ ಶವವಾಗಿ ಬಿದ್ದಿರುವ ವಿಷಯ ತಿಳಿಸಿದಾಗ, ಬೆಂಗಳೂರು ದಕ್ಷಿಣ ಜಿಲ್ಲೆಯ ಎಸ್ಪಿ ಶ್ರೀನಿವಾಸ್‌ಗೌಡ, ಡಿವೈಎಸಿ ಶ್ರೀಗೌರಿ ಮತ್ತು ಕನಕಪುಉರ ಗ್ರಾಮಾಂತರ ಸಿಪಿಐ ವಿಕಾಸಘೆಲ್‌ಗೌಡ ನೇತೃತ್ವದಲ್ಲಿ ಗ್ರಾಮಾಂತರ ಪಿಎಸ್‌ಐ ಆಕಾಶ್ ಮತ್ತು ಸಿಬ್ಬಂದಿ ವರ್ಗ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಮೃತ ಚಿರಂಜೀವಿ ಅಲಿಯಾಸ್ ಚಿರು ಮೃತದೇಹವನ್ನು ದಯಾನಂದ ಸಾಗರ್ ಆಸ್ಪತ್ರೆಗೆ ಸ್ಥಳಾಂತರಿಸಿ, ಆಸ್ಪತ್ರಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಚಿರಂಜೀವಿ ಮೃತದೇಹವನ್ನು ಕುಟುಂಬದವರಿಗೆ ಹಸ್ತಾಂತರಿಸಿ, ಈ ಘಟನೆ ಸಂಬಂಧ ಕೊಲೆ ಪ್ರಕರಣ ದಾಖಲೀಸಿಕೊಂಡು, ಕನಕಪುರ ತಾಲ್ಲೂಕು ಸಾತನೂರು ಕಬ್ಬಾಳು ಹತ್ತಿರ ಆರೋಪಿಗಳ ಸುಳಿವು ಪತ್ತೆ ಮಾಡಿ ಬಂಧಿಸಿ ವಿಚಾರಣೆ ನಡೆಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುತ್ತಾರೆ. ಕಾರ್ಯಾಚರಣೆಯಲ್ಲಿ ಪಿಎಸ್‌ಐ ರುದ್ರಪ್ಪ, ಹೆಚ್‌ಸಿ ಮೋಹನ್, ಕೋಡಿಮುಟ್ಟಿ, ನವೀನ್, ವಿನೋದ್, ಮಂಜುನಾಥ್, ಉಳವಿ, ಪ್ರತಾಪ್, ಸಿದ್ದಲಿಂಗು ಇದ್ದರು.



ಪ್ರಮುಖ ಆರೋಪಿ ರವಿ


ಆರೋಪಿಗಳಾದ ಪ್ರಜ್ವಲ್ ಹಾಗೂ ಪವನ್‌ಕುಮಾರ್


ಎಸ್ಪಿ ಎಸ್. ಶ್ರೀನಿವಾಸಗೌಡ


ಎಎಸ್ಪಿ ಸುರೇಶ್



ಡಿವೈಎಸ್ಪಿ ಶ್ರೀ ಗಿರಿ


ಸಿಪಿಐ ಎಸ್. ವಿಕಾಸ್


ಕೃತ್ಯ ನಡೆದ ಸ್ಥಳ ಪರಿಶೀಲಿಸುತ್ತಿರುವ ಸಿಪಿಐ ವಿಕಾಸ್ ಮತ್ತು ತಂಡ


ಕೃತ್ಯಕ್ಕೆ ಬಳಸಿದ್ದ ಲಾಂಗು, ಚಾಕು ಸೀಜ್ ಮಾಡುತ್ತಿರುವುದು


ಇದೇ ಬೈಕ್‌ನಲ್ಲಿ ಚಿರಂಜೀವಿ ಬಂದಿದ್ದು



# ದೆಹಲಿ ಕೆಂಪು ಕೋಟೆ ಬಳಿ ಕಾರ್ ಬಾಂಬ್ ಸ್ಫೋಟ ಕುಕೃತ್ಯ!

# ಅಲ್ ಫಲಾಹ್ ಯೂನಿವರ್ಸಿಟಿ ವೈದ್ಯರೇ 'ವೈಟ್ ಕಾಲರ್' ಭಯೋತ್ಪಾದಕರು!!

✍ ಮಹದೇವ್ ಕೆಂಪಯ್ಯ

ವೈದ್ಯೋ ನಾರಾಯಣ ಹರಿ ಅನ್ನುತ್ತೇವೆ. ಪ್ರಾಣ ರಕ್ಷಿಸೋ ವೈದ್ಯರೇ ಪ್ರಾಣ ತೆಗೆಯೋ ರಾಕ್ಷಸರಾದರೆ ಹೇಗೆ?! ದೆಹಲಿಯ ಕೆಂಪು ಕೋಟೆ ಬಳಿ ನಡೆದಿರೋ ಬಾಂಬ್ ಸ್ಫೋಟಕ್ಕೆ ಆರು ಮಂದಿ ವೈದ್ಯರೇ ಕಾರಣ ಎಂಬ





ಸುದ್ದಿ ಸ್ಫೋಟವಾಗಿದೆ! ರಾಜಧಾನಿ ದೆಹಲಿ ಈಗಾಗಲೇ ಧೂಮದಿಂದ ತತ್ತರಿಸಿ, ಅಲ್ಲಿನ ಜನ ಉಸಿರಾಡಲು ಆಗದೆ ಸಾಯುತ್ತಿದ್ದಾರೆ. ಎಷ್ಟೋ ಜನ ಪ್ರಾಣ ಉಳಿಸಿಕೊಳ್ಳಲು ಬೆಂಗಳೂರು ಮುಂಬೈನತ್ತ ಗುಳೇ ಹೊರಟಿದ್ದಾರೆ. ಇಂಥ ಸಂದರ್ಭದಲ್ಲಿ ಐತಿಹಾಸಿಕ ಕೆಂಪು ಕೋಟೆಯ ಬಳಿ 10-11-2025 ಸೋಮವಾರ ಸಂಜೆ ಐಸಿಸ್ ಉಗ್ರರು ಕಾರ್ ಬಾಂಬ್ ಸ್ಫೋಟಿಸಿ ಅನ್ಯಾಯವಾಗಿ 12 ಜನರ ಪ್ರಾಣ ತೆಗೆದಿದ್ದಾರೆ!! ಈ ಸ್ಫೋಟಕ್ಕೆ ಅಮೋನಿಯಂ ನೈಟ್ರೇಟ್ ಬಳಸಲಾಗಿದ್ದು, ಈ ಕೃತ್ಯವನ್ನು 'ಬಾಂಬ್ ಸ್ಫೋಟ' ಹಾಗೂ 'ಉಗ್ರ ಕೃತ್ಯ' ಎಂದು ದಿಲ್ಲಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ಉಗ್ರವಾದದ ಪ್ರಕರಣಗಳ ತನಿಖೆಗೆಂದೇ ಇರುವ ರಾಷ್ಟ್ರೀಯ ತನಿಖಾ ತಂಡದ (ಎನ್‌ಐಎ) ಹೆಗಲಿಗೆ ಈ ಘಟನೆಯ ತನಿಖೆಯ ಜವಾಬ್ದಾರಿಯನ್ನು ವಹಿಸಲಾಗಿದೆ. ಅಪಾರ ಸಂಖ್ಯೆಯ ಸಾವು ನೋವಿಗೆ ಕಾರಣವಾದ ಹ್ಯುಂಡೈ ಐ20 ಕಾರನ್ನು ಚಲಾಯಿಸುತ್ತಿದ್ದ ವ್ಯಕ್ತಿಯನ್ನು ಜಮ್ಮು-ಕಾಶ್ಮೀರದ ಪುಲ್ವಾಮಾ ಮೂಲದ ಡಾ. ಉಮರ್ ನಬಿ ಎಂದು ಗುರುತಿಸಲಾಗಿದೆ. ಇದು ಆತ್ಮಹತ್ಯಾ ದಾಳಿ! ಇದರ ಹಿಂದೆ ಪಾಕಿಸ್ತಾನದ ಜೈಷ್ ಎ ಮೊಹಮ್ಮದ್ ಉಗ್ರ ಸಂಘಟನೆಯ ಕೈವಾಡ ಇರಬಹುದು ಎಂದು ಶಂಕಿಸಲಾಗಿದೆ!!

ಏಕೆಂದರೆ, ಡಾ. ಉಮರ್ ನಬಿ ಫರೀದಾಬಾದ್‌ನ ಅಲ್ ಫಲಾ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ವೈದ್ಯನಾಗಿದ್ದ. ಇದೇ ಕಾಲೇಜಿನ ಹಲವು ವೈದ್ಯರನ್ನು ಉಗ್ರ ಚಟುವಟಿಕೆ ಆರೋಪದ ಮೇರೆಗೆ ಈಗಾಗಲೇ ಬಂಧಿಸಲಾಗಿದೆ. ಈ ವೈದ್ಯರ ಪೈಕಿ ಭಾರತದಲ್ಲಿ ಮಹಿಳಾ ಜೈಷ್ ಎ ಮೊಹಮ್ಮದ್ ಘಟಕದ ಹೊಣೆ ಹೊರಲು ಸಿದ್ಧಳಾಗಿದ್ದ ಡಾ. ಶಾಹೀನ್ ಶಾಹಿದ್ ಕೂಡ ಇದ್ದಾಳೆ. ಶಾಹೀನ್‌ಗೂ ಡಾ. ಉಮರ್ ನಬಿಗೂ ಅಂಟು ನಂಟು ಇತ್ತೆನ್ನಲಾಗಿದೆ. ಹೀಗಾಗಿ ಈ ಇಡೀ ಕೃತ್ಯದ ಹಿಂದೆ ಪಾಕಿಸ್ತಾನ ಮೂಲದ ಜೈಷ್ ಎ ಮೊಹಮ್ಮದ್ ಸಂಘಟನೆಯ ಕೈವಾಡವಿದೆ ಎಂಬ ಗುಮಾನಿ ವ್ಯಕ್ತವಾಗಿದೆ. ಎನ್‌ಐಎ ಕೂಡ ಇದೇ ದೃಷ್ಟಿಕೋನದಲ್ಲಿ ತನಿಖೆ ನಡೆಸುತ್ತಿದೆ.

### ಸಿಕ್ಕಿಬೀಳೊ ಭಯದಲ್ಲಿ ಎಸ್ಕೇಪ್!

ಫರೀದಾಬಾದ್ ಅಲ್ ಫಲಾ ವೈದ್ಯ ಕಾಲೇಜಿನಲ್ಲಿನ ಮೂವರು ವೈದ್ಯರು ಸೇರಿ ಎಂಟು ಮಂದಿ ಮೇಲೆ ಈ ಉಗ್ರ ಕೃತ್ಯದ ಆರೋಪ ಹೊರಿಸಿ ಕಳೆದ ಸೋಮವಾರ ಪೊಲೀಸರು ಬಂಧಿಸಿದ್ದಾರೆ. ಇದರ ಬೆನ್ನಲ್ಲೇ ಬಂಧಿತರ ಜತೆ ನಂಟು ಹೊಂದಿದ್ದ ಅದೇ ಕಾಲೇಜಿನ ವೈದ್ಯ ಡಾ. ಉಮರ್ ನಬಿ ಭಯಭೀತನಾಗಿದ್ದು, ಆತ ಫರೀದಾಬಾದ್‌ನಿಂದ ಎಸ್ಕೇಪ್ ಆಗಿ ದಿಲ್ಲಿಗೆ ಐ20 ಕಾರಿನಲ್ಲಿ ಬಂದಿದ್ದ ಎನ್ನಲಾಗಿದೆ. ಈ ದುಷ್ಕೃತ್ಯ ಎಸಗುವ ಮುನ್ನ ದಿಲ್ಲಿಯ ಅನೇಕ ಭಾಗಗಳಲ್ಲಿ ಸುತ್ತಾಡಿದ್ದನಂತೆ.

ಸೋಮವಾರ ಮಧ್ಯಾಹ್ನ 3.19ಕ್ಕೆ ಕೆಂಪುಕೋಟೆ ಪಾರ್ಕಿಂಗ್‌ಗೆ ಬಂದು ಸತತ ಮೂರು ತಾಸುಗಳ ಕಾಲ ಅಲ್ಲಿಯೇ ಕಾರು ನಿಲ್ಲಿಸಿ, ಕಾರಿನಿಂದ ಹೊರಬರದೇ ಆತ ಅಲ್ಲೇ ಕಾದಿದ್ದ. ಬಹುಶಃ ಯಾರದ್ದೋ ಸಂದೇಶ ಅಥವಾ ಬರುವಿಕೆಗೆ ಆತ ಕಾದಿರಬಹುದು. ಬಳಿಕ ಅಲ್ಲಿಂದ ಸಂಜೆ 6.30ರ ಸುಮಾರಿಗೆ ಹೊರಟ ಆತ ಸಂಜೆ 6.52ಕ್ಕೆ ಕೆಂಪು ಕೋಟೆ ಮೆಟ್ರೋ ಸ್ಟೇಷನ್ ಸಿಗ್ನಲ್‌ನಲ್ಲಿ ಕಾರು ಸ್ಫೋಟ ನಡೆಸಿದ್ದಾನೆ. ಅದಾಗಲೇ ಸಿಕ್ಕಿಬಿದ್ದಿದ್ದ ತನ್ನವರ ಬಂಧನದಿಂದ ಹತಾಶೆಗೆ ಒಳಗಾಗಿ ಆತ ಈ ಕೃತ್ಯ ಎಸಗಿರಬಹುದು ಎಂದು ತನಿಖಾ ತಂಡಗಳು ಶಂಕಿಸಿವೆ.



ಆದರೆ ಇನ್ನೂ ಕೆಲವು ಮೂಲಗಳು, ತನ್ನ ಹ್ಯಾಂಡ್ಲರ್‌ಗಳ ಸೂಚನೆ ಮೇರೆಗೆ ಆತ್ಮಹತ್ಯಾ ದಾಳಿ ಕೂಡ ನಡೆಸಿರಬಹುದು ಎಂದು ಶಂಕಿಸಿವೆ. ಈ ಕಾರಿನಲ್ಲಿ ಆತ ಸ್ಫೋಟಕ್ಕೆ ಅಮೋನಿಯಂ ನೈಟ್ರೇಟ್, ಇಂಧನ ತೈಲ ಮತ್ತು ಡಿಟೋನೇಟರ್‌ಗಳನ್ನು ಬಳಸಿರಬಹುದು ಎಂದು ಪೊಲೀಸರು ಹೇಳಿದ್ದಾರೆ. ಇದೇ ವೇಳೆ, ಆತನ ಅಂಗಾಂಗಗಳು ಕಾರಿನ ಬಳಿ ಸಿಕ್ಕಿದ್ದು, ಅವು ಆತನದ್ದೇ?



ಅಲ್ಲವೇ? ಎಂದು ಖಚಿತಪಡಿಸಿಕೊಳ್ಳಲು ಡಿಎನ್‌ಎ ಪರೀಕ್ಷೆಗೆ ದಿಲ್ಲಿ ಪೊಲೀಸರು ನಿರ್ಧರಿಸಿದ್ದಾರೆ.

### ಇಷ್ಟಕ್ಕೂ ಕಾರು ಯಾರದ್ದು?

ಸ್ಫೋಟ ಮತ್ತು ಭಯೋತ್ಪಾದಕ ಮಾಡ್ಯೂಲ್ ಬಗ್ಗೆ ತನಿಖೆ ಮುಂದುವರೆದಿದ್ದು, ತನಿಖೆಯ ಭಾಗವಾಗಿ ಆ ಕಾರ್ ಯಾರದ್ದು ಅನ್ನೋದನ್ನು ಕಂಡು ಹಿಡಿಯಲಾಗಿದೆ. ದಕ್ಷಿಣ ಕಾಶ್ಮೀರದ ಪುಲ್ವಾಮಾ ಜಿಲ್ಲೆಯ ತಾರೀಖ್ ಎಂಬ ವ್ಯಕ್ತಿ ಉಮರ್‌ಗೆ ಐ20 ಕಾರ್ ಅನ್ನು ಮಾರಿದ್ದ. ಇದಕ್ಕೂ ಮುನ್ನ ತಾರೀಖ್, ಹರ್ಯಾಣದ ವ್ಯಕ್ತಿಯೊಬ್ಬನಿಂದ ಈ ಕಾರು ಖರೀದಿಸಿದ್ದ ಎಂದು ಗೊತ್ತಾಗಿದೆ. ತಾರೀಖ್ ಈಗಾಗಲೇ ಪೊಲೀಸ್ ವಶದಲ್ಲಿದ್ದಾನೆ.

### ಡಾ.ಶಾಹಿನ್ ಬದುಕೇ ನಿಗೂಢ!

ಕೆಂಪುಕೋಟೆ ಬಳಿ ಕಾರ್ ಸ್ಫೋಟ ಪ್ರಕರಣದ ತನಿಖೆ ನಡೆಸುತ್ತಿರುವ ತನಿಖಾಧಿಕಾರಿಗಳು ಶಂಕಿತರ ಹಿನ್ನೆಲೆ ಜಾಲಾಡುವ ವೇಳೆ ಹಲವು ಸ್ಫೋಟಕ ವಿಚಾರಗಳು ಬೆಳಕಿಗೆ ಬರುತ್ತಿವೆ. ಅದರಲ್ಲೂ ಭಾರತದಲ್ಲಿ ಪಾಕಿಸ್ತಾನದ ಜೈಶ್ ಎ ಮೊಹಮ್ಮದ್ ಉಗ್ರ ಸಂಘಟನೆಯ ಮಹಿಳಾ ವಿಭಾಗ ಸ್ಥಾಪನೆಯ ಹೊಣೆ ಹೊತ್ತಿದ್ದ ವೈದ್ಯೆ ಶಾಹೀನ್ ಶಾಹಿದ್ (46) ಬದುಕೇ ನಿಗೂಢ ರಹಸ್ಯವಾಗಿ ಉಳಿದಿದೆ!



ಹೌದು, ಹರಿಯಾಣದ ಫರಿದಾಬಾದ್‌ನಲ್ಲಿ ಬೃಹತ್ ಸ್ಫೋಟಕಗಳ ಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಉತ್ತರ ಪ್ರದೇಶ ಲಕ್ನೋದ ಕೈಸರ್‌ಬಾಗ್ ನಿವಾಸಿಯಾದ ಶಾಹೀನ್‌ಳನ್ನು ಬಂಧಿಸಲಾಗಿದೆ. ರಷ್ಯಾದ ಅಸಾಲ್ಟ್ ರೈಫಲ್ ಮತ್ತು ಲೈವ್ ಕಾಟ್ರಿಂಜ್‌ಗಳನ್ನು ವಶಪಡಿಸಿಕೊಂಡ ನಂತರ ಪೊಲೀಸರು ಆಕೆಯನ್ನು ಬಂಧಿಸಿದ್ದಾರೆ. ಲಕ್ನೋ ಸರ್ಕಾರಿ ಬಾಲಕಿಯರ ಕಾಲೇಜಿನಲ್ಲಿ ಓದಿದ್ದ ಶಾಹೀನ್ ಶಾಹಿದ್ 10 ಮತ್ತು 12 ನೇ ತರಗತಿ ಪರೀಕ್ಷೆಯಲ್ಲಿ ಟಾಪರ್ ಆಗಿದ್ದಳು. ಉತ್ತರ ಪ್ರದೇಶದ ಸಾರ್ವಜನಿಕ ಸೇವಾ ಆಯೋಗದ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದ ಶಾಹೀನ್ ಪ್ರಯಾಗ್‌ರಾಜ್‌ನಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಎಂಬಿಬಿಎಸ್ ಮತ್ತು ಎಂಡಿ ಪದವಿ ಪಡೆದಿದ್ದಾಳೆ.

ನಂತರ 2009ರಲ್ಲಿ ಕಾನ್ಪುರದ ಗಣೇಶ ಶಂಕರ ವಿದ್ಯಾರ್ಥಿ ಮೆಡಿಕಲ್ ಕಾಲೇಜಿನಲ್ಲಿ (GSVM) ಔಷಧ ಶಾಸ್ತ್ರ ವಿಭಾಗದ ಅಸಿಸ್ಟೆಂಟ್ ಪ್ರೊಫೆಸರ್ ಕರ್ತವ್ಯಕ್ಕೆ ಹಾಜರಾಗುತ್ತಾಳೆ. ಆರು ತಿಂಗಳ ನಂತರ ಕನೌಜ್ ಮೆಡಿಕಲ್ ಕಾಲೇಜಿಗೆ ಆಕೆಯನ್ನು ವರ್ಗಾವಣೆ ಮಾಡಲಾಗುತ್ತದೆ ಮತ್ತು 2010ರಲ್ಲಿ ಮರಳಿ ಕಾನ್ಪುರಕ್ಕೆ ಬರುತ್ತಾಳೆ. ಜಿಎಸ್‌ವಿಎಂ ಕಾಲೇಜಿನಲ್ಲಿ 2013ರವರೆಗೆ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಶಾಹೀನ್ ಉದ್ಯೋಗ ಮಾಡಿದ್ದಾಳೆ. ಈ ವೇಳೆ ನೇತ್ರಶಾಸ್ತ್ರಜ್ಞ ಜಾಫರ್ ಸಯೀದ್ ಅವರನ್ನು ಮದುವೆಯಾಗುತ್ತಾಳೆ. ಮದುವೆಯಾದ ನಂತರ ದಂಪತಿ ಮಧ್ಯೆ ಆಗಾಗ ಜಗಳ ನಡೆಯುತ್ತಿರುತ್ತದೆ. ಹೀಗಾಗಿ ಪತಿಗೆ 2015ರಲ್ಲಿ ತಲಾಖ್ ನೀಡಿ ಲಕ್ನೋದಲ್ಲಿ ಶಾಹೀನ್ ವಾಸಿಸುತ್ತಿದ್ದಳು. ಪತಿಗೆ ವಿಚ್ಛೇದನ ನೀಡಿದ ಬಳಿಕ ಉಗ್ರ ಮುಜಮ್ಮಿಲ್ ಜೊತೆ ನಂಟು ಬೆಳೆಸಿದ್ದಾಳೆ.




ಕಾಲೇಜು ದಾಖಲೆಗಳ ಪ್ರಕಾರ, ಶಾಹೀನ್ 2013ರಲ್ಲಿ ಯಾವುದೇ ಅಧಿಕೃತ ರಜೆ ಅಥವಾ ಸೂಚನೆ ನೀಡದೇ ಕರ್ತವ್ಯಕ್ಕೆ ಗೈರು ಹಾಜರಿ ಹಾಕಿದ್ದಳು. ಕಾಲೇಜು ಆಡಳಿತ ಹಲವಾರು ಸೂಚನೆಗಳನ್ನು ನೀಡಿದ್ದರೂ ಆಕೆ ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ಸಹೋದ್ಯೋಗಿಗಳು ಅವಳನ್ನು ಸಂಪರ್ಕಿಸಲು ಪ್ರಯತ್ನಿಸಿದ್ದರೂ ಅವರ ಸಂಪರ್ಕಕ್ಕೆ ಸಿಕ್ಕಿರಲಿಲ್ಲ. ಅಂತಿಮವಾಗಿ 2021ರಲ್ಲಿ ಸರ್ಕಾರ ಆಕೆಯನ್ನು ಸೇವೆಯಿಂದ ಮುಕ್ತಗೊಳಿಸಿತ್ತು.

ಜಿಎಸ್‌ವಿಎಂ ತೊರೆದ ಬಳಿಕ ಶಾಹೀನ್ ಹರಿಯಾಣದ ಅಲ್‌ಫಲಾಹ್ ವಿಶ್ವವಿದ್ಯಾಲಯದೊಂದಿಗೆ ಸಂಬಂಧ ಬೆಳೆಸಿ ಅಲ್ಲಿ ಮುಜಮ್ಮಿಲ್‌ನನ್ನು ಭೇಟಿಯಾಗಿದ್ದಾಳೆ. ಶಾಹೀನ್ ಜೈಶ್ ಮಹಿಳಾ ವಿಂಗ್‌ಗೆ ಭಾರತದ ನಾಯಕಿಯಾಗಿದ್ದು, ಜೆಇಎಂ ಸಂಸ್ಥಾಪಕ ಮಸೂದ್ ಅಜರ್‌ನ ಸಹೋದರಿ ಸಾದಿಯಾ ಅಜರ್ ನೇತೃತ್ವದ ಜೆಇಎಂನ ಮಹಿಳಾ ವಿಭಾಗವಾದ ಜಮಾತ್ ಉಲ್‌ಮೊಮಿನಾತ್‌ನ ಕಮಾಂಡ್ ಜವಾಬ್ದಾರಿಯನ್ನು ಸಹ ವಹಿಸಿಕೊಂಡಿದ್ದಳು ಎನ್ನಲಾಗಿದೆ. ಒಟ್ಟಾರೆ, ಈಕೆಯ ಬದುಕೇ ನಿಗೂಢವಾಗಿ ಗೋಚರಿಸುತ್ತಿದ್ದೂ, ಎನ್‌ಎಐ ನಿಪುಣರು ವಿಚಾರಣೆ ನಡೆಸುತ್ತಿದ್ದಾರೆ.

### ಅಲ್ ಫಲಾ ವಿವಿ...

ಅಂದಹಾಗೆ, ದಿಲ್ಲಿಯ ಕೆಂಪುಕೋಟೆ ಸ್ಫೋಟದ ಹಿನ್ನಲೆಯಲ್ಲಿ ಫರಿದಾಬಾದ್ ನಲ್ಲಿರೋ 'ಅಲ್ ಫಲಾ' ವಿವಿಯ ವೈದ್ಯರ ಮೇಲೆ ತನಿಖಾಧಿಕಾರಿಗಳ ದೃಷ್ಟಿ ನೆಟ್ಟಿದೆ. ಆ ವಿವಿಯಲ್ಲಿ ಕಾಶ್ಮೀರ ಮೂಲದ ಶೇ.40 ವೈದ್ಯರಿದ್ದಾರೆ. ಅವರಲ್ಲಿ ಹಲವು ವೈದ್ಯರು ಉಗ್ರ ಚಟುವಟಿಕೆಗಳಲ್ಲಿ ತೊಡಗಿರುವುದು ಖಚಿತವಾಗುತ್ತಿದ್ದಂತೆ

☞ 13



ದೆಹಲಿಯಲ್ಲಿ ನಡೆದ ಸ್ಫೋಟದ ಹಿಂದೆ ಒಂದು ಎಎನ್‌ಎಫ್‌ಒ ಬಾಂಬ್ ಇತ್ತು. ಎಎನ್‌ಎಫ್‌ಒ ಬಾಂಬ್ ಅನ್ನು ಅಮೋನಿಯಂ ನೈಟ್ರೇಟ್ ಮತ್ತು ಇಂಧನ ತೈಲವನ್ನು ಬಳಸಿಕೊಂಡು ನಿರ್ಮಿಸಲಾಗಿದೆ ಎಂಬುದು ತನಿಖೆಯಿಂದ ಗೊತ್ತಾಗಿದೆ. ಇದನ್ನು ಓದುವಾಗ, ಅಮೋನಿಯಂ ನೈಟ್ರೇಟ್ ಎನ್ನುವುದು ಯಾವುದೋ ಸಂಕೀರ್ಣ ರಾಸಾಯನಿಕ ಎನ್ನುವಂತೆ ತೋರಬಹುದು. ಆದರೆ, ವಾಸ್ತವವಾಗಿ, ಅಮೋನಿಯಂ ನೈಟ್ರೇಟ್ ಎನ್ನುವುದು ರೈತರು ತಮ್ಮ ದೈನಂದಿನ ಕಾರ್ಯಗಳಲ್ಲಿ ಬಳಸುವಂತಹ ಸಾಮಾನ್ಯ ರಸಗೊಬ್ಬರ! ಇದು ಇಂಧನ ತೈಲದೊಡನೆ ಮಿಶ್ರಗೊಂಡಾಗ, ಈ ಅಮೋನಿಯಂ ನೈಟ್ರೇಟ್ ಸ್ಫೋಟಕವಾಗಿ ಪರಿವರ್ತನೆಗೊಂಡು, ಅನಾಹುತಕಾರಿ ಆಗುತ್ತದೆ ಗೊತ್ತೇ?

## ದಿನ ಬಳಕೆಯ ವಸ್ತುಗಳೇ ಆಯುಧವಾದಾಗ?!

ದಿಲ್ಲಿಗೆ ಅಂಟಿಕೊಂಡೆ ಇರುವ ಹರಿಯಾಣದ ಫರೀದಾಬಾದ್‌ನಲ್ಲಿ ಹಿಂದೆ ನಡೆದ ದಾಳಿಯ ವೇಳೆ, ಪೊಲೀಸರಿಗೆ ಎರಡು ಮನೆಗಳಲ್ಲಿ ಅಂದಾಜು 2900 ಕೆಜಿಗಳಷ್ಟು ಸ್ಫೋಟಕಗಳು ಲಭಿಸಿದ್ದವು. ಅದರೊಡನೆ, ಕೆಂಪು ಕೋಟೆಯ ದಾಳಿಯಲ್ಲಿ ಬಳಸಲಾದ ಅದೇ ಅಮೋನಿಯಂ ನೈಟ್ರೇಟ್ 350 ಕೆಜಿಗಳಷ್ಟು ಲಭಿಸಿತ್ತು. ಇಷ್ಟು ಪ್ರಮಾಣದ ಸ್ಫೋಟಕಗಳು ಹಲವಾರು ಅನಾಹುತಕಾರಿ ದಾಳಿಗಳನ್ನು ನಡೆಸಲು ಸಾಕಾಗುವಷ್ಟಿತ್ತು. ದಾಳಿಯ ವೇಳೆ ಪತ್ತೆಹಚ್ಚಲಾದ ಸ್ಫೋಟಕಗಳ ಅಪಾರ ಪ್ರಮಾಣವೇ ಯಾರ ಕಣ್ಣಿಗೂ ಬೀಳದಂತೆ ಅದು ಹೇಗೆ ಇಷ್ಟೊಂದು ಅಗಾಧ ಪ್ರಮಾಣದ ಸ್ಫೋಟಕ ವಸ್ತುಗಳನ್ನು ಸಂಗ್ರಹಿಸಿ ಇಡಲಾಯಿತು ಎಂಬ ಅನುಮಾನಗಳನ್ನು ಮೂಡಿಸಿದೆ.

ಗುಪ್ತಚರ ಮೂಲಗಳ ಪ್ರಕಾರ, ಕೆಂಪು ಕೋಟೆಯ ದಾಳಿಯಲ್ಲಿ ನಾಲ್ವರು ಭಯೋತ್ಪಾದಕರು ಭಾಗಿಗಳಾಗಿದ್ದಾರೆ. ಅವರಲ್ಲಿ ಮೂವರು ಪುರುಷರು ಮತ್ತು ಓರ್ವ ಮಹಿಳೆಯಾಗಿದ್ದು, ಅವರೆಲ್ಲರೂ ತಾವು ವೈದ್ಯರು ಎಂದು ಹೇಳಿಕೊಂಡಿದ್ದರು. ಈ ಮಾಹಿತಿಯೇ ನಿಜಕ್ಕೂ ಆಘಾತಕಾರಿಯಾಗಿದೆ. ವೈದ್ಯರನ್ನು ಸಮಾಜ ಆರೋಗ್ಯ ಮತ್ತು ನಂಬಿಕೆಯ ಪ್ರತೀಕ ಎಂಬಂತೆ ಪರಿಗಣಿಸುತ್ತದೆ. ಈ ಉದಾತ್ತ ವೃತ್ತಿಯನ್ನೇ ಗುರಾಣಿಯಾಗಿ ಬಳಸಿಕೊಂಡು, ಭಯೋತ್ಪಾದಕ ಗುಂಪುಗಳು ವೈದ್ಯಕೀಯ ಸಿಬ್ಬಂದಿಗಳ ಮೇಲಿನ ನಮ್ಮ ನಂಬಿಕೆಯನ್ನೇ ಹೇಗೆ ದುರುಪಯೋಗ ಪಡಿಸುತ್ತಾರೆ ಎನ್ನುವುದಕ್ಕೆ ಈ ಘಟನೆ ಉದಾಹರಣೆಯಾಗಿದೆ. ಈ ಘಟನೆಗೆ ಸಂಬಂಧ ಪಟ್ಟಂತೆ ಮೂವರು ಶಂಕಿತ ವೈದ್ಯರನ್ನು ಈಗಾಗಲೇ ಬಂಧಿಸಲಾಗಿದೆ: ಆದಿಲ್ ಅಹ್ಮದ್ ರಾಥರ್, ಮುಜಮ್ಮಿಲ್ ಶಕೀಲ್, ಮತ್ತು ಶಾಹೀನಾ ಶಾಹಿದ್ ಬಂಧಿತರು. ನಾಲ್ಕನೇ ವ್ಯಕ್ತಿಯಾದ, ಉಮರ್ ಮೊಹಮ್ಮದ್ ಎಂಬಾತ ಈ ಸ್ಫೋಟದಲ್ಲೇ ಸಾವಿಗೀಡಾಗಿದ್ದಾನೆ ಎನ್ನಲಾಗಿದೆ!

ಫೊರೆನ್ಸಿಕ್ ಸಾಕ್ಷಿಗಳೂ ಸಹ ಬಾಂಬ್ ಸ್ವಯಂಚಾಲಿತವಾಗಿ ಸ್ಫೋಟಿಸಿಲ್ಲ ಎಂದು ತೋರಿಸಿದ್ದು, ಅದನ್ನು ಮಾನವರೇ ಡೆಟೊನೇಟ್ ಮಾಡಿದ್ದಾರೆ ಎಂದಿವೆ. ಸಿಸಿಟಿವಿ ದೃಶ್ಯಾವಳಿಗಳೂ ಸಹ ಸೋಮವಾರ ಬೆಳಗ್ಗೆ ದೆಹಲಿಗೆ ಪ್ರವೇಶಿಸಿದ ಬಳಿಕ ಕಾರಿನಿಂದ ಕೆಳಗೆ ಇಳಿದಿಲ್ಲ ಎನ್ನುವುದನ್ನು ಸಾಬೀತುಪಡಿಸಿವೆ.

ಉಮರ್ ಮೊಹಮ್ಮದ್ ಯೋಜನೆ ರೂಪಿಸಲು ಮತ್ತು ಸಂವಹನ ನಡೆಸಲು ಟೆಲಿಗ್ರಾಮ್ ಆ್ಯಪ್ ಬಳಸುವ ಮೂಲಭೂತವಾದಿ ವೈದ್ಯರ ಗುಂಪಿನ ಸದಸ್ಯನಾಗಿದ್ದ. ಜೆಇಎಂ ಭಯೋತ್ಪಾದಕ ಗುಂಪಿನೊಡನೆ ಸಂಬಂಧ ಹೊಂದಿರುವ ಆರೋಪದಲ್ಲಿ ಆತನ ಇಬ್ಬರು ಸಹಯೋಗಿಗಳು ಬಂಧನಕ್ಕೊಳಗಾದ ಸುದ್ದಿ ತಿಳಿದು, ಗಾಬರಿಗೊಂಡ ಉಮರ್ ಮೊಹಮ್ಮದ್ ಸ್ಫೋಟ ನಡೆಸಿದ್ದಾನೆ ಎನ್ನಲಾಗಿದೆ.

ನಮ್ಮಲ್ಲಿ ಬಹುತೇಕ ಜನರಿಗೆ ಟೆಲಿಗ್ರಾಮ್ ಆ್ಯಪ್ ಎನ್ನುವುದು ಸ್ನೇಹಿತರೊಡನೆ ಸಂದೇಶ ಕಳುಹಿಸಲು, ಮತ್ತು ಆಸಕ್ತಿಯುತ ಗುಂಪುಗಳಿಗೆ ಸೇರಲು ಇರುವ ಒಂದು ಆ್ಯಪ್ ಅಷ್ಟೇ. ಆದರೆ ಭಯೋತ್ಪಾದಕರು ಅದರಲ್ಲೂ ಇನ್ನೊಂದು ಆಯಾಮವನ್ನು ಕಂಡುಕೊಂಡಿದ್ದಾರೆ. ಈ ಆ್ಯಪಿನ ಸರಳ ವಿನ್ಯಾಸ, ಸಾರ್ವಜನಿಕ ಚಾನೆಲ್‌ಗಳು, ಮತ್ತು ಪ್ರಬಲವಾದ ಎನ್‌ಕ್ರಿಪ್ಷನ್ ವ್ಯವಸ್ಥೆಗಳು ಟೆಲಿಗ್ರಾಮ್ ಅನ್ನು ಜಗತ್ತಿನಾದ್ಯಂತ ಜನಪ್ರಿಯವಾಗಿಸಿವೆ. ಆದರೆ, ಇದೇ ವೈಶಿಷ್ಟ್ಯಗಳು ಅಪರಾಧ ಚಟುವಟಿಕೆಗಳಿಗೂ ಟೆಲಿಗ್ರಾಮ್ ಆ್ಯಪನ್ನು ಆಕರ್ಷಕವಾಗಿಸಿವೆ.

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಜೆಲೆನ್‌ಸ್ಕಿ ಅವರಂತಹ ಟೆಲಿಗ್ರಾಮ್ ಬಳಕೆದಾರರು ಆ ಆ್ಯಪನ್ನು ರಷ್ಯಾ ದಾಳಿಯ ಸಂದರ್ಭದಲ್ಲಿ ಜನರನ್ನು ಒಗ್ಗೂಡಿಸುವಂತಹ ಸಕಾರಾತ್ಮಕ ಉದ್ದೇಶಗಳಿಗೆ ಬಳಸಿಕೊಂಡರೆ, ಈಗ ಭಯೋತ್ಪಾದನೆ, ಅಪರಾಧ, ಸುಳ್ಳು ಸುದ್ದಿ ಹಬ್ಬಿಸುವುದು, ಮತ್ತು ದ್ವೇಷ ಭಾಷಣಗಳಿಗೂ ಟೆಲಿಗ್ರಾಮ್ ಬಳಕೆಯಾಗುತ್ತಿದೆ.

ತನಿಖಾಧಿಕಾರಿಗಳ ಪ್ರಕಾರ, ಬಂಧಿತ ಶಹೀನಾ ಶಾಹಿದ್ ಜೆಇಎಂನ ಭಾರತೀಯ ಕಾರ್ಯಾಚರಣೆಯ ಮಹಿಳಾ ವಿಭಾಗವಾದ ಜಮಾತ್ ಉಲ್ ಮುಮಿನತ್ ಎಂಬುದರ ಮುಖ್ಯಸ್ಥೆ ಎಂದು ಭಾವಿಸಿದ್ದಾರೆ. ಈ ಮಹಿಳಾ ವಿಭಾಗವನ್ನು ಆಪರೇಷನ್ ಸಿಂದೂರ ಕಾರ್ಯಾಚರಣೆಯ ಬಳಿಕ, 2025ರ ಆಗಸ್ಟ್ ತಿಂಗಳಲ್ಲಿ ಸ್ಥಾಪಿಸಲಾಯಿತು ಎನ್ನಲಾಗಿದೆ. ಈ ಗುಂಪಿಗೆ ಮಸೂದ್ ಅಜ್ಹರ್ ಸೋದರಿಣ ಸಾದಿಯಾ ಅಜ್ಹರ್‌ಳನ್ನು ಮುಖ್ಯಸ್ಥೆಯಾಗಿಸಲಾಗಿತ್ತು. ಈಗ ಆಕೆ ತನ್ನ ಸೋದರಿ ಸಾದಿಯಾ ಅಜ್ಹರ್ ಜೊತೆಗೂಡಿ, ಮಹಿಳೆಯರ ಮೇಲೆ ಪ್ರಭಾವ ಬೀರಲು ಮತ್ತು ಮಹಿಳಾ ಭಯೋತ್ಪಾದಕರನ್ನು ನೇಮಕಗೊಳಿಸಲು 40 ನಿಮಿಷಗಳ ಆನ್‌ಲೈನ್ ತರಗತಿಗಳನ್ನು ನಡೆಸುತ್ತಿದ್ದಾಳೆ ಎನ್ನಲಾಗಿದೆ.

ಇದು ಭಯೋತ್ಪಾದನಾ ಕಾರ್ಯತಂತ್ರಗಳಲ್ಲಿ ಅಪಾಯಕಾರಿ ಪ್ರಗತಿಯನ್ನು ಪ್ರತಿನಿಧಿಸುತ್ತಿದೆ. ಮಹಿಳೆಯರನ್ನು ಗುರಿಯಾಗಿಸಿಕೊಂಡು ನೇಮಕಾತಿ ನಡೆಸುವುದರಿಂದ, ಈ ಗುಂಪುಗಳು ತಮ್ಮ ವ್ಯಾಪ್ತಿಯನ್ನು ಹೆಚ್ಚಿನ ಜನಸಂಖ್ಯೆಯತ್ತ ವಿಸ್ತರಿಸುತ್ತಿವೆ. ಸಾಂಪ್ರದಾಯಿಕವಾಗಿ ಮಹಿಳೆಯರನ್ನು ತನಿಖಾ ಸಂಸ್ಥೆಗಳು ಗಂಭೀರ ಅಪಾಯ ಎಂದು ಪರಿಗಣಿಸಿ ವಿಚಾರಣೆ ನಡೆಸುತ್ತಿರಲಿಲ್ಲ!

ಕೆಂಪು ಕೋಟೆಯ ದಾಳಿ ಭಯೋತ್ಪಾದಕರು ಹೇಗೆ ಆಧುನಿಕ ಸಮಯಕ್ಕೆ ಹೊಂದಿಕೊಳ್ಳುತ್ತಿದ್ದಾರೆ ಎನ್ನುವುದನ್ನು ತೋರಿಸಿಕೊಟ್ಟಿದೆ. ಅವರು ಈಗ ಸಾಮಾನ್ಯ ರಾಸಾಯನಿಕಗಳನ್ನು ಆಯುಧವಾಗಿ, ನಂಬಿಕಾರ್ಹ ವೃತ್ತಿಯಲ್ಲಿರುವವರನ್ನು ಗುರಾಣಿಯಾಗಿ, ಮತ್ತು ಜನಪ್ರಿಯ ಆ್ಯಪ್‌ಗಳನ್ನು ಸಂವಹನ ಮತ್ತು ಸಂಯೋಜನೆಗಾಗಿ ಬಳಸಿಕೊಳ್ಳುತ್ತಿದ್ದಾರೆ!

ಅತ್ಯಂತ ಪರಿಣಾಮಕಾರಿ ಭಯೋತ್ಪಾದನಾ ನಿಗ್ರಹ ವಿಧಾನವೆಂದರೆ ಕೇವಲ ಭೌತಿಕ ರಕ್ಷಣಾ ವ್ಯವಸ್ಥೆ ಮಾತ್ರವಲ್ಲ. ಅದರೊಡನೆ, ಜಾಗೃತಿ ಮೂಡಿಸುವುದೂ ಅತ್ಯಂತ ಮುಖ್ಯವಾಗಿದೆ. ಪ್ರತಿದಿನ ಬಳಸುವ ವಸ್ತುಗಳನ್ನು ಯಾವ ರೀತಿಯಲ್ಲಿ ದುರ್ಬಳಕೆ ಮಾಡಬಹುದು ಎನ್ನುವ ಅರಿವು ಮುಂದಿನ ದಾಳಿಗಳನ್ನು ತಡೆಯುವತ್ತ ಮೊದಲ ಹೆಜ್ಜೆ. ನಾಗರಿಕರಾದ ನಾವು ಸದಾ ಜಾಗೃತರಾಗಿದ್ದು, ಅನುಮಾನಾಸ್ಪದ ಚಟುವಟಿಕೆಗಳನ್ನು ಕಂಡರೆ, ಕೂಡಲೇ ಸರ್ಕಾರಕ್ಕೆ ವರದಿ ಮಾಡಬೇಕು. ಈ ಮೂಲಕ ಮಾತ್ರ ದೇಶವನ್ನು ಸುರಕ್ಷಿತವಾಗಿಡುವ ಕೆಲಸ ಪ್ರತಿಯೊಬ್ಬ ಭಾರತೀಯನಿಂದಲೂ ಆಗಬೇಕು...

# ಬಿಹಾರದ ಸೋಲಿಗೆ ಬೆಚ್ಚಿಬಿದ್ದ ರಾಜ್ಯ ಕೈ ನಾಯಕರು!



**ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಮಹಾಘಟಬಂಧನ್ ಮೂಲಕ ಚುನಾವಣೆ ಎದುರಿಸಿದ ರಾಷ್ಟ್ರೀಯ ಪಕ್ಷ ಕಾಂಗ್ರೆಸ್ ಹೀನಾಯ ಸೋಲು ಅನುಭವಿಸಿರುವುದು ಪಕ್ಷದ ನಾಯಕರು ಮತ್ತು ಕಾರ್ಯಕರ್ತರನ್ನು ಶೋಕದ ಮಡುವಿಗೆ ತಳ್ಳಿದೆ. ದೇಶದಲ್ಲಿ ಎನ್‌ಡಿಎ ವಿರೋಧಿ ಅಲೆಯಿದ್ದು, ತಾವು ಗೆದ್ದು ಬೀಗ ಬಹುದು ಎಂದುಕೊಂಡಿದ್ದ ಕಾಂಗ್ರೆಸ್‌ಗೆ ಇಲ್ಲಿ ಬಹುದೊಡ್ಡ ಸೋಲಾಗಿದೆ. ಇದರ ಪರಿಣಾಮ ಬಿಹಾರದಲ್ಲಿ ಮಾತ್ರ ಆಗದೆ ಕರ್ನಾಟಕದ ಮೇಲೆಯೂ ಆಗುವ ಲಕ್ಷಣಗಳು ಕಾಣುತ್ತಿವೆ. ಬಿಹಾರದ ಸೋಲಿಗೆ ರಾಜ್ಯ ಕೈ ನಾಯಕರು ಮಾಡಿಕೊಂಡ ಎಡವಟ್ಟುಗಳು ಕೂಡ ಕಾರಣ ಎನ್ನುವುದನ್ನು ತಳ್ಳಿ ಹಾಕುವಂತಿಲ್ಲ.**



ಕಾಂಗ್ರೆಸ್ ಪಕ್ಷದ ನಾಯಕರು ಮಾತ್ರವಲ್ಲ ಸ್ವತಃ ರಾಹುಲ್ ಗಾಂಧಿಯೇ ಮುಂದಿನ ಪ್ರಧಾನಿ ಅಭ್ಯರ್ಥಿ ನಾನೇ ಎಂದು ಹೇಳಿಕೊಂಡು ಓಡಾಡುತ್ತಿದ್ದಾರೆ. ಇಂತಹ ಪ್ರಧಾನಿ ಅಭ್ಯರ್ಥಿ ಇಡೀ ರಾಜ್ಯದಲ್ಲಿ ಅಡ್ಡಾಡಿ ಚುನಾವಣಾ ಪ್ರಚಾರ ಮಾಡಿದ ಬಳಿಕವೂ ಒಂದು ರಾಜ್ಯದಲ್ಲಿ ಎರಡು ಅಂಕಿಯ ಸಾಧನೆ ಮಾಡಿಲ್ಲ ಎನ್ನುವುದಾದರೆ ಆತ ಒಬ್ಬ ನಾಯಕನಾಗಿ ಮುಂದುವರೆಯಲು ಹೇಗೆ ಸಾಧ್ಯ? ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತದಲ್ಲಿದೆ ಎನ್ನುವುದಾದರೆ ಅದಕ್ಕೆ ಕಾರಣ ರಾಹುಲ್ ಗಾಂಧಿಯಲ್ಲ... ರಾಜ್ಯದಲ್ಲಿರುವ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಸೇರಿದಂತೆ ಹಲವು ಹಿರಿಯ ನಾಯಕರೇ ಕಾರಣ ಎನ್ನುವುದನ್ನು ತಳ್ಳಿಹಾಕುವಂತಿಲ್ಲ.

ಈಗಾಗಲೇ ರಾಜ್ಯದಲ್ಲಿ ನವೆಂಬರ್ ಕ್ರಾಂತಿ ಸುದ್ದಿಯಲ್ಲಿದ್ದು, ಬಿಹಾರದ ಚುನಾವಣೆ ಕೆಲವು ನಾಯಕರಿಗೆ ಲಾಭವಾದರೆ ಮತ್ತೆ ಕೆಲವರಿಗೆ ನಷ್ಟವಾಗುವ ಲಕ್ಷಣಗಳು ಕಾಣಿಸುತ್ತಿವೆ. ಬಿಹಾರ ಚುನಾವಣೆಯಲ್ಲಿ ಮಹಾಘಟಬಂಧನ್ ಅಭೂತಪೂರ್ವ ಸಾಧನೆ ಮಾಡುತ್ತದೆ. ಆ ನಂತರ ರಾಜ್ಯದಲ್ಲಿ ಹೈಕಮಾಂಡ್ ಹೊಸ ಬೆಳವಣಿಗೆಗೆ ನಾಂದಿ ಹಾಡಬಹುದೆಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಬೆಂಬಲಿಸುವವರು ನಂಬಿದ್ದರು. ಮತ್ತೊಂದು ಕಡೆ ನವೆಂಬರ್ ಕ್ರಾಂತಿ ಆಗದಂತೆ ಅಧಿಕಾರವನ್ನು ಯಾವುದೇ ಕಾರಣಕ್ಕೂ ಬಿಟ್ಟುಕೊಡಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯರವರನ್ನು ಬೆಂಬಲಿಸುವವರು ಒತ್ತಾಯಿಸಿದ್ದರು.






ಹೀಗಾಗಿ ಬಿಹಾರದಲ್ಲಿ ಚುನಾವಣೆ ನಡೆಯುತ್ತಿದ್ದರೆ ರಾಜ್ಯದಲ್ಲಿ ತಮ್ಮದೇ ಆದ ಲೆಕ್ಕಾಚಾರವನ್ನು ಕಾಂಗ್ರೆಸ್ ನಾಯಕರು ಮಾಡುತ್ತಿದ್ದರು. ಆದರೆ ಬಿಹಾರದ ಚುನಾವಣೆಯಲ್ಲಿ ಕಾಂಗ್ರೆಸ್ ಅತ್ಯಂತ ಕೆಟ್ಟ ಸಾಧನೆ ಮಾಡಿದೆ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಒಂದಷ್ಟು ಸ್ಥಾನಗಳನ್ನು ಕಳೆದುಕೊಂಡು ಕಾಂಗ್ರೆಸ್ ಮತ್ತಷ್ಟು ಸ್ಥಾನಗಳನ್ನು ಗೆದ್ದುಕೊಂಡು ತೊಂಬತ್ತೊಂಬತ್ತರ ಗಡಿಗೆ ಬಂದಾಗ ಕಾಂಗ್ರೆಸ್ ನಾಯಕರು ತಾವೇನೋ ಸಾಧನೆ ಮಾಡಿದ್ದೇವೆ ಎಂಬಂತೆ ಬೀಗಿದ್ದರು.

ದೇಶದಲ್ಲಿ ಮೋದಿ ಹವಾ ಮುಗಿಯಿತು ಎಂಬ ತೀರ್ಮಾನಕ್ಕೆ ಕಾಂಗ್ರೆಸ್ ಬಂದಿದ್ದರು. ಆದರೆ ಎರಡು ಬಾರಿ ಅಭೂತಪೂರ್ವ ಸಾಧನೆ ಮೂಲಕ ದೇಶದಲ್ಲಿ ಆಡಳಿತ ನಡೆಸಿದ್ದ ಬಿಜೆಪಿ ನಾಯಕರಿಗೆ ಮೂರನೇ ಬಾರಿಗೂ ಅದೇ ಆಗುತ್ತದೆ ಎಂದು ನಂಬಿದ್ದರು. ಅದೊಂದು ರೀತಿಯ ಅಹಂ ಮತ್ತು ತಪ್ಪು ನಿರ್ಧಾರಗಳು ಬಿಜೆಪಿಯ ಸೊಕ್ಕನ್ನು ಮುರಿದು ಹಾಕಿತ್ತು. ಬಹುಮತದ ಮೂಲಕ ಸರ್ಕಾರ ರಚಿಸುವ ಕನಸಿಗೆ ತಣ್ಣೀರು ಎರಚಿ ಎನ್‌ಡಿಎ ಸಹವರ್ತಿಗಳ ಕಿಮ್ಮತ್ತು ಏನು ಎಂಬುದನ್ನು ಕಾಲವೇ ಅರ್ಥ ಮಾಡಿಕೊಟ್ಟಿತ್ತು. ಆದರೆ ಆ ಘಟನೆಗಳು ಅವರನ್ನು ಎಚ್ಚೆತ್ತುಕೊಳ್ಳುವಂತೆ ಮಾಡಿತ್ತು.

✍ ಬಿ.ಎಂ. ಲವಕುಮಾರ್

ಕಾಂಗ್ರೆಸ್ ಸೇರಿದಂತೆ ಇಂಡಿ ಕೂಟದ ಪಕ್ಷಗಳು ತಮ್ಮ ಅಲ್ಪ ಸಾಧನೆಯನ್ನು ಎಲ್ಲೆಡೆ ಹೇಳುತ್ತಾ, ಎನ್‌ಡಿಎ ವಿರುದ್ಧ ಆರೋಪ ಮತ್ತು ಗೇಲಿ ಮಾಡುತ್ತಾ ದಿನ ಕಳೆದುದನ್ನು ಬಿಟ್ಟರೆ ಅವರು ತಮ್ಮ ಇಂಡಿ ಒಕ್ಕೂಟವನ್ನು ಬಲಪಡಿಸುವ, ಪ್ರಾದೇಶಿಕ ಪಕ್ಷಗಳನ್ನು ಒಗ್ಗೂಡಿಸುವ ಕೆಲಸವನ್ನು ಮಾಡಲೇ ಇಲ್ಲ. ಅದರಾಚೆಗೆ ಮುಂದೆ ಬಂದಂತಹ ಮಹಾರಾಷ್ಟ್ರ, ದೆಹಲಿ ಚುನಾವಣೆಗಳನ್ನು ಗಂಭೀರವಾಗಿ ಪರಿಗಣಿಸುವ ಪ್ರಯತ್ನವನ್ನು ಮಾಡಲಿಲ್ಲ. ಲೋಕಸಭಾ ಚುನಾವಣೆಯಲ್ಲಿ ಮೋದಿಯನ್ನು ಹಣಿಯಬೇಕಾಗಿತ್ತು. ಅದನ್ನು ಒಂದಷ್ಟು ಮಾಡಿದೆವು ಆ ಮೂಲಕ ಕಳೆದು ಹೋಗಿದ್ದ ವಿರೋಧಪಕ್ಷದ ಸ್ಥಾನವನ್ನು ಮರುಸ್ಥಾಪನೆ ಮಾಡಿದನ್ನು ಬಿಟ್ಟರೆ ಮೋದಿ ವಿರುದ್ಧ ಹೇಳಿಕೆ ನೀಡುವುದಕ್ಕಷ್ಟೆ ಸೀಮಿತರಾಗಿ ಬಿಟ್ಟರು.



ರಾಹುಲ್ ಗಾಂಧಿ ಸುತ್ತಲಿನ ನಾಯಕರು ಕೇವಲ ಸಾಮಾಜಿಕ ಜಾಲ ತಾಣಗಳಲ್ಲಿ ಪೋಸ್ಟ್ ಹಾಕಿ ರಾಹುಲ್ ಗಾಂಧಿಯನ್ನು ಸಂತೃಪ್ತರಾಗಿಸುವ ಕೆಲಸವನ್ನು ಮಾಡಿದ್ದು ಬಿಟ್ಟರೆ ಕಾರ್ಯಕರ್ತರಲ್ಲಿ ಧೈರ್ಯ ತುಂಬಿ ಪಕ್ಷವನ್ನು ಸಂಘಟಿಸುವ ಕೆಲಸವನ್ನು ಮಾಡಲೇ ಇಲ್ಲ. ಪ್ರಧಾನಿ ನರೇಂದ್ರ ಮೋದಿ ಅವರನ್ನು ತೆಗಳುವ ಭರದಲ್ಲಿ ನಾನೊಬ್ಬ ದೇಶದ ಪ್ರಜೆ ಎಂಬುದನ್ನು ಮರೆತು ರಾಹುಲ್ ಗಾಂಧಿ ಸೇರಿದಂತೆ ಕೆಲವು ನಾಯಕರು ಮಾತನಾಡಿದರು. ಅದರಾಚೆಗೆ ಅಲ್ಲಲ್ಲಿ ಸಣ್ಣಪುಟ್ಟ ಗಿಮಿಕ್ ಗಳನ್ನು ಮಾಡಿದ್ದರಾದರೂ ಅದ್ಯಾವುದೂ ಪರಿಣಾಮ ಬೀರಲಿಲ್ಲ.

ರಾಹುಲ್ ಗಾಂಧಿಯವರು ರೈಲ್ವೆ ಸ್ಟೇಷನ್‌ನಲ್ಲಿ ಕೂಲಿಗಳ ಹೊರೆಯನ್ನು ತಾವೇ ಹೊತ್ತು ಸಾಗುವುದು, ಗದ್ದೆಯಲ್ಲಿ ನಾಟಿ ಮಾಡುವುದು, ಮೀನಿಗೆ ಬಲೆ ಹಾಕುವುದು ಇದೆಲ್ಲವೂ ಕೇವಲ ಸುದ್ದಿಯಾಗಿ ವೈರಲ್ ಆಯಿತೇ ವಿನಃ ಮತವಾಗಿ ಮಾರ್ಪಾಡು ಆಗಲೇ ಇಲ್ಲ. ಇನ್ನು ಚುನಾವಣೆ ವೇಳೆ ಪ್ರಚಾರ ಸಭೆ, ಯಾತ್ರೆಗಳನ್ನು ಕೇವಲ ಸೆಲಬ್ರಿಟಿಗಳಂತೆ ನಡೆಸಿದರೇ ವಿನಃ ಒಬ್ಬ ನಾಯಕನಂತೆ ನಡೆಸಲೇ ಇಲ್ಲ. ರಾಹುಲ್ ಗಾಂಧಿಯವರ ಈ ನಡವಳಿಕೆಯಿಂದಾಗಿ ಲೋಕಸಭಾ ಚುನಾವಣೆ ನಡೆದ ಬಳಿಕ ಕಳೆದ ಒಂದೂವರೆ ವರ್ಷದ ಅವಧಿಯಲ್ಲಿ ನಡೆದ ಮಹಾರಾಷ್ಟ್ರ, ದೆಹಲಿ ಮತ್ತು ಬಿಹಾರ ಚುನಾವಣೆಗಳನ್ನು ಗಮನಿಸಿದರೆ ರಾಹುಲ್ ಗಾಂಧಿ ನೇತೃತ್ವದ ಕಾಂಗ್ರೆಸ್ ಪಕ್ಷ ಯಾವುದೇ ಸಾಧನೆ ಮಾಡದ ನೆಲಕಚ್ಚಿದೆ. ಅದರಲ್ಲೂ ಮೂರು ರಾಜ್ಯಗಳಲ್ಲಿ ಮೂಲೆಗುಂಪಾಗಿದೆ.

☞ 13

## ಸೋಲಿಗೆ ರಾಜ್ಯ ಕೈ ನಾಯಕರು ಕಾರಣ?

ರಾಜಕೀಯ ಪಡಸಾಲೆಯಲ್ಲಿ ಬಿಹಾರದ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲಲು ರಾಜ್ಯದ ಕಾಂಗ್ರೆಸ್ ನಾಯಕರ ಅದರಲ್ಲೂ ಸಚಿವ ಪ್ರಿಯಾಂಕ್ ಖರ್ಗೆ ಸೇರಿದಂತೆ ಕೆಲವು ನಾಯಕರ ನಡವಳಿಕೆ ಮತ್ತು ಅವರು ಮಾಡಿದ ಎಡವಟ್ಟುಗಳು ಕಾರಣವಾಗಿದೆ ಎಂಬ ವಿಚಾರ ಚರ್ಚೆಯಾಗುತ್ತಿದೆ. ಏಕೆಂದರೆ ಚುನಾವಣೆಯ ಬಿಸಿ ಕಾವೇರಿದ ವೇಳೆಯಲ್ಲಿಯೇ ರಾಜ್ಯದಲ್ಲಿ ಹಿಂದೂ ವಿರೋಧಿ ಕಾಂಗ್ರೆಸ್ ಎಂಬ ಆರೋಪಕ್ಕೆ ಪುಷ್ಠಿ ನೀಡುವಂತೆ ಆರ್‌ಎಸ್‌ಎಸ್ ಪಥಸಂಚಲನಕ್ಕೆ ತಡೆಯೊಡ್ಡಿರುವುದು. ಮತ್ತು ಆರ್‌ಎಸ್‌ಎಸ್ ವಿರುದ್ಧ ಬಾಯಿಗೆ ಬಂದಂತೆ ಮಾತನಾಡಿದ್ದು ಕಾರಣವಾಗಿದೆ.

ಕಾಂಗ್ರೆಸ್ ನಾಯಕರ ನಡವಳಿಕೆಯನ್ನು ಬಿಜೆಪಿ ಬಳಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಅದರಲ್ಲೂ ಪ್ರಿಯಾಂಕ್ ಖರ್ಗೆ ಹೇಳಿಕೆಗೆ ಸಾಥ್ ನೀಡುವಂತೆ ಅವರ ತಂದೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕೂಡ ಆರ್‌ಎಸ್‌ಎಸ್ ಬ್ಯಾನ್ ಮಾಡುವ ಕುರಿತಂತೆ ಹೇಳಿಕೆ ನೀಡಿದ್ದರು. ಆ ಮೂಲಕ ತನ್ನ ಪುತ್ರನ ನಡವಳಿಕೆಯನ್ನು ಪ್ರೋತ್ಸಾಹಿಸುವುದರ ಜತೆಗೆ ಅಲ್ಪಸಂಖ್ಯಾತರನ್ನು ಓಲೈಸುವ ಕೆಲಸ ಮಾಡಿದ್ದರು. ಆದರೆ ಈ ತಂತ್ರ ಬಿಹಾರ ಚುನಾವಣೆಯಲ್ಲಿ ಹಿಂದೂಗಳ ಕೆಂಗಣ್ಣಿಗೆ ಕಾಂಗ್ರೆಸ್ ಹಿಂದೂ ವಿರೋಧಿಯಂತೆ ಗೋಚರಿಸಿ ಹೀನಾಯ ಸೋಲು ಕಾಣಲು ಕಾರಣವಾಯಿತು ಎಂಬ ಮಾತುಗಳು ಕೇಳಿ ಬರುತ್ತಿವೆ. ಅದು ಏನೇ ಇರಲಿ ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಜೆಡಿಎಸ್ ಮತ್ತು ಬಿಜೆಪಿ ಒಂದಾದರೆ ಕಾಂಗ್ರೆಸ್ ಗೂ ಸಂಕಷ್ಟ ತಪ್ಪಿದಲ್ಲ...

# ಈ ಪೊಲೀಸ್ ಅಧಿಕಾರಿಗೆ ಬಿಗ್ ಸೆಲ್ಯೂಟ್!
# 80 ಲಕ್ಷ ಭಾರತೀಯರನ್ನು ಸಾವಿನಿಂದ ರಕ್ಷಿಸಿದ್ದು ಹೇಗೆ?

ಮೊನ್ನೆ ಸೋಮವಾರ ದೆಹಲಿಯಲ್ಲಿ ನಡೆದ ಬಾಂಬ್ ಬ್ಲಾಸ್ಟ್‌ನಿಂದ ಇಡೀ ದೇಶವೇ ಬೆಚ್ಚಿ ಬಿದ್ದಿತ್ತು. ಆದ್ರೆ ಇದಕ್ಕೂ ಮುನ್ನ ಹರಿಯಾಣ, ಜಮ್ಮು ಮತ್ತು ಕಾಶ್ಮೀರ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ ಸುಮಾರು 2900 ಕೆಜಿ ಸ್ಫೋಟಕ ವಸ್ತುಗಳನ್ನ ವಶಕ್ಕೆ ಪಡೆದು, ಬಹು ದೊಡ್ಡ ಉಗ್ರ ಸಂಚನ್ನ ವಿಫಲಗೊಳಿಸಿದ್ದರು. ಇನ್ನು ಈ ಯಶಸ್ವಿ ಕಾರ್ಯಾಚರಣೆಯ ಹಿಂದಿನ ರೂವಾರಿ ಓರ್ವ ನಿಷ್ಠಾವಂತ ಐಪಿಎಸ್ ಅಧಿಕಾರಿ.




ಹೌದು, ಯಾವುದೇ ಒಂದು ಪ್ರಕರಣವಿರಲಿ, ಸಾಮಾನ್ಯವಾಗಿ ಹಿರಿಯ ಅಧಿಕಾರಿಗಳು ಅದರ ತನಿಖೆಗೆಂದು ಯಾರಾದ್ರೂ ಒಬ್ಬ ಕಾನ್‌ಸ್ಟೇಬಲ್ ಅಥವಾ ಎಎಸ್ಐಗಳನ್ನು ಕಳುಹಿಸಿ ಅದೇನೋ ನೋಡ್ಕೊಂಡ್ ಬನ್ರೀ... ಎನ್ನುತ್ತಾರೆ. ಆದ್ರೆ ಈ ಕಾರ್ಯಾಚರಣೆಗೆ ಖುದ್ದು ಉನ್ನತ ಹುದ್ದೆಯ ಮೇಲಿನ ಅಧಿಕಾರಿಯೇ ಹೋಗುವ ಮೂಲಕ ದೇಶವನ್ನ ಅತೀ ದೊಡ್ಡ ಅನಾಹುತದಿಂದ ಕಾಪಾಡಿದ್ದಾರೆ!


2019ರಲ್ಲಿ ಆರ್ಟಿಕಲ್ 370 ರದ್ದು ಮಾಡಿದ ನಂತರ ಜಮ್ಮು ಮತ್ತು ಕಾಶ್ಮೀರದಲ್ಲಿ ಪಾಕಿಸ್ತಾನ ಪ್ರತ್ಯೇಕತೆಯ ಕೂಗು ಕಡಿಮೆಯಾಯ್ತು. ಆದ್ರೂ ಅಲ್ಲಿ ಇಲ್ಲಿ ಆವಾಗಾವಾಗ ಒಂದೊ ಎರಡೊ ಪೋಸ್ಟರ್‌ಗಳು ಕಾಣಸಿಗುತ್ತದೆ. ಅದರಂತೆ, ಅಕ್ಟೋಬರ್‌ನಲ್ಲಿ ಶ್ರೀನಗರದ ನೌಗಾಂ ಪ್ರದೇಶದಲ್ಲಿ ಹೀಗೆ ಜೈಶ್‌ಎಮೊಹಮ್ಮದ್ ಸಂಘಟನೆಯಿಂದ ಬಂದ ಬೆದರಿಕೆ ಸಂದೇಶಗಳನ್ನು ಹೊಂದಿರುವ ಕೆಲವೊಂದು ಪೋಸ್ಟರ್ ಕಾಣಿಸಿಕೊಂಡವು. ಆದ್ರೆ, ಇದು ಶ್ರೀನಗರದ ಹಿರಿಯ ಪೊಲೀಸ್ ಅಕ್ಷಕ ಡಾ. ಜಿ.ವಿ. ಸುಂದೀಪ್ ಚಕ್ರವರ್ತಿ ಅವರಿಗೆ ಕೇವಲ ಎಚ್ಚರಿಕೆ ಸೂಚನೆಯಷ್ಟೇ ಅಲ್ಲ, ಬದಲಾಗಿ ದೊಡ್ಡ ಉಗ್ರ ಸಂಚು ಪ್ರಾರಂಭವಾಗಿರಬಹುದೆಂಬ ಭಾವನೆ ಮೂಡಿತು! ಅಲ್ಲಿಯಿಂದ ಆರಂಭವಾದ ತನಿಖೆಯು ನಂತರ ದೆಹಲಿಯ ಕೆಂಪುಕೋಟೆ ಸ್ಫೋಟ ಸೇರಿದಂತೆ ಬಹುರಾಜ್ಯ ಉಗ್ರ ಚಟುವಟಿಕೆಯನ್ನು ಬಯಲುಗೊಳಿಸಿತ್.

ಮೊದಲಿಗೆ ಈ ಘಟನೆಯು ಸಾಮಾನ್ಯ ಚಟುವಟಿಕಯಂತೆ ಕಾಣಿಸಿಕೊಂಡರು. ಡಾ. ಚಕ್ರವರ್ತಿ ಅವರ ಕಾರ್ಯನಿಷ್ಠೆಯು ಅದನ್ನು ತುರ್ತು ತನಿಖೆಯ ಹಾದಿಯತ್ತ ಕೊಂಡೊಯ್ಯಿತು. ಮುಂದೆ, ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ ಕಲ್ಲೆಸತ ಆರೋಪದ ಹಿನ್ನಲೆಯುಳ್ಳ ಮೂವರು ವ್ಯಕ್ತಿಗಳ ಚಲನೆ ಸಂಶಯಾಸ್ಪದವಾಗಿ ಕಂಡಿತು. ಮುಂದೆ ಅವರ ವಿಚಾರಣೆಯು ಕಾಶ್ಮೀರದಿಂದ ಹರಿಯಾಣ ಮತ್ತು ಉತ್ತರ ಪ್ರದೇಶದವರೆಗಿನ ಉಗ್ರ ಸಂಪರ್ಕ ಜಾಲವನ್ನು ಬಯಲುಗೊಳಿಸಿ, ಅಂತಿಮವಾಗಿ, ಫರೀದಾಬಾದ್‌ನಲ್ಲಿ ವೈದ್ಯರ ರೂಪದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮೂವರು ಕಾಶ್ಮೀರಿ ವೈದ್ಯರು ಸೇರಿದಂತೆ ಹಲವರ ಬಂಧನ ಕಾರ್ಯ ನಡೆದಿದೆ. ನಿಮಗೆ ಗೊತ್ತಿಲ್ಲ, ಚಕ್ರವರ್ತಿ ಮೊದಲು ವೈದ್ಯ ವೃತಿಯಲ್ಲಿದ್ದವರು. ನಂತರ ಪೊಲೀಸ್ ಸರ್ವಿಸ್ ಪರೀಕ್ಷೆ ಗೆದ್ದು ಪೊಲೀಸ್ ಸೇವೆಗೆ ಬಂದವರು.

ಆಂಧ್ರಪ್ರದೇಶದ ಕರ್ನೂಲ್‌ನಲ್ಲಿ ಜನಿಸಿದ ಡಾ. ಜಿ.ವಿ. ಸುಂದೀಪ್ ಚಕ್ರವರ್ತಿ ಅವರ ರಕ್ತದಲ್ಲಿಯೇ ಸಾರ್ವಜನಿಕ ಸೇವೆ ಬಂದಿದೆ. ಹೌದು, ಅವರ ತಂದೆ ಡಾ. ರಾಮಗೋಪಾಲ್ ರಾವ್. ಅವರು ಸರ್ಕಾರಿ ಆಸ್ಪತ್ರೆಯ ವೈದ್ಯರಾಗಿದ್ರೆ, ತಾಯಿಯು ಸಹ ಆರೋಗ್ಯ ಇಲಾಖೆಯಲ್ಲಿ ಅಧಿಕಾರಿಯಾಗಿದ್ರು. ಇನ್ನು ಚಕ್ರವರ್ತಿಯವರು, 2010ರಲ್ಲಿ ಕರ್ನೂಲ್ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ಪದವಿ ಪಡೆದು, ಒಂದು ವರ್ಷದ ಕಾಲ ವೈದ್ಯರಾಗಿ ಸೇವೆ ಸಲ್ಲಿಸಿದ್ರು. ಆದ್ರೆ ಅವರಿಗೆ ಪೊಲೀಸ್ ಸೇವೆಗೆ ಸೇರಬೇಕೆಂಬ ಅತಿ ದೊಡ್ಡ ಆಸೆಯಿತ್ತು. ಹಾಗಾಗಿ, ಅವರು ತಮ್ಮ ಬಹುದೊಡ್ಡ ಅಭಿಲಾಷೆಯಂತೆ 2014ರಲ್ಲಿ ಭಾರತೀಯ ಪೊಲೀಸ್ ಸೇವೆ (ಐಪಿಎಸ್) ಸೇರಿದರು. ಅದರಂತೆ ವೈದ್ಯಕೀಯ ನಿಖರತೆ ಮತ್ತು ಮಾನವೀಯ ಮನೋಭಾವವನ್ನು ಅವರು ಪೊಲೀಸ್ ವೃತ್ತಿಗೂ ತಂದರು. ಡಾ. ಚಕ್ರವರ್ತಿ ಅವರು ಜಮ್ಮು ಮತ್ತು ಕಾಶ್ಮೀರದಲ್ಲಿ ಹಲವಾರು ಸಂವೇದನಾಶೀಲ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸಿದ್ದು, ಉರಿ ಮತ್ತು ಸೋಪೊರ್‌ನಲ್ಲಿ ಉಪ ವಿಭಾಗೀಯ ಪೊಲೀಸ್ ಅಧಿಕಾರಿಯಾಗಿ ವೃತ್ತಿ ಪ್ರಾರಂಭಿಸಿ, ಬಾರಾಮುಲ್ಲಾ, ಹಂಡ್ವಾರಾ, ಕುಪ್ವಾರಾ, ಅನಂತನಾಗ್ ಮತ್ತು ಶ್ರೀನಗರ ಜಿಲ್ಲೆಗಳಲ್ಲಿ ಎಸ್‌ಎಸ್‌ಪಿಯಾಗಿ ಸೇವೆ ಸಲ್ಲಿಸಿದ್ದಾರೆ. ಹೀಗೆ, 2025ರ ಏಪ್ರಿಲ್‌ನಲ್ಲಿ ಅವರು ಶ್ರೀನಗರದ ಎಸ್‌ಎಸ್‌ಪಿಯಾಗಿ ಅಧಿಕಾರ ಸ್ವೀಕರಿಸಿದ ನಂತರ, ಉಗ್ರ ಚಟುವಟಿಕೆಗಳ ನಿಯಂತ್ರಣ ಹಾಗೂ ನಾಗರಿಕರ ವಿಶ್ವಾಸವನ್ನು ಮರಳಿ ಪಡೆಯುವ ಎರಡು ಪ್ರಮುಖ ಗುರಿಗಳತ್ತ ಹೆಜ್ಜೆ ಇಟ್ಟರು.






ಉಗ್ರ ವಿರೋಧಿ ನಾಯಕತ್ವ ವಹಿಸಿದ ಆಪರೇಷನ್ ತಜ್ಞ ಡಾ.ಚಕ್ರವರ್ತಿ ಅವರನ್ನು ಸಹೋದ್ಯೋಗಿಗಳು 'ಆಪರೇಷನ್ಸ್ ಸ್ಪೆಷಲಿಸ್ಟ್' ಎಂದೇ ಕರೆಯುತ್ತಾರೆ. ಅದು,ಕಾರ್ಯಪದ್ಧತಿಯು ವಿಶ್ಲೇಷಣೆ, ತಂತ್ರಜ್ಞಾನ ಹಾಗೂ ಮಾನವೀಯ ಮನೋಭಾವದ ಸಂಯೋಜನೆಯಾಗಿದೆ. ನೌಗಾಂ ಪೋಸ್ಟರ್ ಪ್ರಕರಣದಲ್ಲಿ ಅವರು ಸ್ವತಃ ತನಿಖೆಯನ್ನು ಮುನ್ನಡೆಸಿ, ಪ್ರಾಥಮಿಕ ಬಂಧಿತರ ವಿಚಾರಣೆಯಿಂದ ಮಾವ್ಲವಿ ಇರ್ಫಾನ್ ಅಹ್ಮದ್ ಎನ್ನುವ ವ್ಯಕ್ತಿಯ ಸಂಪರ್ಕ ಬೆಳಕಿಗೆ ಬಂದಿತು. ಅದರ ನಂತರದ ವಿಚಾರಣೆಯು ಜೈಶ್‌ಎ ಮೊಹಮ್ಮದ್ ಸಂಘಟನೆಯ ಬಹು ರಾಜ್ಯ ಉಗ್ರ ಜಾಲವನ್ನು ಬಯಲುಗೊಳಿಸಿತು. ಇದ್ರ ತನಿಖೆಯಿಂದ ತಿಳಿದುಬಂದ ಪ್ರಕಾರ, ಫರೀದಾಬಾದ್‌ನಲ್ಲಿ ವೈದ್ಯರ ರೂಪದಲ್ಲಿ ಕೆಲಸ ಮಾಡುತ್ತಿದ್ದ ಡಾ. ಶಹೀನ್ ಸಯೀದ್, ಡಾ. ಮುಜಮ್ಮಿಲ್ ಗಣಾಯ್ ಮತ್ತು ಡಾ. ಅದೀಲ್ ರಾದರ್ ಎಂಬವರು ಉಗ್ರ ಸಂಘಟನೆಯ ಭಾಗವಾಗಿದ್ದರು.

ಅದರಂತೆ, ಅವರ ನಿವಾಸಗಳ ಮೇಲೆ ದಾಳಿ ಮಾಡಿ 2,921 ಕಿಲೋಗ್ರಾಂ ಸ್ಫೋಟಕ ವಸ್ತುಗಳು ಮತ್ತು ಎಕೆ 47 ಸರಣಿಯ ಶಸ್ತ್ರಾಸ್ತ್ರಗಳನ್ನು ವಶಕ್ಕೆ ಪಡೆದರು. ಇದಾದ ನಂತರ ಇವರು ಪಾಕಿಸ್ತಾನ ಮೂಲದ ಉಗ್ರ ನಾಯಕರ ಸಂಪರ್ಕದಲ್ಲಿದ್ದ ಮತ್ತು ಭಾರತದೆಲ್ಲೆಡೆ ದಾಳಿ ನಡೆಸಲು ಸಿದ್ಧತೆ ಮಾಡಿಕೊಂಡಿದ್ದ ದೇಶ ದ್ರೋಹಿಗಳ ಬೆನ್ನತ್ತಿದ್ದರು.

ಈ ಕಾರ್ಯಾಚರಣೆ ಆಧುನಿಕ ಪೊಲೀಸ್ ತಂತ್ರಜ್ಞಾನದ ನಿಖರತೆಯನ್ನು ತೋರಿಸಿತು. ಪೋಸ್ಟರ್‌ನಿಂದ ಪ್ರಾರಂಭವಾದ ತನಿಖೆ ಡಿಜಿಟಲ್ ಸಾಕ್ಷ್ಯಗಳ ಸಂಗ್ರಹ, ವಿಚಾರಣೆ ಮತ್ತು ರಾಜ್ಯಾಂತರ ಸಹಕಾರದ ಮೂಲಕ ಉಗ್ರ ಸಂಚು ಬಯಲುಗೊಳಿಸಿತು. ಫರೀದಾಬಾದ್ ಮತ್ತು ಉತ್ತರ ಪ್ರದೇಶದಲ್ಲಿ ಸ್ಫೋಟಕ ಸಂಗ್ರಹ ಕೇಂದ್ರಗಳು ಪತ್ತೆಯಾದವು. ಡಾ. ಚಕ್ರವರ್ತಿ ಅವರ ದೃಢತೆಯಿಂದ ಈ ದೊಡ್ಡ ಸಂಚು ನಿಷ್ಕ್ರಿಯಗೊಳಿಸಲಾಯಿತು.

ಡಾ. ಜಿ.ವಿ. ಸುಂದೀಪ್ ಚಕ್ರವರ್ತಿ ಅವರಿಗೆ ದೇಶದ ಅತ್ಯುನ್ನತ ಪುರಸ್ಕಾರಗಳು ದೊರೆತಿವೆ. ಅವರು ಆರು ಬಾರಿ ರಾಷ್ಟ್ರಪತಿಗಳ ಶೌರ್ಯ ಪದಕ ಹಾಗೂ ನಾಲ್ಕು ಬಾರಿ ಜಮ್ಮು ಮತ್ತು ಕಾಶ್ಮೀರ ಪೊಲೀಸರ ಶೌರ್ಯ ಪದಕ ಪಡೆದಿದ್ದಾರೆ. ಜೊತೆಗೆ ಭಾರತೀಯ ಸೇನೆಯ ಮುಖ್ಯಸ್ಥರ ಶ್ಲಾಘನಾ ಪದಕವೂ ದೊರೆತಿದೆ. ಈ ಗೌರವಗಳು ಅವರ ಸಾಹಸ ಮತ್ತು ಸೇವಾಭಾವದ ನಿದರ್ಶನ. ಡಾ. ಚಕ್ರವರ್ತಿ ಅವರು ಪೊಲೀಸ್ ಇಲಾಖೆಯ ಒಳಗಿನ ಶಿಸ್ತಿನ ಜೊತೆಗೆ ನಾಗರಿಕರ ವಿಶ್ವಾಸವನ್ನು ನಿರ್ಮಿಸಲು ಒತ್ತು ನೀಡುತ್ತಾರೆ. ಅವರ ದೃಷ್ಟಿಯಲ್ಲಿ ಕಾನೂನು ಮತ್ತು ಮಾನವೀಯತೆ ಎರಡೂ ಸಮತೋಲನದಲ್ಲಿರಬೇಕು. ಶ್ರೀನಗರದ ಜನರ ಸುರಕ್ಷತೆ ನಮ್ಮ ಮೊದಲ ಆದ್ಯತೆ. ಅದೇ ವೇಳೆ, ಪೊಲೀಸ್ ಇಲಾಖೆಯ ಒಳಗಿನ ಪಾರದರ್ಶಕತೆ ಮತ್ತು ಪ್ರತಿಕ್ರಿಯಾಶೀಲತೆಗೂ ಒತ್ತು ನೀಡುತ್ತೇವೆ ಎಂಬುದು ಅವರ ಮನದಾಳದ ಮಾತು... ☯

ರಾಷ್ಟ್ರ ರಾಜಧಾನಿ ದೆಹಲಿಯ ಕೆಂಪು ಕೋಟೆ ಬಳಿ ನಡೆದ ಬಾಂಬ್ ಬ್ಲಾಸ್ಟ್ ಪ್ರಕರಣದಲ್ಲಿ ಎನ್‌ಐಎ ತನಿಖೆ ಚುರುಕುಗೊಂಡಿದ್ದು, ಕ್ಷಣಕ್ಕೊಂದು ಹೊಸ ಹೊಸ ಮಾಹಿತಿಗಳು ಹೊರಬರುತ್ತಿವೆ. ಇದೀಗ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊಂದು ಬಿಗ್ ಅಪಡೇಟ್ ಸಿಕ್ಕಿದ್ದು ಈ ಕುರಿತ ಸಂಪೂರ್ಣ ಮಾಹಿತಿ ಇಲ್ಲಿದೆ.

# ಹರಿಯಾಣ 'ಅಲ್ ಫಲಾಹ್ ವಿವಿ' ಕೇಂದ್ರ ಬಿಂದು...

ಪ್ರಕರಣದಲ್ಲಿ ಹರಿಯಾಣದ ಅಲ್ ಫಲಾಹ್ ವಿಶ್ವವಿದ್ಯಾಲಯದ ಹೆಸರು ಹೆಚ್ಚಾಗಿ ಕೇಳಿಬರುತ್ತಿದೆ. ಅಲ್ ಫಲಾಹ್ ವಿವಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕೆಲ ವೈದ್ಯರುಗಳು ದೆಹಲಿಯಲ್ಲಿ ಬಾಂಬ್ ಸ್ಫೋಟಿಸಲು ಸಂಚು ರೂಪಿಸಿದ್ದರು ಎಂದು ಹೇಳಲಾಗ್ತಿದೆ. ಈ ಬೆನ್ನಲ್ಲೇ ಮತ್ತೊಂದು ಸ್ಫೋಟಕ ಸುದ್ದಿ ಬಹಿರಂಗಗೊಂಡಿದ್ದು, ದೆಹಲಿ ಕೆಂಪು ಕೋಟೆ ಬಾಂಬ್ ಬ್ಲಾಸ್ಟ್ ಸಂಭವಿಸುತ್ತಿದ್ದಂತೆ ಅಲ್ ಫಲಾಹ್ ಯೂನಿವರ್ಸಿಟಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ವೈದ್ಯ ನಿಸಾರ್ ಉಲ್ ಹಸನ್ ನಾಪತ್ತೆಯಾಗಿದ್ದಾನೆ.

ಜಮ್ಮು ಮತ್ತು ಕಾಶ್ಮೀರ ಮೂಲದ ವೈದ್ಯ ನಿಸಾರ್ ಉಲ್ ಹಸನ್ ಈ ಮೊದಲು ಶ್ರೀನಗರದಲ್ಲಿರುವ ಸರ್ಕಾರಿ ಆಸ್ಪತ್ರೆಯಲ್ಲಿ ಸಹಾಯಕ ಪ್ರಾಧ್ಯಾಪಕನಾಗಿ ಕಾರ್ಯನಿರ್ವಹಿಸುತ್ತಿದ್ದರು, ಆದರೆ ಭಯೋತ್ಪಾದಕ ಚಟುವಟಿಕೆಯಲ್ಲಿ ಭಾಗಿ ಆರೋಪದಲ್ಲಿ ಡಾ. ನಿಸಾರ್‌ನನ್ನ ಕಳೆದ 2023ರಲ್ಲಿ ವಜಾಗೊಳಿಸಲಾಗಿತ್ತು. ಬಳಿಕ ಇತ್ತೀಚಿಗೆ ಹರಿಯಾಣದ ಫರಿದಾಬಾದ್‌ನಲ್ಲಿರುವ ಅಲ್ ಫಲಾಹ್ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದರು, ಆದರೀಗ ದೆಹಲಿಯಲ್ಲಿ ಸ್ಫೋಟ ಸಂಭವಿಸುತ್ತಿದ್ದಂತೆ ವೈದ್ಯ ನಿಸಾರ್ ನಾಪತ್ತೆಯಾಗಿದ್ದು, ಮತ್ತಷ್ಟು ಅನುಮಾನ ಹೆಚ್ಚುವಂತೆ ಮಾಡಿದೆ.

ದೆಹಲಿಯ ಕೆಂಪು ಕೋಟೆಯ ಬಳಿ ಕಳೆದ ಸೋಮವಾರ ನಡೆದ ಸ್ಫೋಟ ಸಂಭವಿಸುತ್ತಿದ್ದಂತೆ ಡಾ. ನಿಸಾರ್ ಉಲ್ ಹಸನ್ ನಾಪತ್ತೆಯಾಗಿದ್ದು, ಆತನ ಪತ್ತೆಗಾಗಿ ತನಿಖಾ ದಳದ ಅಧಿಕಾರಿಗಳು ಪತ್ತೆಹಚ್ಚಲು ಶುರು ಮಾಡಿದ್ದಾರೆ. ಜೊತೆಗೆ ವೈದ್ಯ ನಿಸಾರ್ ಎಲ್ಲಾದರೂ ಕಾಣಿಸಿಕೊಂಡರೇ ಪೊಲೀಸರಿಗೆ ಮಾಹಿತಿ ನೀಡಿ ಎಂದು ತಿಳಿಸಿದ್ದಾರೆ.

ದೆಹಲಿ ಬಾಂಬ್ ಬ್ಲಾಸ್ಟ್ ಪ್ರಕರಣದಲ್ಲಿ ಫರಿದಾಬಾದ್‌ನ ಅಲ್ ಫಲಾಹ್ ಯೂನಿವರ್ಸಿಟಿ ಕೇಂದ್ರ ಬಿಂದುವಾಗಿದೆ. ಇದುವರೆಗೂ ಅರೆಸ್ಟ್ ವೈದ್ಯರೆಲ್ಲರೂ ಇದೇ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದರು, ಆದ್ದರಿಂದ ಬಾಂಬ್ ಬ್ಲಾಸ್ಟ್‌ನ ಸಂಚು ಇಲ್ಲೇ ರೂಪಿಸಲಾಗಿದೆ ಎಂದು ಶಂಕಿಸಲಾಗಿದೆ. ಇನ್ನು ಇದೇ ವಿಚಾರಕ್ಕೆ ಸಂಬಂಧಪಟ್ಟಂತೆ ಅಲ್ ಫಲಾಹ್ ವಿಶ್ವವಿದ್ಯಾಲಯ, ನಾವು ಎಲ್ಲಾ ರೀತಿಯ ತನಿಖೆಗೆ ಸಂಪೂರ್ಣವಾಗಿ ಸಹಕರಿಸುತ್ತೇವೆ ಎಂದು ಅಧಿಕೃತ ಹೇಳಿಕೆ ನೀಡಿದೆ.

## ಕೆಂಪು ಬಣ್ಣದ ಇಕೋಸ್ಪೋರ್ಟ್ ಕಾರಿಗಾಗಿ ಹುಡುಕಾಟ

ಇನ್ನು, ದೆಹಲಿ ಬಾಂಬ್ ಬ್ಲಾಸ್ಟ್‌ನಲ್ಲಿ ಬಳಸಲಾಗಿದೆ ಎನ್ನಲಾದ ಕೆಂಪು ಬಣ್ಣದ ಇಕೋಸ್ಪೋರ್ಟ್ ಕಾರಿಗಾಗಿ ದೆಹಲಿ, ಹರಿಯಾಣ ಮತ್ತು ಉತ್ತರ ಪ್ರದೇಶ ಪೊಲೀಸರು ಹುಡುಕಾಟ ನಡೆಸಿದ್ದಾರೆ. ಡಿಎಲ್-10ಸಿಕೆ-0458 ನೋಂದಣಿ ಸಂಖ್ಯೆಯನ್ನು ಹೊಂದಿರುವ ಕಾರಿನ ಎರಡನೇ ಮಾಲೀಕ ಶಂಕಿತ ಉಗ್ರ ಡಾ.ಉಮರ್ ಎಂದು ತಿಳಿದು ಬಂದಿದೆ. ಇದರ ಜೊತೆ ಕೆಂಪು ಇಕೋಸ್ಪೋರ್ಟ್ ಕಾರಿನಲ್ಲಿಯೂ ಸಹ ಸ್ಫೋಟಕಗಳನ್ನ ಇರಬಹುದು ಎಂದು ಗುಪ್ತಚರ ಸಂಸ್ಥೆಗಳು ಎಚ್ಚರಿಕೆ ನೀಡಿವೆ.

ಮೂಲಗಳ ಪ್ರಕಾರ, ದೆಹಲಿ ಬ್ಲಾಸ್ಟ್‌ನಲ್ಲಿ ಸುಮಾರು 9 ರಿಂದ 10 ಮಂದಿ ವೈದ್ಯರು ಭಾಗಿಯಾಗಿದ್ದಾರೆ ಎಂದು ಶಂಕಿಸಲಾಗಿದೆ. ಡಾ. ಮುಜಮ್ಮಿಲ್, ಡಾ.ಶಾಹೀನ್ ಮತ್ತು ಡಾ. ಉಮರ್ ದಾಳಿಯನ್ನ ಯೋಜಿಸಿದ್ದರು ಎಂದು ತನಿಖಾಧಿಕಾರಿಗಳಿಂದ ಮಾಹಿತಿ ಲಭ್ಯವಾಗಿದೆ. ಮತ್ತೊಂದು ಸ್ಫೋಟಕ ಅಂಶವೆಂದರೇ ಇಬ್ಬರು ಡಾಕ್ಟರ್‌ಗಳ ಬಂಧನದ ನಂತರ ಡಾ. ಉಮರ್ ಏಕಾಂಗಿಯಾಗಿ ಸ್ಫೋಟವನ್ನ ನಡೆಸಿದ್ದಾರೆ ಎನ್ನಲಾಗಿದೆ.

## ಕುಟುಂಬಸ್ಥರಿಂದ ಡಿಎನ್‌ಎ ಸ್ಯಾಂಪಲ್ ಕಲೆಕ್ಟ್

ಸದ್ಯ, ಪ್ರಕರಣದ ತನಿಖೆಯನ್ನ ಚುರುಕುಗೊಳಿಸಿರುವ ಎನ್‌ಐಎ ಬ್ಲಾಸ್ಟ್ ಆದ ಕಾರಿನಲ್ಲಿ ಸಿಕ್ಕ ಮೃತದೇಹ ಯಾರದ್ದು ಎಂದು ಪತ್ತೆಹಚ್ಚಲು ಮುಂದಾಗಿದ್ದು, ಡಾ.ಉಮರ್ ಅವರ ಕುಟುಂಬಸ್ಥರ ಡಿಎನ್‌ಎ ಸ್ಯಾಂಪಲ್ ಪಡೆದು ಲ್ಯಾಬ್‌ಗೆ ಕಳುಹಿಸಲಾಗಿದೆ. ☯

# ಸೌಜನ್ಯ ಫೈಲ್ಸ್



6

ನಿರೂಪಣೆ :

**ಮೋಹನ್ ಬೋಳಂಗಡಿ**

# ಗುರುವಾಯನಕೆರೆಯಲ್ಲಿ ಧರ್ಮಸ್ಥಳ ನಾಗರೀಕರ ಪ್ರತಿ ಹೋರಾಟ

ಸೌಜನ್ಯ ಎಂಬ ಹೆಣ್ಣುಮಗಳ ಹೆಸರನ್ನು ಇಟ್ಟುಕೊಂಡು ಜನರನ್ನು ಭಾವನಾತ್ಮಕವಾಗಿ ಉದ್ರೇಕಿಸಿ ಶ್ರೀ ಕ್ಷೇತ್ರ ಧರ್ಮಸ್ಥಳದ ವಿರುದ್ಧ ಬೆಳ್ತಂಗಡಿ ತಾಲೂಕಿನ ನಾಗರೀಕರನ್ನು ಎತ್ತಿಕಟ್ಟುವ ವ್ಯವಸ್ಥಿತ ಯೋಜನೆಗೆ ಪ್ರತಿರೋಧ ತೋರಬೇಕು ಎಂದು ಧರ್ಮಸ್ಥಳದ ನಾಗರೀಕರು ನಿರ್ಧರಿಸಿದರು. ಅವರಿಗೆ ತಿಮರೋಡಿ ಮತ್ತವರ ತಂಡ ನಡೆಸುತ್ತಿದ್ದಂತಹ ಕುಯುಕ್ತಿಗಳು ಅರ್ಥವಾಗಿತ್ತು. ಈ ಕುಯುಕ್ತಿಗಳಿಗೆ ಗುರುವಾಯನಕೆರೆಯ ನಾಗರೀಕ ಸೇವಾ ಟ್ರಸ್ಟ್‌ನ ಸೋಮನಾಥ್ ನಾಯಕ್ ಅವರೇ ಕಾರಣ ಎಂದೂ ಗೊತ್ತಿತ್ತು. ಅದಕ್ಕಾಗಿ ತಾಲೂಕಿನ ಪ್ರಮುಖ ಕೇಂದ್ರಗಳಲ್ಲಿ ಒಂದಾದ ಗುರುವಾಯನಕೆರೆಯಲ್ಲೇ ಪ್ರತಿಭಟನೆ ಮಾಡಿ ಉತ್ತರ ಕೊಡಲು ನಿರ್ಧರಿಸಿದ್ದರು. ಅದಕ್ಕಾಗಿ ಅಲ್ಲೇ ಪ್ರತಿ ಪ್ರತಿಭಟನೆ ನಡೆಯಿತು. ತಾಲೂಕಿನ ಸಜ್ಜನ ನಾಗರೀಕರು ಒಂದೆಡೆ ಸೇರಿ ಕ್ಷೇತ್ರದ ವಿರುದ್ಧ ನಡೆಯುತ್ತಿರುವಂತಹ ಅಪಪ್ರಚಾರವನ್ನು ತೀವ್ರವಾಗಿ ಖಂಡಿಸಿದರು. ಸೌಜನ್ಯ ಹತ್ಯಾ ವಿಚಾರವನ್ನು ಮುಂದಿಟ್ಟು ಕ್ಷೇತ್ರವನ್ನು ಮಲಿನಗೊಳಿಸುವಂತಹ ಯಾವುದೇ ಕೃತ್ಯಗಳನ್ನು ತಾಲೂಕಿನ ಜನರು ಸಹಿಸುವುದಿಲ್ಲ ಎಂಬ ಎಚ್ಚರಿಕೆಯನ್ನು ನೀಡಿದರು ಅಲ್ಲದೆ ತಾಲೂಕಿನ ಯಾವುದೇ ಕಡೆಗಳಲ್ಲಿ ಸೌಜನ್ಯ ಹೆಸರಿನಲ್ಲಿ ನಡೆಸುವಂತಹ ಪ್ರತಿಭಟನೆ ನಡೆದರೆ ಅಲ್ಲಿ ಕ್ಷೇತ್ರದ ಹೆಸರು ಎತ್ತಿದರೆ ಬೆಳ್ತಂಗಡಿ ಸಮೀಪದ ನಡ ಗ್ರಾಮದಲ್ಲಿ ನಡೆದಂತಹ ಅಹಿತಕರ ಘಟನೆಗಳು ಪುನರಾವರ್ತನೆಯಾದೀತು ಎಂದು ಎಚ್ಚರಿಕೆ ನೀಡಲಾಯಿತು. ಇದು ಎಷ್ಟು ಪರಿಣಾಮ ಬೀರಿತು ಎಂದರೆ ತಿಮರೋಡಿ ಮತ್ತವರ ಬಳಗ ಸಂಪೂರ್ಣವಾಗಿ ಥಂಡಾ ಹೊಡೆದು ಹೋಯಿತು. ಅವರ ಎಲ್ಲಾ ರೋಷಾವೇಷಗಳು ತಣ್ಣಗಾಯಿತು.

ಈ ಎಲ್ಲಾ ಬೆಳವಣಿಗೆಗಳ ಮಧ್ಯೆ ಮಾನಸಿಕವಾಗಿ ನೊಂದುಕೊಂಡದ್ದು ಶ್ರೀ ಕ್ಷೇತ್ರದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರು.



ಕುಸುಮಾವತಿ

ಆರಂಭದಲ್ಲಿ ಅವರ ಸಹೋದರ ಹರ್ಷೇಂದ್ರಕುಮಾರ್ ಅವರ ಮಗ ನಿಶ್ಚಲ್ ಜೈನ್ ಹೆಸರು ಕೇಳಿ ಬಂದಾಗ ಅವರು ಮಾಧ್ಯಮಗೋಷ್ಠಿ ನಡೆಸಿ ಪ್ರಕರಣಕ್ಕೂ ನಿಶ್ಚಲ್‌ಗೂ ಸಂಬಂಧ ಇಲ್ಲ. ಆತ ಆ ಸಂದರ್ಭದಲ್ಲಿ ಉನ್ನತ ವಿದ್ಯಾಭ್ಯಾಸಕ್ಕಾಗಿ ಅಮೇರಿಕದ ನ್ಯೂಯಾರ್ಕ್‌ನಲ್ಲಿದ್ದ ಎಂದು ಆತನ ಟ್ರಾವೆಲ್ ಹಿಸ್ಟರಿ, ಪಾಸ್‌ಪೋರ್ಟ್, ವೀಸಾ ದಾಖಲೆಗಳನ್ನು ಬಹಿರಂಗಪಡಿಸಿದರಲ್ಲದೆ ನ್ಯೂಯಾರ್ಕ್‌ನಲ್ಲಿ ಆತ ನಡೆಸಿದ್ದಂತಹ ಹಣಕಾಸಿನ ವ್ಯವಹಾರಗಳ ದಾಖಲೆಗಳನ್ನೂ ನೀಡಿದ್ದರು. ಆದರೆ ಅಪಪ್ರಚಾರ ನಡೆಸುತ್ತಿದ್ದ ತಿಮರೋಡಿ ಮತ್ತವರ ತಂಡ ಆ ಸಂದರ್ಭದಲ್ಲಿ ಬಿಡುಗಡೆಗೊಳಿಸಲಾದಂತಹ ಅಧಿಕೃತ ದಾಖಲೆಗಳನ್ನೇ ನಕಲಿ ಎಂದು ಬಿಂಬಿಸಿ ಜನರನ್ನು ಮೋಸಗೊಳಿಸಲು ಯತ್ನಿಸುತ್ತಿತ್ತು. ಜನರು ಯಾವುದನ್ನು ನಂಬಬೇಕು ಮತ್ತು ಯಾವುದನ್ನು ನಂಬಬಾರದು ಎಂಬ ತೊಳಲಾಟದಲ್ಲಿದ್ದರು. ಈ ಮಧ್ಯೆ ಸಿಒಡಿ ತನಿಖೆ ನಡೆಯುತ್ತಿತ್ತು. ಅದರ ಕೇಂದ್ರ ಸ್ಥಾನ ಬೆಳ್ತಂಗಡಿಯ ಪ್ರವಾಸಿ ಮಂದಿರ ಆಗಿತ್ತು.


**ತಿಮರೋಡಿಗೆ ನೋಟಿಸು!**

ಸಿಒಡಿ ತನಿಖಾಧಿಕಾರಿ ಡಿವೈಎಸ್ಪಿ ರುದ್ರಮುನಿ ಅವರು ಬೆಳ್ತಂಗಡಿ ಪ್ರವಾಸಿ ಮಂದಿರದಲ್ಲಿ ಠಿಕಾಣಿ ಹೂಡಿದ್ದರು. ಅವರು ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದಂತಹ ಸೌಜನ್ಯ ನಾಪತ್ತೆ ದೂರು ನಂತರದ



ಎಸ್‌ಡಿಎಂ ಕಾಲೇಜ್ ಉಜಿರೆ

ಕೊಲೆ, ಅತ್ಯಾಚಾರ ಪ್ರಕರಣದ ಕಡತವನ್ನು ವಶಕ್ಕೆ ತೆಗೆದುಕೊಂಡು ಸೂಕ್ಷ್ಮವಾಗಿ ಕಾನೂನು ರೀತಿ ಗಮನಿಸಿದ್ದರು. ಪೊಲೀಸರು ಆ ಸಂದರ್ಭದಲ್ಲಿ ದಾಖಲಿಸಿದಂತಹ ಎಲ್ಲಾ ಹೇಳಿಕೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದರು. ಆರೋಪಿ ಸಂತೋಷ್‌ರಾವ್‌ನನ್ನು ಬಾಹುಬಲಿ ಬೆಟ್ಟದ ಕೆಳಗಡೆ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದ ಯುವಕರನ್ನು ವಿಚಾರಣೆಗೆ ಗುರಿಪಡಿಸಿದ್ದರು. ಘಟನೆ ನಡೆದ ಸ್ಥಳ ಮತ್ತು ಆಕೆ ಕಲಿಯುತ್ತಿದ್ದ ಎಸ್‌ಡಿಎಂ ಕಾಲೇಜಿನ ಅಧ್ಯಾಪಕರು, ಪ್ರಾಂಶುಪಾಲರು, ಆಕೆಯ ಸಹಪಾಠಿಗಳನ್ನು ಸೂಕ್ಷ್ಮವಾಗಿ ವಿಚಾರಿಸಿ ಮಾಹಿತಿ ಸಂಗ್ರಹಿಸಿದ್ದರು. ಆಕೆ ನಾಪತ್ತೆಯಾದ ದಿನ ಪ್ರಯಾಣಿಸಿದ್ದ ಬಸ್ಸಿನಲ್ಲಿ ಇದ್ದ ಕೆಲವು ವಿದ್ಯಾರ್ಥಿಗಳನ್ನು ವಿಚಾರಣೆ ನಡೆಸಿದ್ದರು. ಆಕೆಯ ಸಹಪಾಠಿಯೂ, ನೆರೆಕರೆಯ ವಿದ್ಯಾರ್ಥಿನಿಯೂ ಆಗಿದ್ದ ವರ್ಷಳನ್ನು ಆಕೆಯ ಮನೆಯಲ್ಲಿಯೇ ವಿಚಾರಿಸಿದ್ದರು. ಈ ಎಲ್ಲಾ ವಿಚಾರಣೆಯಿಂದ ಸೌಜನ್ಯ ಆಕೆ ಹತ್ಯೆಯಾದ ದಿನದಂದು ಅಂದರೆ ಅಕ್ಟೋಬರ್ 9,2012ರಂದು ಸಂಜೆ 4 ಗಂಟೆಯ ವೇಳೆಗೆ ಕಾಲೇಜಿನಿಂದ ಹೊರಟು ಕೆಎಸ್‌ಆರ್‌ಟಿಸಿ ಬಸ್ಸಿನ ಮೂಲಕ ಪ್ರಯಾಣಿಸಿ 4.15ರ ವೇಳೆಗೆ ಧರ್ಮಸ್ಥಳದ ಸ್ನಾನಘಟ್ಟದ ಬಳಿ ಇಳಿದಿರುವುದು ಖಚಿತವಾಗಿತ್ತು. ಆಕೆಯ ಜೊತೆಯಲ್ಲಿ ಪ್ರಯಾಣಿಸಿದ್ದ ವಿದ್ಯಾರ್ಥಿನಿ ಇದನ್ನು ಖಚಿತಪಡಿಸಿದ್ದಳು. ಸೌಜನ್ಯ ಬಸ್ ಇಳಿದು ಮಣ್ಣಸಂಕದ ಕಡೆಗೆ ತುಂತುರು ಮಳೆಯಲ್ಲಿ ಕೊಡೆ ಹಿಡಿದುಕೊಂಡು ಹೋಗಿದ್ದರೆ ಆಕೆಯ ಸ್ನೇಹಿತೆ ವಿರುದ್ಧ ದಿಕ್ಕಿನಲ್ಲಿ ಮನೆ ಕಡೆ ಹೋಗಿರುವುದು ಖಚಿತವಾಗಿತ್ತು. ಬೆಳ್ತಂಗಡಿ ಪೊಲೀಸರ ತನಿಖೆಯಲ್ಲೂ ಈ ವಿಚಾರ ಸ್ಪಷ್ಟವಾಗಿತ್ತು. ಆಕೆ ನಡೆದುಕೊಂಡು ಹೋಗುತ್ತಿದ್ದಾಗ ಎದುರಿನಿಂದ ಆಕೆಯ ಮಾವ ವಿಠಲಗೌಡ ಚಲಾಯಿಸಿಕೊಂಡು ಬರುತ್ತಿದ್ದ ಜೀಪು ಎದುರಿಗೆ ಸಿಕ್ಕಿತ್ತು. ಅದರಲ್ಲಿ ಆಕೆಯ ಚಿಕ್ಕಮ್ಮ ಯಶೋಧ ಮತ್ತು ಅವರ ಮನೆಯವರು ಇದ್ದರು. ವಿಠಲಗೌಡ ಅವರು ಸೌಜನ್ಯಳಿಗೆ ವಿಶ್ ಮಾಡಿದ್ದರು. ಈ ಅಂಶವನ್ನು ಬೆಳ್ತಂಗಡಿ ಪೊಲೀಸರು ತನಿಖೆಯ ಸಂದರ್ಭದಲ್ಲಿ ದಾಖಲಿಸಿದ್ದರು. ಇದನ್ನು ಪುನರ್ ಪರಿಶೀಲಿಸಿ ಸಂಬಂಧಪಟ್ಟವರನ್ನು ವಿಚಾರಣೆಗೆ ಒಳಪಡಿಸಿದಾಗ ಆ ವಿಚಾರಗಳು ನೈಜವಾದದ್ದು ಎಂಬ ಅಂಶ ಸ್ಪಷ್ಟವಾಗಿತ್ತು. ಆ ಸಂದರ್ಭದಲ್ಲಿ ಸಿಒಡಿ ಪೊಲೀಸರ ಮುಂದೆ ಇದ್ದದ್ದು ಆರೋಪಿ ಸಂತೋಷ್‌ರಾವ್ ಈ ಪ್ರಕರಣದಲ್ಲಿ ಭಾಗಿದಾರನೇ ಎಂಬ ಅಂಶವನ್ನು ಖಚಿತಪಡಿಸಿಕೊಳ್ಳಬೇಕಿತ್ತು.



ಸಂತೋಷ್‌ರಾವ್‌ನನ್ನು ಧರ್ಮಸ್ಥಳದ ಸಿಬ್ಬಂದಿಗಳು ಸೇರಿದಂತೆ ಸ್ಥಳೀಯ ಕೆಲವರು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದರು. ಆ ಸಂದರ್ಭದಲ್ಲಿ ಉದ್ರಿಕ್ತರು ಆತನ ಮೇಲೆ ಹಲ್ಲೆಯನ್ನು ನಡೆಸಿದ್ದರು. ಇದರಿಂದ ಆತನ ದೇಹದ ಮೇಲೆ ಹಲವು ಗಾಯಗಳಾಗಿತ್ತು. ಆತನನ್ನು ಮಂಗಳೂರಿನ ಕೆ.ಎಸ್. ಹೆಗ್ಡೆ ಮೆಡಿಕಲ್ ಕಾಲೇಜಿನ ಫಾರೆನ್ಸಿಕ್ ತಜ್ಞ ಡಾ. ಮಹಾಬಲೇಶ್ ಶೆಟ್ಟಿ ಅವರು ವೈಜ್ಞಾನಿಕವಾಗಿ ಪರೀಕ್ಷೆಗೆ ಒಳಪಡಿಸಿದ್ದರು. ಆ ಸಂದರ್ಭದಲ್ಲಿ ಸಂತೋಷ್‌ರಾವ್ ಪೊಲೀಸ್ ಕಸ್ಟಡಿಯಲ್ಲಿ ಇದ್ದ. ಆತನ ಮೈಮೇಲಿದ್ದ ಗಾಯಗಳನ್ನು ಡಾ. ಮಹಾಬಲೇಶ್ ಶೆಟ್ಟಿಯವರು ಸೂಕ್ಷ್ಮವಾಗಿ ಗಮನಿಸಿದ್ದರು ಮತ್ತು ಆತನಲ್ಲಿಯೇ ವಿಚಾರಿಸಿದ್ದರು. ಈ ಸಂದರ್ಭದಲ್ಲಿ ಸಂತೋಷ್‌ರಾವ್ ವೈದ್ಯರಲ್ಲಿ ಸೌಜನ್ಯ ಹತ್ಯೆಯಾದ ದಿನ ಏನೇನು ಆಯಿತು ಎಂಬುವುದನ್ನು ಸವಿವರವಾಗಿ ಹೇಳಿದ್ದ. ಈ ವಿಚಾರವನ್ನು ಸಿಒಡಿ ಅಧಿಕಾರಿಗಳು ಡಾ. ಮಹಾಬಲೇಶ್ ಶೆಟ್ಟಿಯವರನ್ನು ಮುಖತಃ ಭೇಟಿಯಾಗಿ ಖಚಿತಪಡಿಸಿಕೊಂಡಿದ್ದರು. ಸೌಜನ್ಯ ಮೃತದೇಹದ ಪೋಸ್ಟ್ ಮಾರ್ಟಂ ಮಾಡಿದ್ದಂತಹ ಡಾ. ಆದಂ ಮತ್ತು ಡಾ. ರಶ್ಮಿ ಅವರನ್ನೂ ಸಹ ಸಿಒಡಿ ಡಿವೈಎಸ್ಪಿ ರುದ್ರಮುನಿ ಅವರು ವಿಚಾರಣೆಗೆ ಒಳಪಡಿಸಿದರು. ಆ ಸಂದರ್ಭದಲ್ಲಿ ಗೊತ್ತಾದ ಸತ್ಯ ಏನೆಂದರೆ ಸೌಜನ್ಯಳ ಮೇಲೆ ಅತ್ಯಾಚಾರ ನಡೆದಿರಲಿಲ್ಲ, ಬದಲಾಗಿ ಲೈಂಗಿಕ ದೌರ್ಜನ್ಯ ನಡೆದಿತ್ತು. ಆಕೆಯ ಸಾವು ಆಕೆಯ ಕಾಲೇಜಿನ ಐಡಿಕಾರ್ಡ್‌ನ ಪಟ್ಟಿಯಿಂದಲೇ ಸಂಭವಿಸಿತ್ತು. ಐಡಿ ಕಾರ್ಡ್‌ನ ಪಟ್ಟಿಯನ್ನು ಹಿಡಿದು ವಿರುದ್ಧ ದಿಕ್ಕಿಗೆ ಎಳೆದೊಯ್ದ ಕಾರಣಕ್ಕಾಗಿ ಸುಮಾರು ಎರಡು ಇಂಚುಗಳಷ್ಟು ಆಳವಾದ ಗಾಯ ಕುತ್ತಿಗೆಯ ಭಾಗದಲ್ಲಿ ಸಂಭವಿಸಿತ್ತು ಮತ್ತು ಐಡಿ ಕಾರ್ಡ್‌ನ ಪಟ್ಟಿ ಗಾಯದೊಳಗೆ ಸಿಲುಕಿತ್ತು. ಅದನ್ನು ಆಗಿನ ಪುತ್ತೂರು ಎಎಸ್ಪಿ ಎಂ.ಎನ್. ಅನುಚೇತ್ ಅವರೇ ಬಿಡಿಸಿದ್ದರು ಎಂಬುದು ಖಚಿತವಾಗಿತ್ತು. ಸಿಒಡಿ ಡಿವೈಎಸ್ಪಿಯವರು ಮುಂದಿನ ತನಿಖೆಯ ದೃಷ್ಟಿಯಿಂದ ಸೌಜನ್ಯಳ ತಾಯಿ ಕುಸುಮಾವತಿಯವರಿಗೆ ನೋಟೀಸು ನೀಡಿ ವಿಚಾರಣೆಗೆ ಕರೆದರು. ಯಾಕೆಂದರೆ ಪೊಲೀಸರ ತನಿಖೆಯ ಸಂದರ್ಭದಲ್ಲಿ ಅವರು ಕುಸುಮಾವತಿಯವರ ಹೇಳಿಕೆಯನ್ನು ದಾಖಲಿಸಿರಲಿಲ್ಲ. ಆ ಸಂದರ್ಭದಲ್ಲಿ ಕುಸುಮಾವತಿಯವರ ಮಾನಸಿಕ ಸ್ಥಿತಿಯೂ ಮಗಳ ಸಾವಿನ ಹಿನ್ನೆಲೆಯಲ್ಲಿ ಸ್ಥಿರವಾಗಿರಲಿಲ್ಲ. ಆರೋಗ್ಯ ಸಮಸ್ಯೆಯೂ ಬಾಧಿಸಿದ್ದರಿಂದ ಉಜಿರೆಯ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಆದ್ದರಿಂದ ಆರಂಭದಲ್ಲಿ ತನಿಖೆ ನಡೆಸಿದಂತಹ ಇನ್ಸ್‌ಪೆಕ್ಟರ್ ಭಾಸ್ಕರ್ ರೈಯವರು ಕುಸುಮಾವತಿಯವರ ಹೇಳಿಕೆ ದಾಖಲಿಸಿಕೊಂಡಿರಲಿಲ್ಲ. ಆದರೆ ಸಿಒಡಿ ಪೊಲೀಸರ ತನಿಖೆಗೆ ಕುಸುಮಾವತಿಯವರ ಹೇಳಿಕೆ ಅಗತ್ಯವಾಗಿತ್ತು. ಮಗಳ ಆಂತರಿಕ ವಿಚಾರಗಳು ತಾಯಿಯಾದವಳಿಗೆ ಮಾತ್ರ ಗೊತ್ತಿರುತ್ತದೆ. ಆಕೆ ಧರಿಸಿದ್ದಂತಹ ಬಟ್ಟೆ ಬರೆಗಳು ಇತರ ವಸ್ತುಗಳನ್ನು ಆಕೆ ಮಾತ್ರ ಗುರುತಿಸಲು ಸಾಧ್ಯ. ಆಕೆಯ ದಿನನಿತ್ಯದ ಚಟುವಟಿಕೆಗಳು, ಸ್ವಭಾವ ಮೊದಲಾದ ಅಂಶಗಳನ್ನು ತಾಯಿಯಾದವಳು ಸೂಕ್ಷ್ಮವಾಗಿ ಗಮನಿಸಿರುತ್ತಾಳೆ. ಅಲ್ಲದೆ ಕೆಲವೊಂದು ಖಾಸಗಿ ವಿಷಯಗಳು ತಾಯಿ ಮಗಳ ಮಧ್ಯೆ ಚರ್ಚೆಗೆ ಒಳಪಡುತ್ತದೆ. ಈ ಎಲ್ಲಾ ಅಂಶಗಳು ಸೂಕ್ಷ್ಮವಾಗಿರುವಂತಹ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ತನಿಖೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಆದ್ದರಿಂದ ಕುಸುಮಾವತಿಯವರ ವಿಚಾರಣೆ ಸಿಒಡಿ ತನಿಖೆಯಲ್ಲಿ ಆದ್ಯತೆಯ ವಿಚಾರವಾಗಿತ್ತು. ಅದಕ್ಕಾಗಿಯೇ ಕುಸುಮಾವತಿಯವರಿಗೆ ಸಿಒಡಿ ಡಿವೈಎಸ್ಪಿಯವರು ನೋಟೀಸು ನೀಡಿ ಬೆಳ್ತಂಗಡಿ ಪ್ರವಾಸಿ ಮಂದಿರಕ್ಕೆ ಬಂದು ಭೇಟಿಯಾಗುವಂತೆ ಸೂಚನೆ ನೀಡಿದ್ದರು. ಅದರಂತೆ ಕುಸುಮಾವತಿಯವರು ಬೆಳ್ತಂಗಡಿ ಐಬಿಗೆ ಬಂದಿದ್ದರು. ಸಿಒಡಿ ಡಿವೈಎಸ್ಪಿಯವರ ಮುಂದೆ ಹಾಜರಾಗಿದ್ದರು. ಆಗ ಅವರು ಸಿಒಡಿ ಡಿವೈಎಸ್ಪಿಯವರ ಪ್ರಶ್ನೆಗಳನ್ನು ಕೇಳುವ ಮೊದಲೇ ತಾನು ಮನೆಯಲ್ಲಿಯೇ ಬರೆದು ತಂದಿದ್ದ ಕಾಗದವೊಂದನ್ನು ಅವರ ಮುಂದೆ ಇಟ್ಟರು. ಅಲ್ಲಿಗೇ ತನಿಖೆ ಮತ್ತೊಂದು ಹಂತಕ್ಕೆ ತಿರುಗಿತು.




ಮಹೇಶ್ ಶೆಟ್ಟಿ ತಿಮರೋಡಿ

(ಮುಂದುವರಿಯುವುದು...)

# ದೆಹಲಿ ಕೆಂಪು ಕೋಟೆ ಬಳಿ ಕಾರ್ ಬಾಂಬ್ ಸ್ಫೋಟ ಕುಕೃತ್ಯ!

9 ☞

ಇದೀಗ ತನಿಖಾಧಿಕಾರಿಗಳು ಅವರು ಹಾಗೂ ಅವರ ಸಂಪರ್ಕದಲ್ಲಿರುವ ಇತರೆ ಆರೋಪಿಗಳಿಗಾಗಿ ಶೋಧ ನಡೆಸಿಸಿದ್ದಾರೆ. ದೆಹಲಿ ಕ್ರೈಂ ಬ್ರಾಂಚ್‌ನ ಪೊಲೀಸರು ವಿವಿಯ ಕ್ಯಾಂಪಸ್‌ನ ಸಿಸಿಟಿವಿ ಫುಟೇಜ್ ಅನ್ನು



ಪರಿಶೀಲಿಸಿದ್ದಾರೆ.

ಕೆಂಪುಕೋಟೆ ಸ್ಫೋಟಕ್ಕೂ ಮುನ್ನ ಫರೀದಾಬಾದ್‌ನ ಎರಡು ಮನೆಯಲ್ಲಿ 2,900 ಕೆಜಿ ಸ್ಫೋಟಕ ವಶಕ್ಕೆ ಪಡೆದ ಪ್ರಕರಣದ ತನಿಖೆ ವೇಳೆ ಡಾ. ಮುಜಮ್ಮಿಲ್ ಹೆಸರು ಕೇಳಿಬಂದಿತ್ತು. ಈ ಮನೆಯನ್ನು ಮುಜಾಮಿಲ್ ಬಾಡಿಗೆಗೆ ಪಡೆದಿದ್ದ. ಅಚ್ಚರಿಯ ವಿಚಾರವೆಂದರೆ ಮುಜಮ್ಮಿಲ್, ವಿವಿಯ ಕ್ಯಾಂಪಸ್‌ನಲ್ಲಿ ಉಳಿದು ಕೊಂಡಿದ್ದರೂ ಆ ರೂಮ್ ಅನ್ನು ಬಾಡಿಗೆಗೆ ಪಡೆದುಕೊಂಡಿದ್ದ. ಆ ರೂಮ್‌ಗಳನ್ನು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿಡಲೆಂದೇ ಬಾಡಿಗೆಗೆ ಪಡೆಯಲಾಗಿತ್ತು ಎಂದು ತನಿಖಾಧಿಕಾರಿಗಳು ಈಗ ಹೇಳಿದ್ದಾರೆ. ಇನ್ನೂ, ಡಾ.ಶಹೀನಾ ಕಾರ್‌ನಲ್ಲಿ ಮದ್ದುಗುಂಡು ಇನ್ನು ಈ ಎರಡು ರೂಮ್‌ಗಳಲ್ಲದೆ ಅಲ್ ಫಲಾ ವಿವಿಯಲ್ಲಿ ಮುಜಮ್ಮಿಲ್‌ನ ಸಹೋದ್ಯೋಗಿ ಶಹೀನಾ ಶಹೀದ್ ಕಾರಿನಲ್ಲಿ ರೈಫಲ್‌ಗಳು ಮತ್ತು ಮದ್ದುಗುಂಡುಗಳನ್ನೂ ವಶಕ್ಕೆ ಪಡೆಯಲಾಗಿದೆ.

ಫರೀದಾಬಾದ್‌ನಲ್ಲಿ ಭಾರೀ ಸ್ಫೋಟಕಗಳನ್ನು ವಶಕ್ಕೆ ಪಡೆದ ಬಳಿಕ ಕೆಂಪು ಕೋಟೆ ಬಳಿ ಸ್ಫೋಟ ನಡೆಸಲಾಯಿತು. ತನಿಖೆ ವೇಳೆ ಉಗ್ರ ಉಮರ್ ಮೊಹಮ್ಮದ್ ಹೆಸರು ಬೆಳಕಿಗೆ ಬಂತು. ಅಲ್ ಫಲಾ ವಿವಿಯಲ್ಲಿ ಕೆಲಸ ಮಾಡುತ್ತಿದ್ದ ಉಮರ್ ಸದ್ಯ ವಶಕ್ಕೆ ಪಡೆದಿರುವ ಮುಜಮ್ಮಿಲ್‌ನ ಅತ್ಮೀಯನಾಗಿದ್ದಾನೆ. ಫರೀದಾಬಾದ್‌ನ ಮನೆ ಮೇಲೆ ದಾಳಿ ನಡೆಸಿದ ಬಳಿಕ ಉಗ್ರ ಉಮರ್ ಈ ಸ್ಫೋಟದ ಸಂಚು ರೂಪಿಸಿದ ಎಂದು ಹೇಳಲಾಗಿದೆ. ಈ ಎಲ್ಲರನ್ನೂ ವಿಚಾರಣೆ ಮಾಡಲಾಗುತ್ತಿದ್ದು, ಈ ಸ್ಫೋಟದ ರೂವಾರಿಗಳ ಹೆಸರು ಬಾಯಿ ಬಿಡಿಸಲು ಹರಸಾಹಸ ಪಡುತ್ತಿದ್ದಾರೆ, ತನಿಖಾಧಿ ಕಾರಿಗಳು!

**ಸುಮ್ಮನೆ ಬಿಡೋದಿಲ್ಲ....**

ಇನ್ನೂ, ಈ ಘಟನೆಯ ಬಗ್ಗೆ ವ್ಯಘ್ರರಾಗಿರುವ ಪ್ರಧಾನಿ ನರೇಂದ್ರ ಮೋದಿ ಅವರು 'ಈ ಸ್ಫೋಟಕ್ಕೆ ಕಾರಣಕರ್ತರಾದವರನ್ನು ಸುಮ್ಮನೆ ಬಿಡುವುದಿಲ್ಲ. ನಮ್ಮ ತನಿಖಾ ಸಂಸ್ಥೆಗಳು ಆಳದವರೆಗೆ ತನಿಖೆ ಮಾಡಿ ಸಂಚುಕೋರರನ್ನು ನ್ಯಾಯದ ಕಟಕಟೆಗೆ ಎಳೆದು ತರಲಿದೆ' ಎಂದು ಗುಡುಗಿದ್ದಾರೆ. ಭೂತಾನ್‌ನಲ್ಲಿ ಮಾಧ್ಯಮಗಳಿಗೆ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಅವರು ಬಹುಪಾಲು ಭಾಷಣವನ್ನು ಹಿಂದಿಯಲ್ಲೇ ಮಾಡಿದರು. ಆದರೆ ದಾಳಿ ಕೋರರನ್ನು ಸುಮ್ಮನೇ ಬಿಡಲ್ಲ ಎಂದು ಅವರು ಇಂಗ್ಲಿಷ್‌ನಲ್ಲಿ ಎಚ್ಚರಿಸಿದ್ದಾರೆ! ಈ ಹಿಂದೆ ಪಹಲ್ಗಾಂ ದಾಳಿ ಬಳಿಕ ಅವರು ಮಾತನಾಡಿದಾಗ ಎಂದಿನಂತೆ ಹಿಂದಿ ಬಳಸೋ ಬದಲು ಇಂಗ್ಲಿಷ್‌ನಲ್ಲಿ ಸಂದೇಶ ನೀಡಿದ್ದರು.



ಹೀಗಾಗಿ, ಸಂಚುಕೋರ ಪಾಕಿಸ್ತಾನಕ್ಕೆ ಹಾಗೂ ಅಂತಾರಾಷ್ಟ್ರೀಯ ಭಯೋತ್ಪಾದಕ ಸಮುದಾಯಕ್ಕೆ ಮೋದಿ ಪ್ರತೀಕಾರದ ಸಂದೇಶ ನೀಡಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ! ಇನ್ನೂ, ಕೇಂದ್ರ ಗೃಹ ಸಚಿವ ಅಮಿತ್ ಶಾ ಕೂಡಲೇ ಘಟನಾ ಸ್ಥಳಕ್ಕೆ ತೆರಳಿ ದಿಲ್ಲಿ ಪೊಲೀಸ್ ಮುಖ್ಯಸ್ಥರ ಜೊತೆ ಚರ್ಚಿಸಿ ಉನ್ನತ ಮಟ್ಟದ ತನಿಖೆಗೆ ಅದೇಶಿಸಿದ್ದಾರೆ.





ಭೂತನ್ ಪ್ರವಾಸದಲ್ಲಿದ್ದ ಮೋದಿಯವರು ಕೂಡಲೇ ದೆಹಲಿಗೆ ಹಿಂತಿರುಗಿದ್ದು, ಅವರು ಹಾಗೂ ಅಮಿತ್ ಶಾ ಸ್ಫೋಟದಲ್ಲಿ ಮೃತರಾದವರ ಕುಟುಂಬಕ್ಕೆ ಸಾಂತ್ವನ ಹೇಳಿ, ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರೋ ಗಾಯಾಳುಗಳನ್ನು ಸ್ವತಃ ಭೇಟಿ ಮಾಡಿ ಧೈರ್ಯ ತುಂಬಿದ್ದಾರೆ. ಈ ಘಟನೆಗೆ ಕಾರಣರಾಗಿರುವ ದುಷ್ಟರಿಗೆ ಬುದ್ಧಿ ಕಲಿಸದೇ ಬಿಡುವುದಿಲ್ಲ... ಎಂಬ ಮಾತನ್ನ ಅವರಿಗೆ ಪುನರ್ ಉಚ್ಚರಿಸಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಜೊತೆ ಮಾತುಕತೆ ನಡೆಸಿ ಇನ್ನೊಂದು ಆಪರೇಷನ್‌ಗೆ ಸಿದ್ದತೆ ನಡೆಸಲಾಗುತ್ತಿದೆ!!

ಪಹಲ್ಗಾಂ ದಾಳಿಯ ಬಳಿಕ ಭಾರತ 'ಆಪರೇಷನ್ ಸಿಂಧೂರ್' ನಡೆಸಿ ಪಾಕ್ ಹಾಗೂ ಪಾಕ್ ಬೆಂಬಲಿತ ಉಗ್ರರಿಗೆ ಸರಿಯಾಗಿ ಬುದ್ಧಿ ಕಲಿಸಿತ್ತು.ಅದಾದ ಬಳಿಕ ಎಲ್ಲವೂ ತಣ್ಣಗಾಯಿತು ಎಂದುಕೊಂಡು ನಿಟ್ಟುಸಿರು ಬಿಟ್ಟಿದ್ದ ಭಾರತೀಯರಿಗೆ ಈ ಘಟನೆಯಿಂದ ಭಾರಿ ಬೇಸರವಾಗಿದೆ. ಈ ಬೇಸರವನ್ನು ಹೋಗಲಾಡಿಸೋ ಕಾರ್ಯವನ್ನು ಮೋದೀಜಿ - ಟೀಮ್ ಅತಿ ತುರ್ತಾಗಿ ಮಾಡಬೇಕಿದೆ... ☯

# ಬಿಹಾರದ ಸೋಲಿಗೆ ಬೆಚ್ಚಿಬಿದ್ದ ರಾಜ್ಯ ಕೈ ನಾಯಕರು!

10 ☞

ಈ ರಾಜ್ಯಗಳಲ್ಲಿ ಮುಂದೆ ಮೇಲೆದ್ದು ಬರಬೇಕೆಂದರೆ ತಳಮಟ್ಟದಿಂದಲೇ ಪಕ್ಷವನ್ನು ಸಂಘಟಿಸುವುದು ಅನಿವಾರ್ಯವಾಗಿದೆ. ಈಗಾಗಲೇ ಬಹುತೇಕ ರಾಜ್ಯಗಳನ್ನು ಬಿಜೆಪಿ ಆವರಿಸಿಕೊಂಡಾಗಿದೆ. ಅದು ಅಲ್ಲಿನ ಸ್ಥಳೀಯ ಪಕ್ಷದ ಜತೆಗೆ ಮೈತ್ರಿ ಮಾಡಿಕೊಂಡು ನಿಧಾನವಾಗಿ ಅಸ್ತಿತ್ವ ಕಾಣುತ್ತಿದೆ. ಮಹಾರಾಷ್ಟ್ರ, ದೆಹಲಿ ಮತ್ತು ಬಿಹಾರದ ಚುನಾವಣೆಯಲ್ಲಿ ಕಾಂಗ್ರೆಸ್ ಜತೆಗೆ ಮೈತ್ರಿ ಮಾಡಿಕೊಂಡ ಪಕ್ಷಗಳೆಲ್ಲವೂ ನೆಲಕಚ್ಚಿದ್ದು, ಪ್ರಾದೇಶಿಕ ಪಕ್ಷಗಳನ್ನು ಅಪೋಶನ ಪಡೆದ ಆರೋಪ ಕಾಂಗ್ರೆಸ್ ಮೇಲಿದೆ. ಬಿಹಾರದ ಆರ್ ಜೆಡಿ ಪಕ್ಷದ ಸ್ಥಿತಿ ಏನಾಗಿದೆ ಎಂಬುದು ಈ ಬಾರಿಯ ಚುನಾವಣೆ ತೋರಿಸಿ ಕೊಟ್ಟಿದೆ. ಆದ್ದರಿಂದ ಮುಂದೆ ಬರಲಿರುವ ಕೆಲವು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಅಲ್ಲಿನ ಪ್ರಾದೇಶಿಕ ಪಕ್ಷಗಳು ಕಾಂಗ್ರೆಸ್ ಜತೆಗೆ ಮೈತ್ರಿ ಮುಂದುವರೆಸಲು ಒಪ್ಪಿಕೊಳ್ಳುತ್ತವೆಯಾ? ಎಂಬುದೇ ಮಿಲಿಯನ್ ಡಾಲರ್ ಪ್ರಶ್ನೆಯಾಗಿದೆ.

ಮುಂದಿನ ವರ್ಷ ತಮಿಳುನಾಡಿನಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದ್ದು. ಸದ್ಯದ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಮತ್ತು ಅಲ್ಲಿನ ಆಡಳಿತರೂಢ ಡಿಎಂಕೆ ಒಟ್ಟಾಗಿ ಲೋಕಸಭಾ ಚುನಾವಣೆಯನ್ನು ಎದುರಿಸಿವೆ. ಒಂದೊಳ್ಳೆಯ ಬಾಂಧವ್ಯ ಎರಡು ಪಕ್ಷದ ನಡುವೆ ಇದೆ.



ಆದರೆ ಬಿಹಾರ ಚುನಾವಣೆ ಬಳಿಕ ಇದೇ ಸ್ನೇಹ ಮುಂದಿನ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಮುಂದುವರೆಯುತ್ತಾ ಎಂಬುದು ಕೂಡ ಕುತೂಹಲ ಕೆರಳಿಸಿದೆ. ರಾಷ್ಟ್ರೀಯ ಪಕ್ಷವಾಗಿರುವ ಕಾಂಗ್ರೆಸ್ ಬಿಹಾರದಲ್ಲಿ ತಾನು ಮುಗ್ಗರಿಸಿದ್ದಲ್ಲದೆ, ಆರ್ ಜೆಡಿ ಪಕ್ಷವನ್ನು ಮುಳುಗಿಸಿದೆ ಎಂಬುದು ಜನವಲಯದಲ್ಲಿ ಕೇಳಿ ಬರುತ್ತಿರುವ ಆರೋಪವಾಗಿದೆ.

ಹಾಗೆನೋಡಿದರೆ ಚುನಾವಣೆಗಳಲ್ಲಿ ಸೋಲು ಆಗುವುದು ಕಾಂಗ್ರೆಸ್‌ಗೆ ಕಳೆದ ಒಂದೂವರೆ ದಶಕಗಳಿಂದ ಹೊಸತೇನಲ್ಲ, ಹೀಗಾಗಿ ರಾಹುಲ್ ಗಾಂಧಿ ಈ ವಿಚಾರದಲ್ಲಿ ವಿಚಲಿತರಾದಂತೆ ಕಾಣುತ್ತಿಲ್ಲ. ಸೋಲನ್ನು ಗಂಭೀರವಾಗಿ ಪರಿಗಣಿಸಿ ಪಕ್ಷವನ್ನು ಸಂಘಟಿಸುವ ಕೆಲಸ ಮಾಡುತ್ತಿರುವಂತೆಯೂ ಕಾಣಿಸುತ್ತಿಲ್ಲ. ಕೇವಲ ಆರೋಪ ಮಾಡಿಕೊಂಡು ತಿರುಗುವುದಷ್ಟೇ ಅವರಲ್ಲಿ ಕಾಣಿಸುತ್ತಿದೆ. ಆದರೀಗ ಬಿಹಾರ ಚುನಾವಣೆ ನಂತರ ಕರ್ನಾಟಕದಲ್ಲಿ ಆಗಲಿರುವ ಬೆಳವಣಿಗೆಯನ್ನು ಹೇಗೆ ನಿಭಾಯಿಸುತ್ತಾರೆ ಎನ್ನುವುದೇ ಎಲ್ಲರಲ್ಲಿರುವ ಕುತೂಹಲವಾಗಿದೆ.

ರಾಜ್ಯದಲ್ಲಿ ಸಿಎಂ ಅಧಿಕಾರದ ಹಸ್ತಾಂತರ ವಿಚಾರ ಸುದ್ದಿಯಲ್ಲಿದೆ. ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ಬೆಂಬಲಿಗರು ಈ ವಿಚಾರದಲ್ಲಿ ಆಗಾಗ್ಗೆ ತಮ್ಮ ಹೇಳಿಕೆಗಳನ್ನು ನೀಡುವುದು ಮಾಮೂಲಿಯಾಗಿದೆ. ಬಿಹಾರ ಚುನಾವಣೆ ಸೋಲಿನ ನಂತರ ಅಧಿಕಾರ ಹಸ್ತಾಂತರ ವಿಚಾರಕ್ಕೆ ರಾಹುಲ್ ಗಾಂಧಿ ಮುಂದಾಗುವುದಿಲ್ಲ. ಹೀಗಾಗಿ ಸಿದ್ದರಾಮಯ್ಯ ಅವರೇ ಪೂರ್ಣಾವಧಿಯ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಾರೆ ಎನ್ನುವುದು ಕೆಲವರ ವರಸೆಯಾದರೆ, ಮತ್ತೆ ಕೆಲವರು ಅಧಿಕಾರ ಹಸ್ತಾಂತರ ಮಾಡದೆ ಹೋದರೆ ಭಿನ್ನಮತ ಸ್ಫೋಟಗೊಂಡು ಅಧಿಕಾರದ ಮೇಲೆ ಪರಿಣಾಮ ಬೀರಬಹುದು. ಹೀಗಾಗಿ ರಾಜ್ಯಕ್ಕೆ ನವೆಂಬರ್ ತಿಂಗಳಾಂತ್ಯಕ್ಕೆ ಆಗಮಿಸಲಿರುವ ರಾಹುಲ್ ಗಾಂಧಿ ಅವರು ಒಂದು ಸೂಕ್ತ ನಿರ್ಧಾರಕ್ಕೆ ಬರಬಹುದು ಎಂದು ಹೇಳುತ್ತಿದ್ದಾರೆ.

ಒಟ್ಟಾರೆ ಬಿಹಾರದ ಚುನಾವಣೆ ಕಾಂಗ್ರೆಸ್ ಮೇಲೆ ಪರಿಣಾಮ ಬೀರಿದ್ದಂತು ನಿಜ. ಅದರ ಮುಂದಿನ ಗಂಭೀರತೆ ಹೇಗಿರುತ್ತದೆ ಎಂಬುದನ್ನು ಕಾಂಗ್ರೆಸ್ ನಾಯಕರು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಬಿಹಾರದ ತಮ್ಮ ಸೋಲನ್ನು ಮತಗಳ್ಳತನದ ಆರೋಪ ಮಾಡಿ ನುಣುಚಿಕೊಳ್ಳುವುದರಿಂದ ಪ್ರಯೋಜನವೇನು ಇಲ್ಲ, ಸೋಲನ್ನು ಒಪ್ಪಿಕೊಂಡು ಮುಂದಿನ ಚುನಾವಣೆಗೆ ಹೇಗೆ ತಯಾರಾಗಬೇಕು ಎಂಬುದರತ್ತ ನಾಯಕರು ಚಿತ್ತ ಹರಿಸಬೇಕಾಗಿದೆ... ಅದನ್ನು ಮಾಡದೆ ಹೋದರೆ ಕಾಂಗ್ರೆಸ್‌ಗೆ ಉಳಿಗಾಲವಿಲ್ಲ. ☯

# ಕನಕಪುರ ಕಂದಾಯ ಇಲಾಖೆಯ ಆರ್‌ಐ ತಂಗರಾಜು, ವಿಎ ಚಂದ್ರೇಗೌಡ ಲೋಕಾಯುಕ್ತ ಬಲೆಗೆ!



ಲೋಕಾ ಬಲೆಗೆ ಬಿದ್ದ ಆರ್‌ಐ ಎಸ್. ತಂಗರಾಜ್

ಬೆಂ. ದಕ್ಷಿಣ

✍ ಶಾಂತರಾಜು ಜಿ. ಕಲ್ಲಹಳ್ಳಿ

**ಕ**ರ್ನಾಟಕ ರಾಜ್ಯ ಸರ್ಕಾರದ ಉಪ ಮುಖ್ಯ ಮಂತ್ರಿಗಳಾದ ಡಿ.ಕೆ. ಶಿವಕುಮಾರ್ ಪ್ರತಿನಿಧಿಸುವ ತವರು ಕ್ಷೇತ್ರ ಕನಕಪುರ ಇಲ್ಲಿನ ಕಂದಾಯ ಇಲಾಖೆಗೆ ಪ್ರತಿ ತಿಂಗಳಿಗೊಮ್ಮೆ ಬಗರ್‌ಹುಕುಂ ಸಾಗುವಳಿ ಸಮಿತಿ ಅಧ್ಯಕ್ಷರಾದ ಡಿ.ಕೆ. ಸುರೇಶವರವರು ಭೇಟಿ ನೀಡಿ ಹಲವಾರು ಸಭೆಗಳನ್ನು ನಡೆಸುತ್ತಿದ್ದು, ತಾಲ್ಲೂಕಿನಾದ್ಯಂತ ಸಾರ್ವಜನಿಕರು, ರೈತಾಪಿ ವರ್ಗದವರ ಸಮಸ್ಯೆಗಳನ್ನು ಡಿ.ಕೆ. ಸುರೇಶ್‌ರವರ ಬಳಿ ಹೇಳಿಕೊಂಡಾಗ ಎಷ್ಟೋ ಸಮಸ್ಯೆಗಳಿಗೆ ಪರಿಹಾರ ಸ್ಥಳದಲ್ಲೇ ಮಾಡಿಕೊಟ್ಟಿದ್ದಾರೆ. ಸಭೆಯಲ್ಲಿ ಎಲ್ಲಾ ಅಧಿಕಾರಿಗಳಿಗೂ ರೈತರು, ಸಾರ್ವಜನಿಕರನ್ನು ತಾಲ್ಲೂಕು ಕಚೇರಿಗೆ ಅಲೆದಾಡಿಸಬೇಡಿ, ಲಂಚಕ್ಕೆ ಬೇಡಿಕೆ ಇಡಬೇಡಿ, ಎಲ್ಲರಿಗೂ ನ್ಯಾಯ ಸಮ್ಮತವಾಗಿ ಕೆಲಸ ಮಾಡಿಕೊಡಿ, ಅಧಿಕಾರಿ ವರ್ಗದವರು



ಕನಕಪುರದ ತಾಲ್ಲೂಕು ಕಚೇರಿ

ಯಾರದಲ್ಲಾದರು ಲಂಚಕ್ಕೆ ಬೇಡಿಕೆ ಇಟ್ಟಾಗ ನೇರವಾಗಿ ನಮಗೆ ತಿಳಿಸಿ ಎಂದು ಅಧಿಕಾರಿಗಳ ಮುಂದೆಯೇ ಹೇಳಿರುವ ನಿದರ್ಶನಗಳುಂಟು. ಹೀಗಿರುವಾಗ ತಾಲ್ಲೂಕಿನ ಕಸಬಾ ಆರ್‌ಐ (ಕಂದಾಯ ರಾಜಸ್ವ ನಿರೀಕ್ಷಕರು) ಎಸ್.



ಆರ್‌ಐ ಕಚೇರಿಯಲ್ಲಿ ಲೋಕಾ ದಾಳಿ

ತಂಗರಾಜ್ ಮತ್ತು ವಿಎ (ಗ್ರಾಮ ಲೆಕ್ಕಾಧಿಕಾರಿ) ಚಂದ್ರೇಗೌಡ ಹಾಗೂ ಡಾಟಾ ಎಂಟ್ರಿ ಆಪರೇಟರ್ ಉಮೇಶ್ ಈ ಮೂರು ಅಧಿಕಾರಿಗಳು ಕೆಲವು ಜಮೀನುಗಳ ಖಾತಾ ವಿಚಾರದಲ್ಲಿ ಭ್ರಷ್ಟಾಚಾರ ಮಾಡುವುದಲ್ಲದೇ ಲಂಚಕ್ಕೆ ಬೇಡಿಕೆಗಳಿಟ್ಟು ಜನರ ಬಳಿ ಸುಲಿಗೆ ಮಾಡುತ್ತಿದ್ದಾರೆ. ಇತ್ತೀಚೆಗೆ ಅಂದರೆ ಸುಮಾರು ಮೂರು ವರ್ಷಗಳ ಹಿಂದೆ ಕನಕಪುರ ತಾಲ್ಲೂಕಿನ



ಕಚೇರಿ ಮುಂದೆ ಕಂದಾಯ ಇಲಾಖಾಧಿಕಾರಿಗಳು ನೆರೆದಿರುವುದು

ಕಸಬಾ ಹೋಬಳಿಯ ಚಿಕ್ಕಮುದುವಾಡಿ ಗ್ರಾಮದ ಜಮೀನಿನ ಪೌತಿಖಾತೆ ಮಾಡಿಕೊಡುವಂತೆ ಅರ್ಜಿ ಸಲ್ಲಿಸಿದ್ದರೂ ಸಹ ಖಾತೆ ಮಾಡಿಕೊಡಲು ವಿಳಂಬ ಮಾಡಲಾಗಿತ್ತು.

ಪ್ರತಿನಿತ್ಯ ಖಾತೆ ಮಾಡಿಕೊಡುವಂತೆ ವಿಎ (ಗ್ರಾಮಲೆಕ್ಕಿಗ) ಚಂದ್ರೇಗೌಡ ಮತ್ತು ಆರ್‌ಐ (ರಾಜಸ್ವ ನಿರೀಕ್ಷಕ) ಎಸ್. ತಂಗರಾಜ್‌ರ ಬಳಿ ಬಂದು ಪೌತಿಖಾತೆ ಮಾಡಿಕೊಡಲು ಒಪ್ಪುವುದೇ ಇಲ್ಲ. ಇದಾದ ನಂತರ ಏನಾದರೂ ವಿಚಾರಯಿದ್ದರೆ ತಿಳಿಸಿ, ನಮ್ಮನ್ನು ಅಲೆದಾಡಿಸಬೇಡಿ ಎಂದು ಕೇಳಿದಾಗ, ಆರ್‌ಐಎಸ್ ತಂಗರಾಜ್ ಮತ್ತು ವಿಎ ಚಂದ್ರೇಗೌಡ, ಡಾಟಾ ಎಂಟ್ರಿ ಆಪರೇಟರ್ ಉಮೇಶ್‌ರವರುಗಳು ಸೇರಿ ಖಾತೆಗೆ ಅಲೆದಾಡುತ್ತಿದ್ದ ವ್ಯಕ್ತಿಗೆ ಸುಮಾರು 5 ಲಕ್ಷ ರೂಪಾಯಿಗಳಿಗೆ ಬೇಡಿಕೆಯಿಡುತ್ತಾರೆ. ಅದರಂತೆಯೇ ಮುಂಗಡವಾಗಿ 2 ಲಕ್ಷ ರೂಪಾಯಿ ಕೊಟ್ಟು, ಮುಂದಿನ ದಿನದಲ್ಲಿ ಉಳಿಕೆ ಹಣ ಅಂದರೆ 3 ಲಕ್ಷ ರೂ. ಕೊಡುವುದಾಗಿ ಮಾತುಕತೆ



ಲೋಕಾಯುಕ್ತ ಎಸ್ಪಿ ಸ್ನೇಹಾ



ಕನಕಪುರ ತಹಶೀಲ್ದಾರ್ ಎಂ. ಸಂಜಯ್

ನಡೆಸಿದ್ದು, ಪೌತಿಖಾತೆಗೆ ಅಲೆದಾಡಿ ಮಾತುಕತೆ ನಡೆಸಿ ಲಂಚ ಕೊಟ್ಟಿದ್ದ ವ್ಯಕ್ತಿ ತಾಲ್ಲೂಕಿನ ಕಸಬಾ ಹೋಬಳಿಯ ಅರಳಿಗುಡ್ಡೆ ತಾಂಡ್ಯದ ನಿವಾಸಿ ಬಲರಾಮ ನಾಯ್ಕ ಬೆಂಗಳೂರು ದಕ್ಷಿಣ ಜಿಲ್ಲೆಯ ಲೋಕಾಯುಕ್ತ ಕಚೇರಿಗೆ ತೆರಳಿ ನಡೆದ ವಿಷಯದ ಬಗ್ಗೆ ದೂರು ಕೊಡಲಾಗಿ, ಪೌತಿಖಾತೆಗೆ ಉಳಿಕೆ ಹಣ ಕೊಡವ ಸಂದರ್ಭದ ದಿನಾಂಕ 12-11-2025ರ ಬುಧವಾರ ಸಂಜೆ 5 ಗಂಟೆಯ ಸಮಯದಲ್ಲಿ, ಬೆಂಗಳೂರು ದಕ್ಷಿಣ ಜಿಲ್ಲಾ ಲೋಕಾಯುಕ್ತ ಎಸ್ಪಿ ಸ್ನೇಹಾರವರ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಶಿವಪ್ರಕಾಶ್ ನೇತೃತ್ವದಲ್ಲಿ ಸಿಪಿಐ ಅಧಿಕಾರಿಗಳಾದ ವಿಜಯ್‌ಕುಮಾರ್, ಸಂದೀಪ್‌ಕುಮಾರ್, ಸಿಬ್ಬಂದಿಗಳಾದ ಲಕ್ಷ್ಮಿ, ಸೌಮ್ಯ, ಭಾಗ್ಯಮ್ಮ, ವಸಂತ, ರಮ್ಯಾ, ರಘು, ವೆಂಕಟೇಶ್ ರವರುಗಳು ಸರ್ಕಾರಿ ನೌಕರರ ಸಂಘದ ಕಚೇರಿಯ ಪಕ್ಕದಲ್ಲಿರುವ ಆರ್‌ಐ (ರಾಜಸ್ವ ನಿರೀಕ್ಷಕರ) ಕಚೇರಿಯಲ್ಲಿ ದೂರುದಾರ 2 ಲಕ್ಷ ರೂ. ಹಣ ಕೊಡವ ಸಂದರ್ಭದಲ್ಲಿ ದಿಢೀರ್ ದಾಳಿ ನಡೆಸಿದ ಲೋಕಾಯುಕ್ತ ಅಧಿಕಾರಿಗಳ ತಂಡ ಆರ್‌ಐ ಎಸ್. ತಂಗರಾಜ್, ವಿಎ ಚಂದ್ರೇಗೌಡ ಮತ್ತು ಡಾಟಾ ಎಂಟ್ರಿ ಆಪರೇಟರ್ ಉಮೇಶ್‌ನನ್ನು ಸ್ಥಳದಲ್ಲೇ ಲಂಚದ ಹಣದ ಸಮೇತ ಹಿಡಿದು ಬಂಧಿಸಿದ್ದು, ನಂತರ ಆರ್‌ಐ ಕಚೇರಿಯಲ್ಲಿದ್ದ ಕೆಲವು ದಾಖಲೆಗಳ ಕಡತಗಳನ್ನು ವಶಕ್ಕೆ ಪಡೆದು, ನಂತರ ಆರ್‌ಐ ಎಸ್. ತಂಗರಾಜ್‌ರವರ ಇನ್ನೋವಾ ಕಾರ್ ಹತ್ತಿರ ಬಂದ ಲೋಕಾಯುಕ್ತ ಅಧಿಕಾರಿಗಳು, ಕಾರಿನಲ್ಲಿ ಕಂತೆ ಕಂತೆ ನೋಟುಗಳು ಸಿಕ್ಕಿದ್ದು, ಅದನ್ನು ನೋಡಿದ ಆರ್‌ಐ ತಂಗರಾಜ್ ಬೆಬ್ಬಿ ಬೆರಗಾಗಿ ನಿಂತದ್ದು ನೋಡಿದರೆ ಮತ್ತು ದಿನನಿತ್ಯ ಅದೆಷ್ಟು ಸಾವಿರ ಲಂಚ ಪಡೆಯುತ್ತಿದ್ದರೋ ಎಂಬುದು ಸಾರ್ವಜನಿಕರಲ್ಲಿ ಪ್ರಶ್ನೆ ಕಾಡುತ್ತಿದೆ. ಲೋಕಾಯುಕ್ತ ಅಧಿಕಾರಿಗಳು ಸ್ಥಳದಲ್ಲೇ ಬೆಳಗಿನ ಜಾವ 5ರ ಸಮಯದವರೆವಿಗೂ ಕಾರ್ಯಾಚರಣೆ ನಡೆಸಿದ್ದು, ಅಷ್ಟರಲ್ಲಿ ಲೋಕಾಯುಕ್ತ ಅಧಿಕಾರಿಗಳು ವಿಎ ಚಂದ್ರೇಗೌಡ ಅವರ ತೋಕತಿಮ್ಮನದೊಡ್ಡಿಯಲ್ಲಿರುವ ಮನೆಯ ಮೇಲೆ ದಾಲಿ ನಡೆಸಿದ್ದು ಮತ್ತು ಆರವಐ ವಾಸವಿರುವ ಬೆಂಗಳೂರಿನ ಕತ್ರಿಗುಪ್ಪೆಯಲ್ಲಿನ ಮನೆಯಲ್ಲಿಯೂ ದಾಳಿ ನಡೆಸಿ ಕೆಲವು ದಾಖಲೆಗಳನ್ನು ಕಲೆ ಹಾಕಿದ್ದಾರೆ. ಕನಕಪುರದ ಕಚೇರಿಯಲ್ಲಿ ದಾಳಿ ನಡೆಯುತ್ತಿದ್ದಂತೆ, ಆರ್‌ಐ ತಂಗರಾಜ್ ಹಾಗೂ ವಿಎ ಚಂದ್ರೇಗೌಡರ ಮನೆಗಳಿಗೆ ವಿಷಯ ತಿಳಿದು ಮನೆಗಳಲ್ಲಿ ಬದೋ ಬಸ್ತ್ ಮಾಡಿಕೊಂಡಿರಬಹುದು





ಆರ್‌ಐ ಕಾರ್ ಪರಿಶೀಲನೆ ನಡೆಸುತ್ತಿರುವ ಲೋಕಾ ಅಧಿಕಾರಿಗಳು



ವಿಎ ಚಂದ್ರೇಗೌಡ ಮನೆ


ಎಂದು ಸಾರ್ವಜನಿಕ ವಲಯದಲ್ಲಿ ಮಾತುಗಳು ಕೇಳಿಬರುತ್ತಿವೆ. ಆರ್‌ಐ ಎಸ್. ತಂಗರಾಜ್ ವಾಸಿಸುವ ಮನೆ ಅಪಾರ್ಟ್ ಮಂಟ್, ದಾಳಿ ನಡೆಸಿರುವುದು ಕತ್ರಿಗುಪ್ಪೆ ನಿವಾಸದಲ್ಲಿ ಈ ವಿಚಾರದಲ್ಲಿ ಹಲವಾರು ಅನುಮಾನಗಳು ಉದ್ಭವವಾಗುತ್ತವೆ.

ಇದಾದ ನಂತರ ಕನಕಪುರದ ಪ್ರಗತಿಪರ ಸಂಘಟನೆಗಳು, ಸಾಮಾಜಿಕ ಹೋರಾಟಗಾರರು, ರೈತ ಸಂಘದ ಪದಾಧಿಕಾರಿಗಳಾದ ಕುಮಾರಸ್ವಾಮಿ, ಚೀಲೂರು ಮುನಿರಾಜುರವರುಗಳು ಸೇರಿ ಭ್ರಷ್ಟ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಸುದ್ದಿಗೋಷ್ಠಿ ನಡೆಸಿ ಆಗ್ರಹಿಸಿದರು. ಕನಕಪುರ ತಾಲ್ಲೂಕು ಕಚೇರಿ ಭ್ರಷ್ಟರಿಂದ ತುಂಬಿ ಹೋಗಿದೆ. ಲಂಚ ನೀಡದೇ ಜನ ಸಾಮಾನ್ಯರ ಯಾವುದೇ ಕೆಲಸಗಳು ಮಾಡಿಕೊಡುತ್ತಿಲ್ಲ. ಗ್ರಾಮಲೆಕ್ಕಾಧಿಕಾರಿಗಳು ಸೇರಿದಂತೆ ಕಂದಾಯ ನಿರೀಕ್ಷಕರು ಸರ್ಕಾರಿ ಕಚೇರಿಗಳಲ್ಲಿ ಕುಳಿತು ಕೆಲಸ ಮಾಡುತ್ತಿಲ್ಲ. ಕಚೇರಿಯ ಸಮಯದಲ್ಲಿ ಖಾಸಗಿ ಕಟ್ಟಡಗಳಲ್ಲಿ ತಮ್ಮ ಕಚೇರಿಯ ಕೆಲಸಗಳನ್ನು ಮಾಡುತ್ತಿದ್ದು, ಈ ಬಗ್ಗೆ ಜಿಲ್ಲಾಧಿಕಾರಿಗಳು ಸೇರಿದಂತೆ ಉನ್ನತ ಅಧಿಕಾರಿಗಳಿಗೆ ದೂರು ನೀಡಿದರೂ ಅವರ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ. ತಾಲ್ಲೂಕಿನ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿ ವಾಸವಾಗಿರಬೇಕೆಂಬ ನಿಯಮವಿದ್ದರೂ ಸರ್ಕಾರದ ಆದೇಶವನ್ನು ಉಲ್ಲಂಘಿಸಿ ತಾಲ್ಲೂಕು ಜನರ ರಕ್ತ ಹೀರುತ್ತಿದ್ದಾರೆ. ಲೋಕಾಯುಕ್ತ ಅಧಿಕಾರಿಗಳ ಬಲೆಗೆ ಬಿದ್ದಿರುವ (ಕಂದಾಯ ರಾಜಸ್ವ ನಿರೀಕ್ಷಕ) ಆರ್‌ಐ ಎಸ್. ತಂಗರಾಜ್ ಮತ್ತು ವಿಎ ಚಂದ್ರೇಗೌಡರ ಅಕ್ರಮಗಳು ನೂರಾರಿವೆ. ಇಂತಹವರ ವಿರುದ್ಧ ಹಲವಾರು ಸಂಘಟನೆಗಳು ಪ್ರತಿಭಟನೆ ನಡೆಸಿದ್ದರೂ ಈ ಭ್ರಷ್ಟ ಅಧಿಕಾರಿಗಳನ್ನು ಪಟಭದ್ರ ಹಿತಾಸಕ್ತಿಗಳು ರಕ್ಷಣೆ ಮಾಡುತ್ತಿರುವುದು ನಾಚಿಕೆಗೇಡಿನ ಸಂಗತಿ ಮತ್ತ ಈ ಭ್ರಷ್ಟ ಅಧಿಕಾರಿಗಳ ಸಮಸ್ತ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಏನೇ ಆದರೂ ಲೋಕಾಯುಕ್ತ ದಾಳಿಯಲ್ಲಿ ಬಲೆಗೆ ಬಿದ್ದಿರುವ ಆರ್‌ಐ ಎಸ್. ತಂಗರಾಜ್ ಮತ್ತು ವಿಎ ಚಂದ್ರೇಗೌಡರ ಕಚೇರಿಯಲ್ಲಿ ದಾಳಿ ವೇಳೆ ಸಿಕ್ಕ ಲಂಚದ ಹಣ ಮತ್ತು ಕೆಲವು ದಾಖಲೆಗಳನ್ನು ಹಾಗೂ ಕೆಲವು ವಿಚಾರಣೆಯಲ್ಲಿ ಸಿಕ್ಕಿರುವ ಮಾಹಿತಿಯ ಬಗ್ಗೆ ಪರಿಶೀಲನೆ ನಡೆಸಿ ಈ ಭ್ರಷ್ಟ ಅಧಿಕಾರಿಗಳಿಗೆ ಕಾನೂನಿನ ರೀತಿ ಕ್ರಮ ಜರುಗಿಸುವರೇ ಲೋಕಾಯುಕ್ತ ಅಧಿಕಾರಿಗಳು ಕಾದು ನೋಡಬೇಕಿದೆ.



ರೈತ ಸಂಘ ಚೀಲೂರು ಮುನಿರಾಜು, ಸಾಮಾಜಿಕ ಕಾರ್ಯಕರ್ತ ಕುಮಾರಸ್ವಾಮಿ (ಹೋರಾಟಗಾರರು)


ಕರ್ನಾಟಕ ಸರ್ಕಾರ
ಕರ್ನಾಟಕದ ನವ ನಿರ್ಮಾಣಕ್ಕೆ
ಗ್ಯಾರಂಟಿ ಸರ್ಕಾರ
ಪ್ರಜ್ವಲಿಸುತ್ತಿದೆ
೭೦ರ ದೀಪ
ಮಾಡೋಣ
ಕನ್ನಡ ಕಟ್ಟುವ
ಸಂಕಲ್ಪ!
ರಾಜ್ಯೋತ್ಸವದ ಈ ದಿನ, ನಮ್ಮ ನಾಡಿನ ಇತಿಹಾಸ, ಸಂಸ್ಕೃತಿ ಮತ್ತು ವೈವಿಧ್ಯತೆಯನ್ನು ಮನದುಂಬಿ ಆಚರಿಸೋಣ.
ಕನ್ನಡ ಭಾಷೆ, ಕಲೆ ಮತ್ತು ನೆಲದ ಬಗ್ಗೆ ಹೆಮ್ಮೆ ಪಡುತ್ತಾ, ಸಮೃದ್ಧ ಕರ್ನಾಟಕ ನಿರ್ಮಾಣಕ್ಕೆ ಕೈಜೋಡಿಸೋಣ.
ನಾಡಿನ ಸಮಸ್ತ ಜನತೆಗೆ
೭೦ನೇ ಕನ್ನಡ ರಾಜ್ಯೋತ್ಸವದ ಶುಭಾಶಯಗಳು
ಶಕ್ತಿ
ಅನ್ನಭಾಗ್ಯ
ಗೃಹ ಜ್ಯೋತಿ
ಗೃಹಲಕ್ಷ್ಮಿ
ಯುವನಿಧಿ
ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು
- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ
CMofKarnataka
https://dipr.karnataka.gov.in
ಕರ್ನಾಟಕ ವಾರ್ತೆ

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 POSTED AT BANGALORE PSO BG 560026 Every Tuesday Publishing Date : 16.11.2025

# ಜನುಮ ಜನುಮದ ಅನುಬಂಧ...

ಟೈಟಲ್ ಕಾರ್ಡ್ ನೋಡಿ ಇದೇನಪ್ಪ ಸಾಕ್ಷಾತ್ಕಾರ ಸಾಂಗ್ ಹಾಕವ್ರೆ ಅಂತ ಕನ್ಫ್ಯೂಸ್ ಆಗಬೇಡಿ. ಸಿಂಪಲ್ ಸುನಿ ನ್ಯೂ ಪಿಕ್ಚರ್ 'ಗತವೈಭವ' ಕೂಡ ಒಂಥರಾ ಹಾಗೆಯೇ ಇದೆ. ಜನುಮ ಜನುಮದ ಅನುಬಂಧ.... ಯಸ್, ಇದು ಪುನರ್ ಜನ್ಮದ ಲವ್ ಸ್ಟೋರಿ. ಒಂದಲ್ಲ ಎರಡಲ್ಲ...ನಾಲ್ಕು ಜನುಮದ ಲವ್ ಸ್ಟೋರಿ! ನಾಯಕ ದುಷ್ಯಂತ್ ನಾಯಕಿ ಆಶಿಕಾ ರಂಗನಾಥ್ ಅವರದ್ದು ನಾಲ್ಕು ಜನುಮಗಳಲ್ಲೂ ನಾಲ್ಕು ತರಹದ ಭಿನ್ನ ಪಾತ್ರ. ಹೀಗಾಗಿ, ಈ ಜೋಡಿ ಚತುರ್ಥ ಪಾತ್ರ ಎಂದರೆ ತಪ್ಪಾಗದು....

ಯುಗ ಯುಗಗಳೆ ಕಳೆದರೂ ಪ್ರೀತಿಯ ಮೌಲ್ಯ ಒಂದೇ. ಅದಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಇಲ್ಲಿ ನಾಲ್ಕು ಜನ್ಮ ಎತ್ತುವ ಪ್ರೇಮಿಗಳು ಶಾಪಗ್ರಸ್ಥರಾಗಿ ಇನ್ನೊಂದು ಜನ್ಮ ಎತ್ತುವ, ನಂತರ ಮತ್ತೊಂದು ಜನ್ಮ... ಪುಣ್ಯಕ್ಕೆ ಮನುಷ್ಯರಾಗಿಯೇ ಜನ್ಮ ತಳೆಯುವ ಇವರು ಪ್ರತಿ ಜನ್ಮದಲ್ಲೂ ಸಂಧಿಸುವುದು, ಪ್ರೇಮಿಸುವುದು ದೈವ ಸಂಕ್ಷಿಲ್ಪ. ಇದನ್ನು ನಾಲ್ಕು ಕಾಲಘಟ್ಟಗಳಲ್ಲಿ ಚಿತ್ರಿಸಿರುವುದು ಸುನಿ ಅವರ ಸಾಧನೆ. ಇಂತಹ ಸಿನಿಮಾಗೆ ಕೋಟಿ ಕೋಟಿ ಸುರಿದಿರುವ ನಿರ್ಮಾಪಕರ ಧೈರ್ಯವನ್ನ ಮೆಚ್ಚಬೇಕು!

ಈಗಿನ ಮಡಿಕೇರಿಯಲ್ಲಿ ತೋಟಗಾರಿಕೆ ಇಲಾಖೆಯಲ್ಲಿ (ಆರ್ಟಿಕಲ್ಚರ್ ಡಿಪಾರ್ಟ್‌ಮೆಂಟ್) ಕೆಲಸ ಮಾಡುವ ಆಶಿಕಾ ಒಮ್ಮೆ ಫೇಸ್‌ಬುಕ್‌ನಲ್ಲಿ ಓರ್ವ ವ್ಯಕ್ತಿಯ ಚಿತ್ರವನ್ನು ನೋಡಿ ವಿಸ್ಮಿತಳಾಗುತ್ತಾರೆ. ಅತನನ್ನು ಎಲ್ಲೋ ನೋಡಿದ ನೆನಪು ಕಾಡುತ್ತ, ಆ ಚಿತ್ರವನ್ನು ಬಿಡಿಸುತ್ತಾರೆ.

ಈ ಚಿತ್ರ ವೈರಲ್ ಆಗಿ ವಿಎಫ್‌ಎಸ್ ಸ್ಟುಡಿಯೋದಲ್ಲಿ ಟೆಕ್ಕಿಯಾಗಿದ್ದ ದುಷ್ಯಂತ ನೋಡಿ ಬೆರಗಾಗುತ್ತಾನೆ. ಯಾಕೆಂದ್ರೆ ಅದು ಇವನ ತದ್ರೂಪ. ಈತ ಆಶಿಕಾಳನ್ನ ಹುಡುಕುತ್ತ ಸಾಗುತ್ತಾನೆ. ಇದರ ನಡುವೆ ಸಮುದ್ರ ಮಂಥನ... ವಾಸುಕಿ ವೈಭವ... ಹಾಲಿನ ಸಮುದ್ರದಲ್ಲಿ ಸರ್ಪ ಕಾಳಗ... ಸುರ ಅಸುರರ ಆರ್ಭಟ... ಅರಮನೆಯಲ್ಲಿ ರಾಜಕುಮಾರಿ ಹಾಗೂ ರಾಕ್ಷಸನ ನಡುವೆ




ಪ್ರೇಮ. ಇದಕ್ಕೆ ಋಷಿಮುನಿಯ ಶಾಪ ತಟ್ಟಿ ದೊಡ್ಡ ಅನಾಹುತ ಎದುರಾಗುತ್ತದೆ. ಸತ್ತು ಪೋರ್ಚುಗಲ್‌ನಲ್ಲಿ ಜನ್ಮ ತಾಳುವ ಜೋಡಿ, ಅಲ್ಲಿಂದ ವಾಸ್ಕೊಡಗಾಮ ಮೂಲಕ ಮೂಲಕ ಭಾರತಕ್ಕೆ ಸಾಗಿ ಬರುವಾಗ ಸಮಸ್ಯೆಗೆ ಸಿಲುಕಿ ಮತ್ತೆ ದುರಂತ...

ನಂತರ ಕರಾವಳಿಯಲ್ಲಿ ಜನ್ಮ ತಳೆದು ಇಲ್ಲಿನ ಕಂಬಳ ಸಂಸ್ಕೃತಿ ಯಲ್ಲಿ ಮೀಯುತ್ತಾರೆ. ನಾಟಿ ವೈದ್ಯರ ಮಗಳು ಮಂಗಳ ಆಗಿ ಮಿಂಚುವ ಆಶಿಕಾಳನ್ನು ಕೋಣ ಪಳಗಿಸೋ ದುಷ್ಯಂತ ಪ್ರೇಮಿಸುವುದು... ಈ ಪ್ರೇಮಕ್ಕೆ 'ವ್ಯಾಧಿ' ಅಡ್ಡಿ ಬರೋದು...ಮುಂದೇನು? ಅನ್ನೋದಕ್ಕೆ ಕ್ಲೈಮ್ಯಾಕ್ಸ್‌ನಲ್ಲಿ ಸಿಗುತ್ತೆ ಉತ್ತರ! ನಾಲ್ಕು ಜನ್ಮದ ಕತೆಯನ್ನು ಒಂದಕ್ಕೊಂದು ಬೆಸೆದು ಪ್ರೇಮ ಚಿತ್ತಾರ ಮೂಡಿಸುವಲ್ಲಿ ಸುನಿ ಗೆದ್ದಿದ್ದಾರೆ. ಒಟ್ಟಾರೆ, ಎಲ್ಲೂ ಬೋರ್ ಹೊಡೆಸದ ವಿಶಿಷ್ಟ ಪ್ರೇಮ ಕಥಾನಕ ಈ ಗತ ವೈಭವ... ಈ ಚಿತ್ರವನ್ನು ನೋಡ್ತಾ ನೋಡ್ತಾ ಬೇರೊಂದು ಲೋಕಕ್ಕೆ ಹೋಗಿ ಬಂದ ಅನುಭವ ಆಗದಿದ್ರೆ, ಕೇಳಿ! ☯

# ನಕ್ಕು ನಗಿಸುವ 'ಗಿಲ್ಲಿ' ನಟನ ವಿದಾಯದ ಭಾಷಣ!



ಬಿಗ್‌ಬಾಸ್ ಕನ್ನಡ ಸೀಸನ್ 12ರ ಪ್ರಮುಖ ಸ್ಪರ್ಧಿ ಗಿಲ್ಲಿ ನಟ, ಬಿಗ್ ಬಾಸ್ ಮನೆಯ ಮುಖ್ಯ ದ್ವಾರದ ಬಳಿ ನಿಂತು ವಿದಾಯದ ಮಾತುಗಳನ್ನಾಡಿದ್ದಾರೆ! ಸಹ ಸ್ಪರ್ಧಿಗಳಾದ ಕಾವ್ಯಾ ಶೈವ, ಸ್ಪಂದನಾ ಮತ್ತು ಧನುಷ್ ಅವರೊಂದಿಗಿನ ಈ ತಮಾಷೆ ವಿಡಿಯೋ ಭಾರಿ ವೈರಲ್ ಆಗಿದ್ದು, ಸಾಕ್ಷಾತ್ 'ಗಿಲ್ಲಿ' ಫಿನಾಲೆ ತಲುಪುವ ಬಗ್ಗೆ ಸೋಶಿಯಲ್ ಮೀಡಿಯಾದಲ್ಲಿ ಚರ್ಚೆ ನಡೆಯುತ್ತಿದೆ!

ಸ್ವಿಮ್ಮಿಂಗ್ ಪೂಲ್‌ನಲ್ಲಿ ಕಾವ್ಯಾ ಶೈವ ಮತ್ತು ಸ್ಪಂದನಾ ಸೋಮಣ್ಣ ಸ್ವಿಮ್ ಮಾಡುತ್ತಿದ್ದಾಗ, ಬಿಗ್‌ಬಾಸ್ ಮನೆಯ ಮುಖ್ಯದ್ವಾರದ ಬಳಿ ನಿಂತ ಗಿಲ್ಲಿ ನಟ, ಗಾರ್ಡನ್ ಏರಿಯಾದಲ್ಲಿರುವ ಎಲ್ಲಾ ಸ್ಪರ್ಧಿಗಳನ್ನು ಕರೆಯುತ್ತಾ ತಮಾಷೆಯಾಗಿ ಬೈ ಬೈ ಹೇಳುತ್ತಾರೆ. ಕಾವು ನಾನು ಮನೆಯಿಂದ ಹೋಗುತ್ತೇನೆ ಎಂದು ಗಿಲ್ಲಿ ನಟ ಹೇಳುತ್ತಾರೆ.

ಇದೀಗ ಮನೆಯಿಂದ ಹೊರಗೆ ಹೋಗುವ ಸಂದರ್ಭದ ಮಾತುಗಳನ್ನು ಗಿಲ್ಲಿ ನಟ ಹೇಳಿದ್ದಾರೆ. ಯಾಕೆ ಏನು ಅಂತ ಕೇಳಬೇಡಿ. ಗಿಲ್ಲಿ ತಮಾಷೆ ಅಂದ್ರೆ, ಇವೆಲ್ಲಾ ಇರುತ್ತವೆ! ಬಿಗ್‌ಬಾಸ್ ಮನೆಯಿಂದ ಹೊರಗೆ ಹೋಗುವಾಗ ಕೊನೆಯಲ್ಲಿ ಏನು ಹೇಳ್ತಿಯಾ... ಪ್ರಿನ್ಸಿಪಾಲ್ ರಘು ಮತ್ತು ಕಾವ್ಯ ಕೇಳುತ್ತಾರೆ. ಈ ಪ್ರಶ್ನೆ ಕೇಳುತ್ತಿದ್ದಂತೆ ಗಿಲ್ಲಿ ಒಂಥರಾ ಮುಖ ಮಾಡಿಕೊಂಡು, ತಮ್ಮ ವಿದಾಯದ ಮಾತುಗಳನ್ನು ತಮಾಷೆಯಾಗಿ ಹೇಳಲು ಆರಂಭಿಸುತ್ತಾರೆ.

'ಐ ಲವ್ ಯು ಬಿಗ್‌ಬಾಸ್. ಈ ಏಳೆಂಟು ವಾರದ ನೆನಪುಗಳನ್ನು ನನ್ನಿಂದ ಮರೆಯೋಕೆ ಆಗಲ್ಲ. ಇಂತಹ ಒಳ್ಳೆಯ ಕ್ಷಣ ನೀಡಿದ ನಿಮಗೆ ಥ್ಯಾಂಕ್ ಯು. ಆಚೆ ನಿಮಗೋಸ್ಕರ ಕಾಯುತ್ತಿರುತ್ತೇನೆ. ಫಿನಾಲೆ ಮುಗಿಸ್ಕೊಂಡು ಬನ್ನಿ. ಎಲ್ಲರೂ ಒಂದೆಡೆ ಸೇರೋಣ. ಕಾವು, ಗೊತ್ತು ಗೊತ್ತಿಲ್ಲದೇ ನಾನು ಲೈನ್ ಕ್ರಾಸ್ ಮಾಡಿದ್ರೆ ಬೇಜಾರು ಆಗಬೇಡ... ಕಳ್ಳಪುಟ್ಟಿ ಅಂತ ಹೆಸರಿಟಿದ್ದಕ್ಕೆ ಸ್ಪಂದನಾ ನೀನು ಬೇಸರ ಆಗಬೇಡ.... ಏನಾದ್ರು ಅಂದಿದ್ರೆ, ಧನು ಅಣ್ಣಾ ನೀನು ಬೇಸರ ಮಾಡಿಕೊಳ್ಳಬೇಡ. ಕಾವು ನೀನು ಫಿನಾಲೆಯಲ್ಲಿ ಕಪ್ ಹಿಡಿಯೋದನ್ನು ನಾನು ನೋಡಬೇಕು... ಎಂದು ಗಿಲ್ಲಿ ನಟ ಹೇಳುತ್ತಾರೆ.



ಗಿಲ್ಲಿ ನಟ ಇಷ್ಟೆಲ್ಲಾ ಮಾತನಾಡುತ್ತಿರುವಾಗ ಮುಖ್ಯದ್ವಾರದ ಬಳಿಗೆ ಧಾವಿಸಿ ಬರುವ ಧನುಷ್, ಹೋಗಬೇಡ ಬಾ ಎಂದು ಎಳೆಯುತ್ತಾರೆ. ಆಗ ಗಿಲ್ಲಿ, ನಮ್ಮ ಚಂದ್ರಣ್ಣ ಹೋಗಿದ್ದಾರೆ...ನಾನು ಹೋಗಿ ಕೋಳಿ ಫಾರಂ ತೆರೆಯಬೇಕು ಎಂದು ತಮಾಷೆ ಮಾಡುತ್ತಾ ಮುಖ್ಯದ್ವಾರದ ಸಮೀಪ ಹೋಗುತ್ತಾರೆ! ಆಗ ರಘು ಅವರು ನಗುತ್ತಾ ಬಿಗ್ ಬಾಸ್ ನಿಜವಾಗಿಯೂ ಬಾಗಿಲು ಓಪನ್ ಮಾಡಿ ನಿನ್ನನ್ನು ಹೊರಗೆ ಎಳೆದುಕೊಳ್ಳಬೇಕು ನೋಡು ಎಂದು ಹೇಳುತ್ತಾರೆ!

ಹೀಗೆ ತರ್ಲೆ ಮಾಡಿ ಇಡೀ ಬಿಗ್ ಬಾಸ್ ಮನೆಯಲ್ಲಿ ನಗೆ ಬುಗ್ಗೆ ಉಕ್ಕಿಸುತ್ತಿದ್ದಾರೆ ಗಿಲ್ಲಿ ನಟ! ಈ ಮನುಷ್ಯ ಇಲ್ಲಿವರೆಗೆ ಬಂದಿರೋದೇ ಹೆಚ್ಚುಗಾರಿಕೆ, ಇನ್ನು ಫಿನಾಲೆವರೆಗೂ ಇರುತ್ತಾರ ಅನ್ನೋದೇ ಡೌಟ್! ಸೋಶಿಯಲ್ ಮೀಡಿಯಾದಲ್ಲಿ ನೋಡಿದ್ರೆ, 'ಗಿಲ್ಲಿ'ಯೇ ಹಾಟ್ ಹೀರೋ....!! ☯

# ದಿ ಟಾಸ್ಕ್ ಟ್ರೇಲರ್ ಮಾಡಿದ ಮೋಡಿಗೆ 200 ಟಾಕೀಸ್ ಫಿದಾ!

ಸ್ಟಾರ್ ನಟರಿಗೆ ಸಂಕಷ್ಟ, ಕನ್ನಡ ಸಿನಿಮಾಗಳು ಬರ್ತಿಲ್ಲ ಅನ್ನೋರಿಗೆ ಉತ್ತರವಾಗಿ ಮೊನ್ನೆ ಶುಕ್ರವಾರ ಹೊಸಬರದ್ದೇ ಎಳೆಂಟು ಚಿತ್ರಗಳು ತೆರೆ ಕಂಡಿವೆ. ನಾಳೆ ನವೆಂಬರ್ 21ಕ್ಕೆ ಮತ್ತೆ ಏಳು ಸಿನಿಮಾ ರಿಲೀಸ್ ಆಗುತ್ತಿವೆ! ಒಂದಕ್ಕಿಂತ ಒಂದು ಭಿನ್ನ ವಿಭಿನ್ನ. ಯಾವ ಚಿತ್ರಕ್ಕೆ ಥೀಯೇಟರ್ ಕೊಡೋದು ಅನ್ನೋದೇ ದೊಡ್ಡ ಸಮಸ್ಯೆಯಾಗಿದೆ ವಿತರಕರಿಗೆ. ಇಂಥ ಸಂದರ್ಭದಲ್ಲಿ ಪ್ರದರ್ಶಕರೆ ಮುಂದೆ ಬಂದು ನಮ್ಮ ಚಿತ್ರಮಂದಿರಕ್ಕೆ ನಿಮ್ಮ ಸಿನಿಮಾ ಕೊಡಿ ಅಂತ ಕೇಳಿದ್ರೆ, ಅದೆಷ್ಟು ಖುಷಿ ಆಗಲ್ಲ ಹೇಳಿ! ಇಂತಹದ್ದೊಂದು ಅದೃಷ್ಟ ಸಿಕ್ಕಿರೋದು 'ದಿ ಟಾಸ್ಕ್' ಸಿನಿಮಾಗೆ! ಯಾಕೆಂದ್ರೆ, ಈ ಚಿತ್ರದ ಟ್ರೇಲರ್ ಹುಟ್ಟಿಸಿದ್ದ ಕುತೂಹಲ! ಅದನ್ನು ನೋಡಿ ಫಿದಾ ಆಗಿದ್ದ ಪ್ರದರ್ಶಕರು ಸಿನಿಮಾ ಪ್ರದರ್ಶನ ಮಾಡಲು ಅತ್ಯಂತ ಉತ್ಸುಕರಾಗಿದ್ದಾರೆ!

ಕರ್ನಾಟಕ ರಾಜ್ಯದಾದ್ಯಂತ ಸುಮಾರು 200 ಚಿತ್ರಮಂದಿರಗಳಲ್ಲಿ 'ಟಾಸ್ಕ್' ನೋಡ (ಆಡ)ಬಹುದಾಗಿದೆ! ಮಲ್ಟಿಪ್ಲೆಕ್ಸ್‌ಗಳ ಬಗ್ಗೆ ಹೇಳಬೇಕು ಅಂದ್ರೆ, ಬೆಂಗಳೂರು ಮಹಾನಗರ ಒಂದರಲ್ಲೇ ನೂರು ಚಿಲ್ಲರೆ ಸ್ಕ್ರೀನ್ ಇದ್ದಾವೆ. ಈ ಎಲ್ಲಾ ಕಡೆ 'ದಿ ಟಾಸ್ಕ್' ತೆರೆ ಕಾಣುತ್ತಿದೆ. ಮೊದಲೇ ತಿಳಿಸಿದಂತೆ ಇದು ರಾಘು ಶಿವಮೊಗ್ಗ ನಿರ್ದೇಶನದ ಸಿನಿಮಾ! ಜೈ ಸೂರ್ಯಸಾಗರ್ ಯುವಕರ ಜುಗಲ್ಬಂಧಿ ಗೇಮ್! ಪಾಲಿಟಿಕ್ಸ್....ವಿಡಿಯೋ... ಡೀಲ್...ಪೊಲೀಸ್... ಚೇಸ್... ಕಿಲ್ಲಿಂಗ್... ಫೈಟಿಂಗ್... ಟೋಟಲಿ ಕುತೂಹಲ ಭರಿತ ಚಿತ್ರಕತೆ!! ನವೆಂಬರ್ 21ಕ್ಕೆ ಇನ್ನು ಮೂರೇ ದಿನಗಳಿವೆ...!!! ☯




Vol. 41 No. 24 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666 policenewsreporter@gmail.com
http//policenews.news https://www.facebook.com/profile.php?id=61579674874846 https://www.instagram.com/police_news?igsh=MWJ6bHJwZDRmZDc1aQ==